ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 1 ಬುಧವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 340 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಇನ್ನು ದುಬಾರಿ ದುನಿಯಾ...!

ವಿದ್ಯುತ್, ಟೋಲ್, ಆಸ್ತಿ, ನೀರು, ಎಲ್‌ಪಿಜಿ, ವಹಿವಾಟು ಹೀಗೆ ಇಂದಿನಿಂದ ದರ ಏರಿಕೆ ಬರೆ!



ಬೆಂಗಳೂರು, ಮಾ.31– ಇನ್ನು ಮುಂದೆ ದುಬಾರಿ ದುನಿಯಾ... ವಿದ್ಯುತ್, ನೀರು, ಟೋಲ್ ದರ, ಆಸ್ತಿ ತೆರಿಗೆ ಏರಿಕೆ ಜೊತೆಗೆ ವಾಹನ ಉಪಕರವನ್ನೂ ಪಾವತಿಸಬೇಕಿದೆ. ಬ್ಯಾಂಕಿಂಗ್ ಸೇರಿದಂತೆ ಹಣಕಾಸು ನಿಯಂತ್ರಣಕ್ಕೆ ಸಂಬಂಧಿಸಿದ ಹಲವಾರು ನಿಯಮಗಳ ಬದಲಾವಣೆಗಳೂ ನಾಗರಿಕರ ದೈನಂದಿನ ಬದುಕಿನ ಮೇಲೆ ನೇರ ಪರಿಣಾಮ ಬೀರುವ ಸಾಧ್ಯತೆ ನಿಚ್ಚಳವಾಗಿದೆ.

ವಿದ್ಯುತ್ ದರ: ಹೊಸ ಆರ್ಥಿಕ ವರ್ಷದ ಮೊದಲ ದಿನ ಏಪ್ರಿಲ್ 1ರಿಂದ ರಾಜ್ಯದಲ್ಲಿ ವಿದ್ಯುತ್ ದರ ಪ್ರತಿ ಯೂನಿಟ್‌ಗೆ 40ರಿಂದ 50 ಪೈಸೆ ಹೆಚ್ಚಳವಾಗಲಿದ್ದು, ಮಹಾನಗರ ಪಾಲಿಕೆಗಳು ಈಗಾಗಲೇ ನೀರಿನ ದರ ಏರಿಕೆಯನ್ನು ಅಧಿಕೃತವಾಗಿ ಪ್ರಕಟಿಸಿವೆ. ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇ ಸೇರಿದಂತೆ ರಾಜ್ಯದ ಪ್ರಮುಖ ಹೆದ್ದಾರಿಗಳಲ್ಲಿ ವಾರ್ಷಿಕ ಪರಿಷ್ಕರಣೆ ಪರಿಣಾಮ ಟೋಲ್ ದರ ಶೇ.3ರಿಂದ 5ರಷ್ಟು ಏರಿಕೆಯಾಗಲಿದೆ. ಆಸ್ತಿ ತೆರಿಗೆಯನ್ನು ಕನಿಷ್ಠ ಶೇ.3ರಷ್ಟು ಹೆಚ್ಚಿಸಲು ನಿರ್ಧರಿಸಲಾಗಿದೆ. ಜೊತೆಗೆ ಪಾಲಿಕೆ ವ್ಯಾಪ್ತಿಯಲ್ಲಿರುವ ಪ್ರತಿ ಮನೆಗಳಿಗೆ ಮೋಟಾರ್ ವಾಹನ ಉಪಕರ ವಿಧಿಸಲು ತೀರ್ಮಾನಿಸಲಾಗಿದೆ.

ಇನ್ನಿತರ ಪ್ರಮುಖ ಬದಲಾವಣೆಗಳು: ನೂತನ ಆರ್ಥಿಕ ವರ್ಷಾರಂಭದೊಂದಿಗೆ ದೇಶದಲ್ಲಿ ಹಲವು ಪ್ರಮುಖ ಬದಲಾವಣೆಗಳಾಗಲಿದೆ. ಬ್ಯಾಂಕಿಂಗ್, ಇಂಧನ, ತೆರಿಗೆ ಮತ್ತು ಪ್ರಯಾಣ ಕ್ಷೇತ್ರಗಳಲ್ಲಿ ಹಲವಾರು ನಿಯಮಗಳು ಜಾರಿಗೆ ಬರಲಿವೆ. ಆದಾಯ ತೆರಿಗೆ ಕಾಯ್ದೆ 2025 ಜಾರಿಗೆ ಬರಲಿದ್ದು, ನೂತನ ಕಾನೂನು ಪದಪ್ರಯೋಗಗಳನ್ನು ಸರಳಗೊಳಿಸಲಿದೆ. ಸ್ವಲ್ಪ ಗೊಂದಲಕ್ಕೆ ಕಾರಣವಾಗುವ ಅಸೆಸ್‌ಮೆಂಟ್ ಇಯರ್ ಮತ್ತು ಪ್ರೀವಿಯಸ್ ಇಯರ್ ಪದಗಳ ಬದಲಿಗೆ 'ಟ್ಯಾಕ್ಸ್ ಇಯರ್' ಒಂದೇ ಪದವನ್ನು ಇನ್ನು ಮುಂದೆ ಬಳಸಲಾಗುತ್ತದೆ.



ನೂತನ ಆದಾಯ ತೆರಿಗೆ ಕಾನೂನಿನ ಪ್ರಕಾರ, ವರ್ಷಕ್ಕೆ 12 ಲಕ್ಷ ರೂ.ವರೆಗೆ ಸಂಪಾದಿಸುವ ವ್ಯಕ್ತಿಗಳು ಯಾವುದೇ ತೆರಿಗೆ ಪಾವತಿಸಬೇಕಾಗಿಲ್ಲ. ಫಾರ್ಮ್ 16 ಮತ್ತು ಫಾರ್ಮ್ 16ಎ ಸ್ಥಾನಗಳನ್ನು ಕ್ರಮವಾಗಿ ಫಾರ್ಮ್ 130 ಮತ್ತು ಫಾರ್ಮ್ 131 ವಹಿಸಿಕೊಳ್ಳುತ್ತವೆ. ಸುಗಮ ಅನುಸರಣೆಗೆ ಉತ್ತೇಜನ ನೀಡಲು ಹಾಗೂ ತೆರಿಗೆ ಪಾವತಿ ವಿವರಗಳ ಸಲ್ಲಿಕೆಗೆ ಸ್ಪಷ್ಟತೆ ನೀಡಲು ವೇಳಾಪಟ್ಟಿಯಲ್ಲಿ ತಿದ್ದುಪಡಿ ತರಲಾಗುತ್ತದೆ. ಆದಾಯ ತೆರಿಗೆ ಇಲಾಖೆಯು ಪಾನ್ ಕಾರ್ಡ್ ಅರ್ಜಿಗಳಲ್ಲಿ ಜನ್ಮ ದಿನಾಂಕದ ಪುರಾವೆಯಾಗಿ ಆಧಾರ್ ಕಾರ್ಡ್ ಜೊತೆಗೆ ಹತ್ತನೇ ತರಗತಿ ಪ್ರಮಾಣಪತ್ರ, ಪಾಸ್‌ಪೋರ್ಟ್ ಮುಂತಾದ ದಾಖಲೆ ನೀಡುವುದು ಕಡ್ಡಾಯವಾಗಲಿವೆ. ■ 6ನೇ ಪುಟಕ್ಕೆ

ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ವೇ ಸೇರಿದಂತೆ ದೇಶಾದ್ಯಂತ ಟೋಲ್‌ನಲ್ಲಿ ಇಂದಿನಿಂದ ನಗದು ಸ್ವೀಕಾರ ಬಂದ್; ಫಾಸ್ಟ್ಯಾಗ್, ಯುಪಿಐಗೆ ಮಾತ್ರ ಅವಕಾಶ



ಮಂಡ್ಯ, ಮಾ.31– ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ವೇ ಸೇರಿದಂತೆ ದೇಶಾದ್ಯಂತ ಹೆದ್ದಾರಿಗಳಲ್ಲಿ ಸಂಚರಿಸುವ ಪ್ರಯಾಣಿಕರಿಗೆ ಟೋಲ್‌ನಲ್ಲಿ ಫಾಸ್ಟ್ಯಾಗ್, ಇಲ್ಲವೇ ಯುಪಿಐ ಇದ್ದರೇ ಮಾತ್ರ ಅವಕಾಶ. ಏ.1 (ಇಂದಿನಿಂದ) ನಗದು ಸ್ವೀಕಾರವನ್ನು ಕಡ್ಡಾಯವಾಗಿ ರದ್ದುಗೊಳಿಸಲಾಗಿದೆ.

ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ವೇ: ದಿನನಿತ್ಯ ಸಾವಿರಾರು ವಾಹನಗಳು ಮೈಸೂರಿಂದ ಬೆಂಗಳೂರಿಗೆ ಹಾಗೂ ಬೆಂಗಳೂರಿಂದ ಮೈಸೂರಿಗೆ ಸಂಚರಿಸುತ್ತವೆ. ಮೈಸೂರು, ಮಂಡ್ಯ, ಬೆಂಗಳೂರು ದಕ್ಷಿಣ ಜಿಲ್ಲೆ ಮಾರ್ಗವಾಗಿ ಕೆಂಗೇರಿ ಬಳಿ ಎಕ್ಸ್‌ಪ್ರೆಸ್ ವೇ ಮಾರ್ಗ ಮುಕ್ತಾಯವಾಗುತ್ತದೆ. ಈ ಮಾರ್ಗದಲ್ಲಿ 2 ಟೋಲ್ ಇದ್ದು, ಶ್ರೀರಂಗಪಟ್ಟಣ ತಾಲೂಕಿನ ಗಣಂಗೂರು ಬಳಿ ಒಂದು ಟೋಲ್ ಆದರೆ ಮತ್ತೊಂದು ಬೆಂಗಳೂರು ಜಿಲ್ಲೆಯ ಕೆಂಗೇರಿ ಸಮೀಪದ ಕಣಮಿಣಿಕೆ ಟೋಲ್ ಆಗಿದೆ. ಈ ಎರಡು ಟೋಲ್‌ನಲ್ಲಿ ಫಾಸ್ಟ್ಯಾಗ್, ಯುಪಿಐ ಇದ್ದವರಿಗೆ ಮಾತ್ರ ಸಂಚರಿಸಲು ಅವಕಾಶವಿದೆ. ಈ ಬಗ್ಗೆ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಎಕ್ಸ್‌ಪ್ರೆಸ್ ವೇ ■ 6ನೇ ಪುಟಕ್ಕೆ

ಮೈಸೂರು ಪಾಲಿಕೆ ವ್ಯಾಪ್ತಿ ನೀರಿನ ಶುಲ್ಕ, ಆಸ್ತಿ ತೆರಿಗೆ ಪರಿಷ್ಕರಣೆ; ಉಪಕರ ಸಂಗ್ರಹಕ್ಕೂ ಕೈ ಹಾಕಿದ ಪಾಲಿಕೆ

ಮೈಸೂರು, ಮಾ.31(ಪಿಎಂ)– ಮೈಸೂರು ನಗರದ ಜನಜೀವನ ಇನ್ನು ದುಬಾರಿಯಾಗಲಿದೆ. ನೀರಿನ ಶುಲ್ಕ, ಆಸ್ತಿ ತೆರಿಗೆ ಏರಿಕೆಯ ಬರೆ ಜೊತೆಗೆ ವಿವಿಧ ಉಪಕರ ಹೇರುವ ಮೂಲಕ ನಾಗರಿಕರ ಮೇಲೆ ಭಾರೀ ಹೊರೆ ಹಾಕಲು ಮೈಸೂರು ಮಹಾನಗರ ಪಾಲಿಕೆ ಮುಂದಾಗಿದೆ.



ಪೌರಾಡಳಿತ ನಿರ್ದೇಶನಾಲಯದ ನಿರ್ದೇಶನದಂತೆ ಗೃಹ ಬಳಕೆಯ ನೀರಿನ ಶುಲ್ಕ ಹೆಚ್ಚಿಸಿದ್ದು, ಆಸ್ತಿ ತೆರಿಗೆಯನ್ನೂ ಪರಿಷ್ಕರಿಸಿದೆ. ಇದಲ್ಲದೆ, ಉಪಕರ ಸಂಗ್ರಹಕ್ಕೂ ಪಾಲಿಕೆ ಕೈ ಹಾಕಿದ್ದು, ಏ.1ರಿಂದ ಹೊಸ ವ್ಯವಸ್ಥೆ ಜಾರಿಯಾಗಲಿವೆ. ಮೈಸೂರು ಮಹಾನಗರ ಪಾಲಿಕೆಯು ಏ.1ರಿಂದ ಜಾರಿಗೆ ಬರುವಂತೆ ಗೃಹಬಳಕೆಯ ನೀರಿನ ದರವನ್ನು ಪರಿಷ್ಕರಿಸಿದೆ. ನೀರಿನ ಬಳಕೆಯ ಸ್ಲಾಬ್‌ನಲ್ಲಿ ಪ್ರತಿ ತಿಂಗಳ ಕನಿಷ್ಠ ದರವು 163 ರೂ. ನಿಗದಿ ಮಾಡಿದ್ದು, 25 ಸಾವಿರ ಲೀಟರ್‌ವರೆಗಿನ ಬಳಕೆಗೆ ಅನ್ವಯಿಸುವಂತೆ ಪ್ರತಿ ಸಾವಿರ ಲೀಟರ್‌ಗೆ 6.50 ರೂ. ನಿಗದಿ ಮಾಡಲಾಗಿದೆ. ಅದೇ ರೀತಿಯಲ್ಲಿ 25,001 ರಿಂದ 50,000 ಲೀಟರ್‌ವರೆಗಿನ ಬಳಕೆಗೆ ಪ್ರತಿ ಸಾವಿರ ಲೀಟರ್‌ಗೆ 10 ರೂ., 50,001 ರಿಂದ 75,000 ಲೀಟರ್‌ವರೆಗಿನ ಬಳಕೆಗೆ ಪ್ರತಿ ಸಾವಿರ ಲೀಟರ್‌ಗೆ 15 ರೂ., 75,001 ರಿಂದ 1,00,000 ಲೀಟರ್‌ವರೆಗಿನ ■ 6ನೇ ಪುಟಕ್ಕೆ

ಇನ್ನು ಮುಂಬಡ್ತಿಗೆ ಹೊಸ ಹುದ್ದೆ ನಿರ್ವಹಣೆ ತರಬೇತಿ ಕಡ್ಡಾಯ

ಸರ್ಕಾರದಿಂದ ನಿಯಮಾವಳಿ ಬದಲಾವಣೆ

ಬೆಂಗಳೂರು, ಮಾ.31(ಕೆಎಂಶಿ)– ಸರ್ಕಾರಿ ಸೇವೆಯಲ್ಲಿರುವ ಉದ್ಯೋಗಿಗಳಿಗೆ ಅನುಭವ, ವಯಸ್ಸು, ಮೀಸಲಾತಿ ಮತ್ತು ಸೇವಾ ಜೇಷ್ಠತೆ ಆಧರಿಸಿ ಮುಂಬಡ್ತಿ ನೀಡಲಾಗುತ್ತದೆ. ಆದರೆ ಇದೀಗ ಸರ್ಕಾರ ಈ ನಿಯಮಾವಳಿಗಳಲ್ಲಿ ದೊಡ್ಡ ಬದಲಾವಣೆ ತಂದಿದೆ. ರಾಜ್ಯ ಆಡಳಿತ ಸುಧಾರಣೆ ಆಯೋಗದ ಶಿಫಾರಸುಗಳನ್ನು ಆಧರಿಸಿ ಇನ್ನು ಮುಂದೆ ಸರ್ಕಾರಿ ನೌಕರರಿಗೆ ಮುಂಬಡ್ತಿ ಸಿಗಬೇಕಾದರೆ ಸೇವಾನುಭವ ಅಥವಾ ಸೇವಾ ಜೇಷ್ಠತೆ ಒಂದೇ ಮಾನದಂಡವಲ್ಲ. ಇದರ ಜೊತೆಗೆ ತಾವು ಅಲಂಕರಿಸಲಿರುವ ಹುದ್ದೆಯನ್ನು ಯಶಸ್ವಿಯಾಗಿ ನಿಭಾಯಿಸಲು ಅದಕ್ಕೆ ಅಗತ್ಯವಾದ ತರಬೇತಿ ಪಡೆಯುವುದೂ ಕಡ್ಡಾಯ ಎಂದು ತಿಳಿಸಿದೆ.

ಆಡಳಿತ ಸುಧಾರಣೆ ಆಯೋಗದ ಶಿಫಾರಸುಗಳನ್ನು ಆಧರಿಸಿ ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ಮುಂಬಡ್ತಿಗಾಗಿ ತರಬೇತಿ ಕಡ್ಡಾಯ) ನಿಯಮಗಳು– 2026' ಹೊಸ ನಿಯಮಾವಳಿಗಳನ್ನು ಪ್ರಕಟಿಸಲಾಗಿದೆ.

ಪದೋನ್ನತಿ ಪಡೆಯಲು ಕಡ್ಡಾಯವಾಗಿ ತರಬೇತಿ ನೀಡಬೇಕು ಎಂದು ಕರ್ನಾಟಕ ಆಡಳಿತ ಸುಧಾರಣಾ ಆಯೋಗ–2 ಕೂಡ ತನ್ನ ಒಂದನೇ ವರದಿಯಲ್ಲಿ ಸರ್ಕಾರಕ್ಕೆ ಶಿಫಾರಸು ಮಾಡಿತ್ತು. ಅದರ ಅನ್ವಯ ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ನಿರ್ಣಯ ತೆಗೆದುಕೊಂಡು ಕರಡು ನಿಯಮ ರೂಪಿಸಲಾಗಿತ್ತು. ಇದೀಗ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಆದರೆ ಗ್ರೂಪ್ 'ಸಿ' ವೃಂದದಲ್ಲಿರುವ ವಾಹನ ಚಾಲಕರು ಮತ್ತು ಗ್ರೂಪ್ 'ಡಿ' ವೃಂದದ ನೌಕರರಿಗೆ ಮುಂಬಡ್ತಿ ನೀಡಲು ಇಂತಹ ತರಬೇತಿಯಿಂದ ವಿನಾಯಿತಿ ನೀಡಲಾಗಿದೆ. ಅಲ್ಲದೆ, ಕರ್ತವ್ಯದಿಂದ ನಿವೃತ್ತಿ ಹೊಂದಲು ಕೇವಲ ಎರಡು ■ 6ನೇ ಪುಟಕ್ಕೆ

ಮಧ್ಯ ಪ್ರಾಚ್ಯ ಬಿಕ್ಕಟ್ಟು
ಹಾಲಿನ ಬೆಲೆ ಏರಿಕೆಯ ಸುಳಿವು

ಬೆಂಗಳೂರು, ಮಾ.31– ಇರಾನ್– ಇಸ್ರೇಲ್, ಅಮೆರಿಕದ ಯುದ್ಧ ಪರಿಣಾಮದಿಂದಾಗಿ ಅಡುಗೆ ಅನಿಲ ಬಳಕೆಯ ಮೇಲೆ ಕೇಂದ್ರ ಸರ್ಕಾರ ಕಡಿವಾಣ ಹಾಕಿದ್ದು, ಸಹಜವಾಗಿ ಹಾಲು ಹಾಗೂ ನಂದಿನಿ ಉತ್ಪನ್ನಗಳ ಬೆಲೆ ಏರಿಕೆ ಮಾಡಬೇಕಾಗಬಹುದು ಎಂದು ಬೆಂಗಳೂರು ಹಾಲು ಉತ್ಪಾದಕರ ಒಕ್ಕೂಟದ ಅಧ್ಯಕ್ಷ ಹಾಗೂ ಮಾಜಿ ಸಂಸದ ಡಿ.ಕೆ.ಸುರೇಶ್ ಸೂಚ್ಯವಾಗಿ ಹೇಳಿದ್ದಾರೆ.





ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸದ್ಯಕ್ಕೆ ತೈಲ ಸರಬರಾಜಿನಲ್ಲಿ ಸಮಸ್ಯೆಯಿಲ್ಲ. ಆದರೆ ಅಡುಗೆ ಅನಿಲವನ್ನು ಶೇ.55 ರಷ್ಟು ಮಾತ್ರ ಬಳಕೆ ಮಾಡಬೇಕು ಎಂಬ ನಿರ್ದೇಶನವಿದೆ. ಶೇಕಡಾ ನೂರರಷ್ಟು ಅಡುಗೆ ಅನಿಲ ಬಳಕೆ ಮಾಡಬೇಕಾದರೆ ಶೇ.35ರಷ್ಟು ಹೆಚ್ಚುವರಿ ಶುಲ್ಕ ಪಾವತಿಸುವಂತೆ ಸೂಚನೆ ನೀಡಲಾಗಿದೆ. ಈ ರೀತಿ ಹೆಚ್ಚುವರಿ ಆರ್ಥಿಕ ಹೊರೆಯಾದಾಗ ಅದರ ಹೊರೆ ಗ್ರಾಹಕರ ಮೇಲೆ ಬೀಳುತ್ತದೆ ಎಂದರು.

ಕೇಂದ್ರ ಸರ್ಕಾರ ಸೂಚ್ಯವಾಗಿ ಅಡುಗೆ ಅನಿಲ ಸಿಲಿಂಡರ್ ದರ ಏರಿಕೆಯ ನಿರ್ದೇಶನ ನೀಡಿದೆ. ಹೀಗಾಗಿ ಸಹಜವಾಗಿಯೇ ಹಾಲು ಒಕ್ಕೂಟಗಳು ತೊಂದರೆಗೆ ಸಿಲುಕುತ್ತಿವೆ. ಹಾಲು ಹಾಗೂ ನಂದಿನಿ ಉತ್ಪನ್ನಗಳಿಗೆ ಅಡುಗೆ ಅನಿಲ ಬಳಕೆಯ ಬಾಯ್ಲರ್‌ಗಳನ್ನು ಉಪಯೋಗಿಸುತ್ತಿದ್ದೇವೆ. ■ 6ನೇ ಪುಟಕ್ಕೆ

ಗುತ್ತಿಗೆ ಸಿಬ್ಬಂದಿ ಸೇವೆ ಮುಂದುವರೆಸುವ ಯಾವುದೇ ಆದೇಶ ಹೊರಡಿಸಿಲ್ಲ

ನಕಲಿ ಜ್ಞಾಪನ ಪತ್ರ ಹರಿಬಿಟ್ಟ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಆರ್ಥಿಕ ಇಲಾಖೆ ಸ್ಪಷ್ಟನೆ

ಬೆಂಗಳೂರು, ಮಾ.31– ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹಾಗೂ ಅಂಗ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ, ಗುತ್ತಿಗೆ ಆಧಾರಿತ ಸಿಬ್ಬಂದಿ ಸೇವೆ ಮುಂದುವರೆಸುವ ಯಾವುದೇ ಆದೇಶ ಅಥವಾ ಅಧಿಕೃತ ಜ್ಞಾಪನ ಪತ್ರ ಹೊರಡಿಸಿಲ್ಲ ಎಂದು ಆರ್ಥಿಕ ಇಲಾಖೆ ಸ್ಪಷ್ಟಪಡಿಸಿದೆ.

ಸರ್ಕಾರದಲ್ಲಿ ಹೊರಗುತ್ತಿಗೆ ಆಧಾರಿತ ಸಿಬ್ಬಂದಿಯ ಸೇವೆಯನ್ನು ಮುಂದುವರೆಸುವ ಬಗ್ಗೆ ಆರ್ಥಿಕ ಇಲಾಖೆಯ ಅಧಿಕೃತ ಜ್ಞಾಪನದ ಮಾದರಿಯಲ್ಲಿ, ನಕಲಿಯಾಗಿ ಸಂ.ಆಇ/ಸೇನಿ/08/2026 ದಿನಾಂಕ: 24–03–2026 ಸಂಖ್ಯೆಯಲ್ಲಿ ಅನಧಿಕೃತವಾಗಿ ಸೃಷ್ಟಿಸಿ, ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ. ಇದರ ನೈಜತೆ ಪರಿಶೀಲಿಸದೆ ಕೆಲ ಮಾಧ್ಯಮಗಳು, ಆನ್‌ಲೈನ್ ಆವೃತ್ತಿಗಳು ಹಾಗೂ ಸಾಮಾಜಿಕ ಮಾಧ್ಯಮಗಳು ಈ ಬಗ್ಗೆ ಸುದ್ದಿ ಪ್ರಕಟಿಸಿವೆ. ಸರ್ಕಾರದ ಇಂತಹ ಯಾವುದೇ ಆದೇಶ ಅಥವಾ ಅಧಿಕೃತ ಜ್ಞಾಪನ ಪತ್ರ ಹೊರಡಿಸಿಲ್ಲ. ಈ ನಕಲಿ ಜ್ಞಾಪನ ಪತ್ರ ಅಧಿಕೃತವಲ್ಲ ಎಂದು ಆರ್ಥಿಕ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಎಂ.ರಾಜಮ್ಮ ಪ್ರಕಟಣೆ ಮೂಲಕ ಸ್ಪಷ್ಟಪಡಿಸಿದ್ದಾರೆ.

ಏ.25ರಿಂದ ಮೇ8ರವರೆಗೆ ದ್ವಿತೀಯ ಪಿಯು ಪರೀಕ್ಷೆ–2; ಮೇ 18ರಿಂದ ಮೇ 25ರವರೆಗೆ ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆ

ಬೆಂಗಳೂರು, ಮಾ.31 (ಕೆಎಂಶಿ)– ಕರ್ನಾಟಕ ಶಾಲಾ ಶಿಕ್ಷಣ ಇಲಾಖೆ ಹಾಗೂ ಪರೀಕ್ಷಾ ಮೌಲ್ಯ ನಿರ್ಣಯ ಮಂಡಳಿ– 2026ರ ದ್ವಿತೀಯ ಪಿಯುಸಿ ಪರೀಕ್ಷೆ–2ರ ಪರಿಷ್ಕೃತ ವೇಳಾಪಟ್ಟಿಯನ್ನು ಪ್ರಕಟಿಸಿದೆ. ಏಪ್ರಿಲ್ 25ರಿಂದ ಮೇ 8ರವರೆಗೆ ದ್ವಿತೀಯ ಪಿಯುಸಿ ಪರೀಕ್ಷೆ–2 ನಡೆಯಲಿದೆ. ಅದೇ ರೀತಿ ಮೇ 18ರಿಂದ ಮೇ 25ರವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ನಡೆಯಲಿವೆ.

ಪಿಯುಸಿ ಪರೀಕ್ಷೆ–2 ವೇಳಾಪಟ್ಟಿ: ಏ.25ರಂದು ಕನ್ನಡ, ಅರೇಬಿಕ್, ಏ.27ರಂದು ಐಚ್ಛಿಕ ಕನ್ನಡ, ತರ್ಕಶಾಸ್ತ್ರ, ಲೆಕ್ಕಶಾಸ್ತ್ರ, ರಸಾಯನಶಾಸ್ತ್ರ, ಏ.28 ರಂದು ಇಂಗ್ಲಿಷ್, ಏ.29ರಂದು ವ್ಯವಹಾರ ಅಧ್ಯಯನ, ಭೌತಶಾಸ್ತ್ರ, ಶಿಕ್ಷಣ ಶಾಸ್ತ್ರ, ಏ.30ರಂದು ಅರ್ಥಶಾಸ್ತ್ರ, ಜೀವಶಾಸ್ತ್ರ.

ಮೇ 2ರಂದು ಇತಿಹಾಸ, ಗಣಿತ, ಗೃಹ ವಿಜ್ಞಾನ, ಮೇ 4ರಂದು ರಾಜ್ಯಶಾಸ್ತ್ರ, ವಿದ್ಯುನ್ಮಾನಶಾಸ್ತ್ರ, ಗಣಕ ವಿಜ್ಞಾನ, ಮೇ 5ರಂದು ಹಿಂದಿ, ಮೇ 6ರಂದು ಸಮಾಜಶಾಸ್ತ್ರ, ಸಂಖ್ಯಾಶಾಸ್ತ್ರ, ಮೇ



7ರಂದು ಭೂಗೋಳ ಶಾಸ್ತ್ರ, ಮನಃಶಾಸ್ತ್ರ, ಭೂಗರ್ಭ ಶಾಸ್ತ್ರ, ಮೂಲ ಗಣಿತ, ಮೇ 8ರಂದು ತಮಿಳು, ತೆಲುಗು, ಮಲಯಾಳಂ, ಮರಾಠಿ, ಉರ್ದು, ಸಂಸ್ಕೃತ, ಫ್ರೆಂಚ್ ಹಾಗೂ ಹಿಂದೂಸ್ತಾನಿ ಸಂಗೀತ, ಎಲೆಕ್ಟ್ರಾನಿಕ್ ಮತ್ತು ಯಂತ್ರಾಂಶ, ಉಡುಪುಗಳ ತಯಾರಿಕೆ ಮತ್ತು ಗೃಹೋಪಯೋಗಿ ವಸ್ತುಗಳು, ಮಾಹಿತಿ ತಂತ್ರಜ್ಞಾನ, ರೀಟೈಲ್, ಆಟೋಮೊಬೈಲ್, ಬ್ಯೂಟಿ ಅಂಡ್ ವೆಲ್ನೆಸ್ ಪರೀಕ್ಷೆಗಳನ್ನು ನಡೆಸಲಾಗುತ್ತದೆ ಎಂದು ತಿಳಿಸಿದೆ

ಎಸ್‌ಎಸ್‌ಎಲ್‌ಸಿ ಪರೀಕ್ಷೆ–2 ವೇಳಾ ಪಟ್ಟಿ: ಮೇ 18ರಂದು ಪ್ರಥಮ ಭಾಷೆ ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಇಂಗ್ಲಿಷ್, ಇಂಗ್ಲಿಷ್ (ಎನ್‌ಸಿಇಆರ್‌ಟಿ), ಸಂಸ್ಕೃತ ಪರೀಕ್ಷೆಗಳು ನಡೆಯಲಿವೆ. ಮೇ 19ರಂದು ವಿಜ್ಞಾನ, ರಾಜ್ಯಶಾಸ್ತ್ರ, ಹಿಂದೂಸ್ತಾನಿ ಸಂಗೀತ, ಕರ್ನಾಟಕ ಸಂಗೀತ, ಮೇ 20ರಂದು ದ್ವಿತೀಯ ಭಾಷೆಗಳಾದ ಇಂಗ್ಲಿಷ್, ಕನ್ನಡ, ಮೇ 21ರಂದು ಗಣಿತ, ಸಮಾಜಶಾಸ್ತ್ರ ಪರೀಕ್ಷೆಗಳನ್ನು ನಡೆಸಲಾಗುತ್ತದೆ.

ಮೇ 22ರಂದು ತೃತೀಯ ಭಾಷೆಯ ವಿಷಯಗಳಾದ ಹಿಂದಿ(ಎನ್‌ಸಿಇಆರ್‌ಟಿ), ಹಿಂದಿ, ಕನ್ನಡ, ಇಂಗ್ಲಿಷ್, ಅರೇಬಿಕ್, ಉರ್ದು, ಸಂಸ್ಕೃತ, ಕೊಂಕಣಿ, ತುಳು, ಮರಾಠಿ ಜೊತೆಗೆ ಮಾಹಿತಿ ತಂತ್ರಜ್ಞಾನ, ರೀಟೈಲ್, ಆಟೋಮೊಬೈಲ್, ಬ್ಯೂಟಿ ಅಂಡ್ ವೆಲ್‌ನೆಸ್, ಅಪರೆಲ್ ಮೇಡ್ ಅಪ್ ಮತ್ತು ಹೋಂ ಫರ್ನಿಷಿಂಗ್, ಎಲೆಕ್ಟ್ರಾನಿಕ್ಸ್ ಮತ್ತು ಹಾರ್ಡ್‌ವೇರ್ ಪರೀಕ್ಷೆ ನಡೆಯಲಿದೆ.

ಮೇ 23ರಂದು ಸಮಾಜವಿಜ್ಞಾನ, ಮೇ 25ರಂದು ಎಲಿಮೆಂಟ್ಸ್ ಆಫ್ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್, ಎಲಿಮೆಂಟ್ಸ್ ಆಫ್ ಮೆಕ್ಯಾನಿಕಲ್ ಇಂಜಿನಿಯರಿಂಗ್, ಎಲಿಮೆಂಟ್ಸ್ ಆಫ್ ಎಲೆಕ್ಟ್ರಿಕಲ್ ಇಂಜಿನಿಯರಿಂಗ್, ಪ್ರೋಗ್ರಾಮಿಂಗ್ ಇನ್ ಎಎನ್‌ಎಸ್‌ಐಸಿ, ಅರ್ಥಶಾಸ್ತ್ರಪರೀಕ್ಷೆಗಳನ್ನು ನಡೆಸಲಾಗುತ್ತದೆ

ಹಾರ್ಮುಜ್ ತೆರೆಯದಿದ್ದರೂ ಯುದ್ಧ ಕೊನೆಗೊಳ್ಳಬೇಕು...!

ಇರಾನ್ ಎದುರು ಮಂಡಿಯೂರಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್

ವಾಷಿಂಗ್ಟನ್, ಮಾ.31– ಇರಾನ್ ವಿರುದ್ಧ ಯುದ್ಧದಲ್ಲಿ ಆರ್ಥಿಕವಾಗಿ ಸಾಕಷ್ಟು ನಷ್ಟ ಹೊಂದಿರುವ ಅಮೆರಿಕ, ಇದೀಗ ಇದೇ ಮೊದಲ ಬಾರಿಗೆ ಯುದ್ಧದಿಂದ ಹಿಂದಕ್ಕೆ ಸರಿಯುವ ಮಾತುಗಳನ್ನಾಡಿದೆ.



ಇರಾನ್ ಯುದ್ಧದ ಐದು ವಾರಗಳ ನಂತರ, ಹಾರ್ಮುಜ್ ಜಲಸಂಧಿಯನ್ನು ಹೆಚ್ಚಾಗಿ ಮುಚ್ಚಲಾಗಿದ್ದರೂ, ತಾವು ಆಪರೇಷನ್ ಎಪಿಕ್ ಫ್ಯೂರಿಯನ್ನು ಕೊನೆಗೊಳಿಸಲು ಸಿದ್ಧರಿರುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ಸಹಾಯಕರಿಗೆ ತಿಳಿಸಿದ್ದಾರೆ ಎಂದು ಉನ್ನತ ಅಧಿಕಾರಿಗಳ ಹೇಳಿಕೆಯನ್ನು ಉಲ್ಲೇಖಿಸಿ ವಾಲ್ ಸ್ಟ್ರೀಟ್ ಜರ್ನಲ್ ವರದಿ ಮಾಡಿದೆ.

ಕಾರ್ಯತಂತ್ರದ ಜಲಮಾರ್ಗ ಹಾರ್ಮುಜ್ ಜಲಸಂಧಿಯನ್ನು ಮತ್ತೆ ತೆರೆಯುವ ಯಾವುದೇ ಪ್ರಯತ್ನವು ಸಂಕೀರ್ಣವಾಗಿರುತ್ತದೆ ಮತ್ತು ಮಿಲಿಟರಿ ಕಾರ್ಯಾಚರಣೆಯನ್ನು ಮುಕ್ತಾಯಗೊಳಿಸಲು ಟ್ರಂಪ್‌ರ ಸಮಯದ ಮಿತಿಯನ್ನು ಮೀರಿ ಸಂಘರ್ಷವನ್ನು ತಳ್ಳಬಹುದು ಎಂದು ■ 6ನೇ ಪುಟಕ್ಕೆ

ಇಂದಿನಿಂದ ಜನಗಣತಿ -2027

ಆನ್‌ಲೈನ್‌ನಲ್ಲಿ 'ಸ್ವಯಂ ಗಣತಿ'

ಜೊತೆ ಜೊತೆಯಲ್ಲಿ ಮನೆಗಳ ಪಟ್ಟಿ

ಮೈಸೂರು, ಮಾ.31(ಎಂಟಿವೈ)– ರಾಜ್ಯದಲ್ಲಿ 2027ರ ಫೆಬ್ರವರಿಯಲ್ಲಿ ನಡೆಯುವ ಜನಗಣತಿ ಅಂಗವಾಗಿ ನಾಳೆ(ಏ.1)ಯಿಂದ ಮೇ 15ರವರೆಗೆ 'ಸ್ವಯಂ ಗಣತಿ', ಏ.16ರಿಂದ ಮೇ 15ರವರೆಗೆ ಮನೆಗಳ ಪಟ್ಟಿ ನಡೆಯಲಿದೆ. ಈ ವೇಳೆ ಸಾರ್ವಜನಿಕರು ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ಮಾಹಿತಿ ಹಂಚಿಕೊಳ್ಳಬಹುದಾಗಿದೆ.

ಪ್ರತಿ 10 ವರ್ಷಕ್ಕೊಮ್ಮೆ ನಡೆಯುವ ಜನಗಣತಿ 2021ರಲ್ಲಿ ನಡೆಯಬೇಕಾಗಿತ್ತು. ಕೋವಿಡ್ ಹಿನ್ನೆಲೆಯಲ್ಲಿ ಮುಂದೂಡಲಾಗಿತ್ತು. ಈ ಹಿನ್ನೆಲೆಯಲ್ಲಿ 2027ರ ಫೆಬ್ರವರಿಯಲ್ಲಿ ಜನಗಣತಿ ನಡೆಸಲು ಉದ್ದೇಶಿಸಲಾಗಿದ್ದು, ಅದಕ್ಕೆ ಪೂರ್ವಭಾವಿಯಾಗಿ ನಾಳೆಯಿಂದ ಎರಡು ಹಂತದಲ್ಲಿ ಮನೆ ಪಟ್ಟಿ ಮತ್ತು ಗಣತಿ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ. ಏ.1ರಿಂದ 15ರವರೆಗೆ ಮೊದಲ ಹಂತದಲ್ಲಿ ಆನ್‌ಲೈನ್ ಮೂಲಕವೇ ಜನರು ತಮ್ಮ ಮನೆ ಅಥವಾ ತಾವಿರುವ ಸ್ಥಳದಲ್ಲಿಯೇ ವೆಬ್‌ಸೈಟ್‌ನಲ್ಲಿ ಗಣತಿ ಪ್ರಕ್ರಿಯೆಯಲ್ಲಿ ಕೇಳುವ 33 ಪ್ರಶ್ನೆಗಳಿಗೆ ಉತ್ತರಿಸಿ ಮಾಹಿತಿ ಹಂಚಿಕೊಳ್ಳಬಹುದಾಗಿದೆ. ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿದ ಬಳಿಕ ಎಸ್‌ಎಂಎಸ್ ಮೂಲಕ ರೆಫರೆನ್ಸ್ ಐಡಿ ಹಂಚಿಕೆಯಾಗುತ್ತದೆ. ಆ ಐಡಿಯನ್ನು ಎರಡನೇ ಹಂತದ ಗಣತಿ ಪ್ರಕ್ರಿಯೆ ಆರಂಭವಾದಾಗ ಮನೆ ಬಳಿ ಬರುವ ಗಣತಿದಾರರಿಗೆ ನೀಡಿದರೆ ಮನೆ ಪಟ್ಟಿ ಪ್ರಕ್ರಿಯೆಯನ್ನು ಯಶಸ್ವಿಯಾಗಿ ನಿರ್ವಹಿಸಿದಂತಾಗುತ್ತದೆ.



ಮನೆ ಗಣತಿ ಪ್ರಕ್ರಿಯೆಗೆ ನಿಯೋಜನೆಗೊಂಡಿರುವ ಸಿಬ್ಬಂದಿಗೆ ಆಯೋಜಿಸಿದ್ದ ತರಬೇತಿ ಕಾರ್ಯಾಗಾರದಲ್ಲಿ ಪಾಲಿಕೆಯ ಕಂದಾಯ ವಿಭಾಗದ ಉಪ ಆಯುಕ್ತ ಸೋಮಶೇಖರ್ ಜಿಗಣಿ ಮಾಹಿತಿ ನೀಡುತ್ತಿರುವುದು.

ಗಣತಿಗೆ ಸಿದ್ಧತೆ: ಮೈಸೂರು ನಗರ ಹಾಗೂ ಜಿಲ್ಲೆಯಲ್ಲಿ ಮನೆ ಪಟ್ಟಿ ಮತ್ತು ಮನೆಗಳ ಗಣತಿ ಕಾರ್ಯಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿದೆ. ಗಣತಿ ಪ್ರಕ್ರಿಯೆಗೆ ಅಗತ್ಯ ಸಿಬ್ಬಂದಿ ನಿಯೋಜಿಸಲಾಗಿದ್ದು, ಹಂತ ಹಂತವಾಗಿ ತರಬೇತಿ ನೀಡಲಾಗಿದೆ. ಅಲ್ಲದೆ, ಸುಗಮ ಗಣತಿಗಾಗಿ ವಿವಿದ ಬ್ಲಾಕ್ ರಚಿಸಲಾಗಿದ್ದು, ಒಂದೊಂದು ಬ್ಲಾಕ್‌ಗೆ ಒಬ್ಬೊಬ್ಬರು ಗಣತಿದಾರರನ್ನು ನಿಯೋಜಿಸಲಾಗಿದೆ. ಆರು ಮಂದಿ ಗಣತಿದಾರರಿಗೆ ಒಬ್ಬರು ಮೇಲ್ವಿಚಾರಕರನ್ನು ನೇಮಿಸಲಾಗಿದೆ. ಈಗಾಗಲೇ ಎಲ್ಲಾ ಬ್ಲಾಕ್‌ಗಳ ಮ್ಯಾಪಿಂಗ್ ಕಾರ್ಯ ಪೂರ್ಣಗೊಳಿಸಲಾಗಿದೆ.

ಮನೆ ಮನೆಗೆ ಭೇಟಿ: ಮೊದಲ ಹಂತದಲ್ಲಿ ನಡೆಯುವ 'ಸ್ವಯಂ ಗಣತಿ' ಪ್ರಕ್ರಿಯೆ ಮುಗಿದ ನಂತರ ಎರಡನೇ ಹಂತದಲ್ಲಿ ಏ.16ರಿಂದ ಮೇ.15 ರವರೆಗೆ 30 ದಿನ ಮನೆ ಮನೆಗೆ ಗಣತಿದಾರರು ಭೇಟಿ ನೀಡಿ ಮಾಹಿತಿ ಕಲೆ ಹಾಕಲಿದ್ದಾರೆ. ಈಗಾಗಲೇ ಗಣತಿಗಾಗಿ ರಚಿಸಿರುವ ಬ್ಲಾಕ್ ಮತ್ತು ಮ್ಯಾಪಿಂಗ್ ಆಧಾರದಲ್ಲಿ ಗಣತಿದಾರರು ತಮಗೆ ನಿಗಧಿಯಾಗಿರುವ ಮನೆಗಳಿಗೆ ತೆರಳಿ ಮಾಹಿತಿ ಸಂಗ್ರಹಿಸಲಿದ್ದಾರೆ.

ಡಿಜಿಟಲೀಕರಣ: ಈ ಹಿಂದೆ ನಡೆದಿದ್ದ ಗಣತಿ ಕಾರ್ಯದ ಮಾಹಿತಿಯನ್ನು ಪೇಪರ್‌ನಲ್ಲಿ ನಮೂದಿಸಿಡಲಾಗುತ್ತಿತ್ತು. ಇದರಿಂದ ಯಾವುದಾದರು ಒಂದು ಹಾಳೆ ಕಾಣೆಯಾದರೂ ಗಣತಿ ಪ್ರಕ್ರಿಯೆಯ ಮಾಹಿತಿ ಅಪೂರ್ಣವಾಗುತ್ತಿತ್ತು. ಹಾಗಾಗಿ ಈ ಬಾರಿ ನಡೆಸುತ್ತಿರುವ ಜನಗಣತಿ ಹಾಗೂ ಮನೆ ಪಟ್ಟಿ, ಗಣತಿ ಕಾರ್ಯವನ್ನು ಡಿಜಿಟಲೀಕರಣ ಮಾಡಲಾಗಿದೆ. ಇದರಿಂದ ಗಣತಿ ಪ್ರಕ್ರಿಯೆಯಲ್ಲಿ ಸಂಗ್ರಹವಾದ ಮಾಹಿತಿ ಭದ್ರವಾಗಿರುತ್ತದೆ.

ನಿಖರ ಹಾಗೂ ಗೌಪ್ಯತೆ: ನಾಳೆಯಿಂದ ಆರಂಭವಾಗುವ ಮನೆ ಗಣತಿ ಹಾಗೂ ಮುಂದಿನ ವರ್ಷ ನಡೆಯುವ ಜನಗಣತಿ ಪ್ರಕ್ರಿಯೆಯಲ್ಲಿ ಸಂಗ್ರಹವಾಗುವ ಮಾಹಿತಿ ನಿಖರವಾಗಿರುವುದರೊಂದಿಗೆ ಗೌಪ್ಯತೆ ಕಾಪಾಡಿಕೊಳ್ಳಲು ಸರ್ಕಾರ ಕ್ರಮ ಕೈಗೊಂಡಿದೆ. ಯಾವುದೇ ಮಾಹಿತಿ ಸೋರಿಕೆಯಾಗದಂತೆ ಕಟ್ಟೆಚ್ಚರ ವಹಿಸಲಾಗಿದೆ. ಅಲ್ಲದೆ, ಜನರಿಂದ ಸಂಗ್ರಹಿಸಲಾದ ಮಾಹಿತಿ, ಕೇವಲ ಸರ್ಕಾರದ ವಿವಿಧ ಯೋಜನೆಗೆ ಅಗತ್ಯವಿದ್ದರೆ ಮಾತ್ರ ಬಳಸಿಕೊಳ್ಳಲಾಗುತ್ತದೆ.

ಯೋಜನೆ ರೂಪಿಸಲು ಸಹಕಾರಿ: ಮನೆ ಹಾಗೂ ಜನಗಣತಿ ಆಧಾರದ ಮೇಲೆ ಸರ್ಕಾರ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಬೇಕಾಗಿದ್ದು, ಆ ಕಾರಣದಿಂದ ಜನಗಣತಿಗೆ ■ 6ನೇ ಪುಟಕ್ಕೆ


ಸಿದ್ಧತೆ ಮಾಡಿಕೊಳ್ಳಲಾಗಿದೆ

ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮನೆ ಪಟ್ಟಿ, ಮನೆ ಗಣತಿ ಪ್ರಕ್ರಿಯೆಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ. ಪಾಲಿಕೆಯ ವಲಯ ಕಚೇರಿವಾರು ಬ್ಲಾಕ್ ಮಾಡಿಕೊಂಡು ಮ್ಯಾಪಿಂಗ್ ಮಾಡಲಾಗಿದೆ. ಇದರಿಂದ ಗಣತಿದಾರರು ನಿಗಧಿಯಾಗಿರುವ ರೂಟ್‌ನಲ್ಲಿ ತೆರಳಿ ಮನೆ ಮನೆಯಿಂದ ಮಾಹಿತಿ ಪಡೆದುಕೊಳ್ಳಲು ಸಹಕಾರಿಯಾಗಲಿದೆ. ಈಗಾಗಲೇ 750 ಮಂದಿಗೆ ತರಬೇತಿ ನೀಡಲಾಗಿದೆ. 15 ಕೇಂದ್ರದಲ್ಲಿ ತರಬೇತಿ ನೀಡಿ, ಗಣತಿ ಪ್ರಕ್ರಿಯೆ ಹೇಗಿರುತ್ತದೆ ಎಂದು ತಿಳಿಸಿಕೊಡಲಾಗಿದೆ. ಸ್ವಯಂ ಗಣತಿ ಪ್ರಕ್ರಿಯೆಯಲ್ಲಿ ಜನರು ಮಾಹಿತಿ ಹಂಚಿಕೊಂಡರೆ, ಎರಡನೇ ಹಂತದಲ್ಲಿ ಮನೆ ಮನೆಗೆ ಭೇಟಿ ನೀಡುವ ಸಂದರ್ಭದಲ್ಲಿ ನಡೆಯುವ ಗಣತಿ ಪ್ರಕ್ರಿಯೆ ಕಡಿಮೆ ಸಮಯದಲ್ಲಿ ಪೂರ್ಣಗೊಳ್ಳಲಿದೆ. ಮನೆ ಗಣತಿಯ ಆಧಾರದಲ್ಲಿ 2027ರ ಫೆಬ್ರವರಿಯಲ್ಲಿ ಜನಗಣತಿ ನಡೆಸಲಾಗುತ್ತದೆ.

- ಸೋಮಶೇಖರ್ ಜಿಗಣಿ, ಉಪ ಆಯುಕ್ತರು, ಕಂದಾಯ ವಿಭಾಗ, ಮೈಸೂರು ಮಹಾನಗರ ಪಾಲಿಕೆ

ಗಣತಿಯಲ್ಲಿ ಪಾಲ್ಗೊಳ್ಳಿ; ನಿಖರ ಮಾಹಿತಿ ನೀಡಿ

ಮೈಸೂರು, ಮಾ.31(ಎಂಟಿವೈ)– ಜನ ಗಣತಿ– 2027ರ ಅಂಗವಾಗಿ ಆರಂಭಿಸುತ್ತಿರುವ ಮನೆ ಗಣತಿಯಲ್ಲಿ ಸಾರ್ವಜನಿಕರು ಸುರಕ್ಷಿತ ವೆಬ್ ಪೋರ್ಟಲ್ ಮೂಲಕ ಸ್ವಯಂ– ಗಣತಿಯಲ್ಲಿ ಪಾಲ್ಗೊಂಡು ನಿಖರ ಮಾಹಿತಿ ಹಂಚಿಕೊಳ್ಳುವಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಮನವಿ ಮಾಡಿದ್ದಾರೆ.



ಮೈಸೂರು ಜಿಲ್ಲೆಯಲ್ಲಿ ಮನೆ ಪಟ್ಟಿ ಮತ್ತು ಮನೆಗಣತಿ ಕಾರ್ಯ ಏ.1ರಿಂದ 15ರವರೆಗೆ 'ಸ್ವಯಂ ಗಣತಿ ನಡೆಯಲಿದೆ. ಸಾರ್ವಜನಿಕರು ಸ್ವಯಂ ಗಣತಿಗಾಗಿ ವೆಬ್‌ಸೈಟ್ ವಿಳಾಸ www.se.census.gov.in ಬಳಸಿಕೊಂಡು ಲಾಗ್ ಇನ್ ಆಗಿ ಮನೆಗಳ ಪಟ್ಟಿ ಮತ್ತು ವಸತಿ ಗಣತಿಯಲ್ಲಿ ಕೇಳುವ 33 ಪ್ರಶ್ನೆಗಳಿಗೆ ಉತ್ತರಿಸಬೇಕು. ಸಾರ್ವಜನಿಕರು ಸ್ವಯಂ ಗಣತಿ ಮಾಹಿತಿಯನ್ನು ಯಶಸ್ವಿಯಾಗಿ ಸಲ್ಲಿಸಿದ ನಂತರ ಎಸ್‌ಎಂಎಸ್ ಮತ್ತು ಈ ಮೇಲ್ ಪೋರ್ಟಲ್‌ಗೆ ರೆಫರೆನ್ಸ್ ಐಡಿ ಸ್ವೀಕೃತವಾಗುತ್ತದೆ. ಏ.16ರಿಂದ ಮೇ.15ರವರೆಗೆ ಮನೆ ಮನೆಗೆ ಗಣತಿದಾರರು ಬಂದಾಗ ರೆಫರೆನ್ಸ್ ಐಡಿ ನೀಡಬೇಕು. ಸ್ವಯಂ ಗಣತಿಯಲ್ಲಿ ಪಾಲ್ಗೊಳ್ಳುವುದರಿಂದ ಗಣತಿದಾರರು ಬಂದಾಗ ಆಗುವ ಸಮಯ ವ್ಯಯವನ್ನು ತಪ್ಪಿಸಬಹುದಾಗಿದೆ. ಜಿಲ್ಲೆಯ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂ ಗಣತಿಯಲ್ಲಿ ಪಾಲ್ಗೊಳ್ಳುವಂತೆ ಕೋರಿದ್ದಾರೆ.

ಮಹಾಪುರುಷರ ತತ್ವಗಳಿಂದ ಮಾತ್ರವೇ ವ್ಯಕ್ತಿತ್ವ ವಿಕಸನ

ಮೌಲ್ಯಯುತ ಜೀವನಕ್ಕೆ ಮಹಾವೀರರ ಬೋಧನೆಗಳೇ ಆಧಾರ: ಶಾಸಕ ಶ್ರೀವತ್ಸ

ಮೈಸೂರು, ಮಾ.31–ಮಹಾಪುರುಷರ ತತ್ವಗಳ ಅಳವಡಿಕೆಯಿಂದ ಮಾತ್ರ ವ್ಯಕ್ತಿತ್ವ ವಿಕಸನ ಸಾಧ್ಯ, ಮೌಲ್ಯಯುತ ಜೀವನಕ್ಕೆ ಮಹಾವೀರರ ಬೋಧನೆಗಳೇ ಆಧಾರ ಎಂದು ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಹೇಳಿದರು.

ಇಂದು ಜಿಲ್ಲಾಡಳಿತ, ಮಹಾನಗರ ಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಭಗವಾನ್ ಮಹಾವೀರ ಜಯಂತ್ಯೋತ್ಸವ ಸಮಿತಿ ವತಿಯಿಂದ ಕಲಾಮಂದಿರದ ಆವರಣದಲ್ಲಿರುವ ಕಿರುರಂಗ ಮಂದಿರದಲ್ಲಿ ಆಯೋಜಿಸಲಾಗಿದ್ದ ಭಗವಾನ್ ಮಹಾವೀರ ಜಯಂತಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮಹಾಪುರುಷರ ಸ್ಮರಣೆಯನ್ನು ಮಾಡುವ ಮುಖಾಂತರ ನಾವು ನಮ್ಮಲ್ಲಿ ಏನಾದರೂ ಪರಿವರ್ತನೆಯನ್ನು ಕಾಣಬೇಕೆಂಬ ಹಿತದೃಷ್ಟಿಯಿಂದ ಇಂತಹ ಜಯಂತಿ ಕಾರ್ಯಕ್ರಮಗಳನ್ನು ಸರ್ಕಾರ ಆಯೋಜಿಸುತ್ತಾ ಬಂದಿದೆ ಎಂದು ಹೇಳಿದರು.

ಭಗವಾನ್ ಮಹಾವೀರರು, ಜೈನ ಧರ್ಮದ 24ನೇ ತೀರ್ಥಂಕರರಾಗಿದ್ದರು. ಮಹಾರಾಜರಾಗಿ ಜೀವನ ನಡೆಸಬೇಕಾದವರು ಅರಮನೆಯ ಸಕಲ ವೈಭವಗಳನ್ನು ತ್ಯಜಿಸಿ, ವೈರಾಗ್ಯವನ್ನು ತಾಳಿದ ಮಹಾಪುರುಷರು. ಜಗತ್ತಿಗೆ ಅಹಿಂಸೋ ಪರಮೋಧರ್ಮ ಎಂಬ ಸಂದೇಶವನ್ನು ಸಾರಿದ ವ್ಯಕ್ತಿ ಎಂದು ಹೇಳಿದರು.



ಮೈಸೂರು ಜಿಲ್ಲಾಡಳಿತ, ಮಹಾನಗರ ಪಾಲಿಕೆ, ಕನ್ನಡ–ಸಂಸ್ಕೃತಿ ಇಲಾಖೆ, ಭಗವಾನ್ ಮಹಾವೀರ ಜಯಂತ್ಯೋತ್ಸವ ಸಮಿತಿಯಿಂದ ಆಯೋಜಿಸಿದ್ದ ಭಗವಾನ್ ಮಹಾವೀರ ಜಯಂತಿಯನ್ನು ಶಾಸಕ ಟಿ.ಎಸ್.ಶ್ರೀವತ್ಸ ಉದ್ಘಾಟಿಸಿದರು.

ಹಿರಿಯ ಸಾಹಿತಿ ಪ್ರೊ.ಎಸ್.ಶಿವರಾಜಪ್ಪ ಮಾತನಾಡಿ, ಈ ಜಗತ್ತಿಗೆ ಶಾಂತಿ, ಸೌಹಾರ್ದತೆ ಹಾಗೂ ಬದುಕುವ ರೀತಿ–ನೀತಿಯನ್ನು ದಯಪಾಲಿಸಿದಂತಹ ಮಹಾವೀರ ಜಯಂತಿಯನ್ನು ಬಹಳ ಅರ್ಥಪೂರ್ಣವಾಗಿ ನಾವು ಇಂದು ಆಚರಿಸುತ್ತಿರುವುದು ಸಂತೋಷವಾಗಿದೆ. ನಾವು ಮಹಾವೀರ, ಗೌತಮ ಬುದ್ಧ, ಬಸವಣ್ಣ, ಗಾಂಧೀಜಿ, ಅಂಬೇಡ್ಕರ್‌ರಂತಹ ಮಹಾಪುರುಷರ ಜಯಂತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಅವರ ಜೀವನ, ಶ್ರಮ, ಸಾಧನೆ, ತ್ಯಾಗ ಹಾಗೂ ಹೋರಾಟಗಳ ಬಗ್ಗೆ ತಿಳಿಯಲು ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು ಎಂದು ಹೇಳಿದರು.

ವ್ಯಕ್ತಿತ್ವ ವಿಕಸನದ ಪರಿಕಲ್ಪನೆಯನ್ನು ಸಾರಿದ ವ್ಯಕ್ತಿ ಎಂದರೆ ಅದು ಮಹಾವೀರ. ಜಗತ್ತಿನ ಯಾವ ಜೀವಿ–ಜಂತುಗಳಿಗೂ ಹಿಂಸೆಯನ್ನು ಕೊಡಬಾರದೆಂದು ಹೇಳಿ ಮಾನವೀಯತೆಯನ್ನು ಮೆರೆದ ಸಂತ. ಮಹಾತ್ಮಗಾಂಧೀಜಿ ಅವರು ಮಹಾವೀರರು ಹೇಳಿದ ಮೂಲತತ್ವಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಜಗತ್ಪ್ರಸಿದ್ಧವಾದರು ಜೊತೆಗೆ ವಿಶ್ವದಲ್ಲಿ ಮೂಲ ಸ್ಥಾನ ಪಡೆದುಕೊಂಡಿದ್ದಾರೆ ಎಂದು ಹೇಳಿದರು.

> “ಭಗವಾನ್ ಮಹಾವೀರರು ನಮಗೆ ಇಂದ್ರಿಯ ನಿಗ್ರಹ, ಬ್ರಹ್ಮಚರ್ಯ, ಅಹಿಂಸೆ, ಅಸ್ತೇಯ ಹಾಗೂ ಅಪರಿಗ್ರಹಗಳ ಬಗ್ಗೆ ತಿಳಿಸಿದ್ದಾರೆ. ಇದೆಲ್ಲದಕ್ಕಿಂತ ಹೆಚ್ಚಾಗಿ ಅನ್ಯರ ವಸ್ತುಗಳಿಗೆ ಆಸೆ ಪಡಬಾರದು ಎಂಬ ಅವರ ಪರಿಕಲ್ಪನೆಯನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ದೇಶಗಳಲ್ಲಿ ಯುದ್ಧ ಎಂಬ ಶಬ್ದವೇ ಇಲ್ಲದಂತಾಗುತ್ತದೆ. –ಟಿ.ಎಸ್.ಶ್ರೀವತ್ಸ

ಇಂದು ಅವರನ್ನು ಕೇವಲ ಆರಾಧನೆ ಮತ್ತು ಆಚರಣೆ ಮಾಡಿದರೆ ಸಾಲದು ಅವರ ಆದರ್ಶಗಳನ್ನು ನಾವು ಪಾಲಿಸಬೇಕು. ಈ ಜಗತ್ತೆಲ್ಲವನ್ನು ಭ್ರಾತೃತ್ವದಿಂದ ಕಾಣುವುದು ಜೈನ ಧರ್ಮದ ಮೂಲ ಆಶಯವಾಗಿದೆ. ನಾವು ನಮ್ಮ ಜೀವನದಲ್ಲಿ ಬುದ್ಧನ ಕರುಣೆ, ಬಸವಣ್ಣನ ಸಮಾನತೆ, ಮಹಾವೀರರು ಶಾಂತಿ, ಅಹಿಂಸೆಯನ್ನು ಅಳವಡಿಸಿಕೊಳ್ಳಬೇಕು. ಮಹಾವೀರರು ಸರ್ವಕಾಲಿಕ ಪುರುಷ ಎಂದು ಹೇಳಿದರು.

ಕಂಬದಹಳ್ಳಿ ಜೈನ ಮಠ ಶ್ರೀ ಕ್ಷೇತ್ರ ಪರಮಪೂಜ್ಯ ಸ್ವಸ್ತಿ ಶ್ರೀ ಭಾನುಕೀರ್ತಿ ಭಟ್ಟಾರಕ ಭಟ್ಟಾಚಾರ್ಯವರ್ಯ ಮಹಾಸ್ವಾಮೀಜಿ ಮಾತನಾಡಿ, ಮಹಾವೀರರು ಜಾತಿ ಪದ್ಧತಿ ಮತ್ತು ಪ್ರಾಣಿ ಬಲಿಯನ್ನು ತೀವ್ರವಾಗಿ ವಿರೋಧಿಸಿದರು. ಆತ್ಮ ಶುದ್ಧೀಕರಣಕ್ಕೆ ಹೆಚ್ಚಿನ ಒತ್ತು ನೀಡಿದರು. ಜೈನ ಧರ್ಮದ ಪ್ರಕಾರ ಮಹಾವೀರರು ಕೇವಲ ಒಬ್ಬ ಧರ್ಮ ಪ್ರಚಾರಕರಲ್ಲ ಬದಲಿಗೆ ಆತ್ಮದ ವಿಮೋಚನೆಯ ಹಾದಿಯನ್ನು ತೋರಿಸಿಕೊಟ್ಟ ಮಹಾನ್ ಗುರು ಆಗಿದ್ದಾರೆ ಎಂದು ತಿಳಿಸಿದರು.

ಅವರು ತಮ್ಮ ತ್ರಿರತ್ನಗಳಾದ ಸಮ್ಯಕ್ ಜ್ಞಾನ, ಸಮ್ಯಕ್ ದರ್ಶನ ಹಾಗೂ ಸಮ್ಯಕ್ ಚರಿತ್ರೆಗಳ ಕುರಿತು ತಿಳಿಸಿದ್ದಾರೆ. ಸರಿಯಾದ ನಂಬಿಕೆಯು ಜ್ಞಾನಕ್ಕೆ ದಾರಿಯಾದರೆ, ಆ ಜ್ಞಾನವು ವ್ಯಕ್ತಿಯನ್ನು ಸನ್ಮಾರ್ಗದ ನಡತೆಯಲ್ಲಿ ನಡೆಸುತ್ತದೆ. ಇವುಗಳ ಪಾಲನೆಯಿಂದ ಮಾತ್ರ ಒಬ್ಬ ವ್ಯಕ್ತಿಯು ಕರ್ಮದಿಂದ ಮುಕ್ತನಾಗಿ ಮೋಕ್ಷ ಪಡೆಯಲು ಸಾಧ್ಯ ಎಂಬುದಾಗಿ ಬೋಧಿಸಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕನ್ನಡ–ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ದಿಗಂಬರ ಜೈನ ಸಮಾಜದ ಅಧ್ಯಕ್ಷ ಅಮರ್ ಸುನಿಲ್ ಕುಮಾರ್, ಕಾರ್ಯದರ್ಶಿ ಲಕ್ಷ್ಮೀಶ್ ಬಾಬು, ಜೈನ ಮಹಿಳಾ ಸಮಾಜದ ಅಧ್ಯಕ್ಷೆ ನಂದಿನಿ ಸುಜಯ್ ಹಾಗೂ ಕಾರ್ಯದರ್ಶಿ ಸುಮಾ ದಾಯಕರ್ ಉಪಸ್ಥಿತರಿದ್ದರು.

ಏ.3ರಿಂದ 'ಪಾರ್ಟಿ' ನಾಟಕ ಪ್ರದರ್ಶನ

ಮೈಸೂರು, ಮಾ.31(ಜಿಎ)–ನಿರಂತರ ಫೌಂಡೇಷನ್ ಮೈಸೂರು ಸಂಸ್ಥೆಯ ಹಿರಿಯ ರಂಗಕರ್ಮಿ ಪ್ರಸಾದ್ ಕುಂದೂರ್ ಅನುವಾದಿಸಿರುವ ಮಹೇಶ್ ಎಲ್ಕುಂಚವಾರ್ ಅವರ 'ಪಾರ್ಟಿ' ನಾಟಕದ ಪ್ರದರ್ಶನ ಏ.3, 4, 5ರಂದು ಕಲಾಮಂದಿರ ಆವರಣದ ಕಿರು ರಂಗ ಮಂದಿರದಲ್ಲಿ ನಡೆಯಲಿದೆ ಎಂದು ಹಿರಿಯ ವನ್ಯಜೀವಿ ಛಾಯಾಗ್ರಾಹಕ ಲೋಕೇಶ್ ಮೊಸಳೆ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಲ್ಲಾ ದಿನವೂ ಸಂಜೆ 7 ಗಂಟೆಗೆ ನಾಟಕ ಪ್ರದರ್ಶನಗೊಳ್ಳಲಿದೆ. ಟಿಕೆಟ್ ದರ 100 ರೂ.ಗಳಾಗಿವೆ. ಭಾರತೀಯ ಆಧುನಿಕ ನಾಟಕ ಸಾಹಿತ್ಯದ ಪ್ರಮುಖ ಧ್ವನಿಗಳಲ್ಲಿ ಒಬ್ಬರಾದ ಮಹೇಶ್ ಎಲ್ಕುಂಚವಾರ್ ಮಾನವ ಸಂಬಂಧಗಳ ಒಳ ಹೊರಗಿನ ಸಂಘರ್ಷ, ಅಸ್ತಿತ್ವದ ಪ್ರಶ್ನೆ, ಬೌದ್ಧಿಕ ವರ್ಗದ ನೈತಿಕ ಸಂಕೀರ್ಣತೆಗಳನ್ನು ತಮ್ಮ ಕೃತಿಗಳಲ್ಲಿ ವಿಶ್ಲೇಷಿಸಿದ್ದಾರೆ. ಪಾರ್ಟಿ ನಾಟಕ ಸಹಾ ಸಾಮಾಜಿಕ ಕೂಟದ ನೆಲೆಯಲ್ಲಿ ಸಾಗುತ್ತ ಅದರಲ್ಲಿ ಭಾಗವಹಿಸುವ ಲೇಖಕರು, ಕಲಾವಿದರು, ಬೌದ್ಧಿಕ ವ್ಯಕ್ತಿಗಳ ಸಂಭಾಷಣೆ ಮೂಲಕ ಅವರ ಅಹಂ, ಸ್ಪರ್ಧೆ, ವೈಫಲ್ಯ ಮತ್ತು ಅಂತರಂಗದ ಸಂಘರ್ಷಗಳನ್ನು ತೆರೆದಿಡುತ್ತದೆ ಎಂದರು.

ಅನುವಾದಕ ಪ್ರಸಾದ್ ಕುಂದೂರ್ ಮಾತನಾಡಿ, ಈ ನಾಟಕ ಮನುಷ್ಯನ ಸಂವೇದನೆಗೆ ಏಟು ಕೊಡುತ್ತದೆ. ಮನುಷ್ಯನ ಮುಖವಾಡ ಬಯಲು ಮಾಡುತ್ತದೆ. ಪ್ರತಿ ಮುಖವಾಡದ ಹಿಂದೆ ಅಹನೀಯ ದರ್ಪ, ದೌರ್ಜನ್ಯ ಇರುವುದನ್ನು ಬಯಲಿಗೆಳೆಯುತ್ತದೆ. ಪಾರ್ಟಿಯಲ್ಲಿ ಪಾಲ್ಗೊಂಡವರು ತಮ್ಮ ಮಾತುಗಳ ಮೂಲಕ ಹೇಗೆ ಬೆತ್ತಲಾಗುತ್ತಾರೆ. ಸಭ್ಯ ಸಮಾಜದ ಸೋಗಲಾಡಿತನ ಹೇಗಿರುತ್ತದೆ ಎಂಬುದನ್ನು ನಾಟಕ ಬಹಿರಂಗಪಡಿಸುತ್ತದೆ. ಹಿರಿಯ ರಂಗಕರ್ಮಿ ಚಿದಂಬರರಾವ್ ಜಂಬೆ ನಿರ್ದೇಶಿಸಿದ್ದಾರೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಚಿದಂಬರರಾವ್ ಜಂಬೆ, ಶ್ರೀನಿವಾಸ್ ಪಾಲಹಳ್ಳಿ, ಎಂ.ಎಂ. ಸುಗುಣ ಉಪಸ್ಥಿತರಿದ್ದರು.

ಜಾತ್ರಾ ಮಹೋತ್ಸವ...



ಮೈಸೂರಿನ 23ನೇ ವಾರ್ಡಿನಲ್ಲಿರುವ ಗಾಣಿಗರ ಬೀದಿಯ ವಾಣಿಯರ್ ಸಂಘ ಮಾರಿಯಮ್ಮನ ದೇವಸ್ಥಾನದ ಜಾತ್ರಾ ಮಹೋತ್ಸವದಲ್ಲಿ ಶಾಸಕ ಕೆ.ಹರೀಶ್‌ಗೌಡ ಅವರನ್ನು ತಮಿಳುನಾಡಿನ ಅಯ್ಯಪ್ಪಸ್ವಾಮಿ ದೇವರ ಗಾಯಕರಾದ ವೀರಮಣಿ ರಾಜು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಮಾದೇವ್, ಶ್ರೀ ಕನಕ ಪತ್ತಿನ ಸಹಕಾರಿ ಸಂಘದ ನಿರ್ದೇಶಕ ರವಿಚಂದ್ರ, ನವೀನ್ ಮತ್ತಿತರರು ಉಪಸ್ಥಿತರಿದ್ದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ರೈತರ ಶಿಬಿರ

ಮೈಸೂರು, ಮಾ. 31– ಸುತ್ತೂರು ಶ್ರೀಮಠ, ಜೆಎಸ್‌ಎಸ್ ಮಹಾವಿದ್ಯಾ ಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಗಳ ಸಂಯುಕ್ತಾಶ್ರಯದಲ್ಲಿ ಮೇ 1ರಿಂದ 3ರವರೆಗೆ ಸುತ್ತೂರು ಶ್ರೀಕ್ಷೇತ್ರದಲ್ಲಿ ರೈತರ ಶಿಬಿರವನ್ನು ಏರ್ಪಡಿಸಲಾಗಿದೆ.

ಶಿಬಿರದಲ್ಲಿ ಸಾಮೂಹಿಕ ಪ್ರಾರ್ಥನೆ, ಯೋಗ, ವಿಶೇಷ ಉಪನ್ಯಾಸ, ಚಿಂತನ–ಮಂಥನ, ದೇಸಿ ಆಟಗಳು, ಸಾಂಸ್ಕೃತಿಕ ಕಾರ್ಯಕ್ರಮಗಳಿರುತ್ತವೆ. ಆಸಕ್ತರು ಶಿಬಿರದ ಸಂಚಾಲಕರಾದ ಡಾ.ಜ್ಞಾನೇಶ್ (78939 00859), ಶಶಿಕುಮಾರ್ (98809 49 689), ಜಗದೀಶ್ ಹಿರೇಮಠ (74061 24948), ಯೋಗೇಶ್ ಪ್ರಭುಸ್ವಾಮಿ (9741 397666) ಹಾಗೂ ಶಿವಕುಮಾರ್ (7899877940) ಇವರನ್ನು ಸಂಪರ್ಕಿಸಿ ವಿವರಗಳನ್ನು ಪಡೆದು ನೋಂದಾಯಿಸಿಕೊಳ್ಳಬಹುದು. www.jssonline.orgಯಿಂದ ವಿವರ ಪಡೆಯಬಹುದು. ಇ–ಮೇಲ್ (jsspublications@gmail.com) ಮೂಲಕವೂ ನೋಂದಾಯಿಸಿಕೊಳ್ಳಬಹುದಾಗಿದೆ.

ಪುನೀತ್ ಹುಟ್ಟುಹಬ್ಬ ಆಚರಣೆ...



ಮೈಸೂರಿನ ಸ್ನೇಹ ಸಂಗಮ ಗೆಳೆಯರ ಬಳಗ ಆಯೋಜಿಸಿದ್ದ ಹೃದಯವಂತ ನಟ ದಿವಂಗತ ಪುನೀತ್ ರಾಜಕುಮಾರ್ ಅವರ ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ಕೃಷ್ಣರಾಜ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಭಾಗವಹಿಸಿದ್ದರು. ಈ ವೇಳೆ ನಗರಪಾಲಿಕೆ ಮಾಜಿ ಸದಸ್ಯರಾದ ಎಂ.ಸುನೀಲ್, ರಾಜು, ಗೋಪಿ, ಹನುಮಂತು, ಸುಬ್ರಹ್ಮಣ್ಯ, ಕೀರ್ತಿ, ಮಂಜು,ಲತಾ ಮಹದೇವಪ್ಪ, ಗಾಯತ್ರಿ ಹಾಗೂ ಮತ್ತಿತರರ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮಹಾವೀರ್ ಜಯಂತಿ: ಪ್ರಾಣಿ ಪಕ್ಷಿಗಳಿಗೆ ನೀರಿನ ತೊಟ್ಟಿ ಅಳವಡಿಕೆ



ಮೈಸೂರಿನ ಹಳೆ ಡಿಸಿ ಕಚೇರಿ ಮುಂಭಾಗ ಪ್ರಾಣಿ–ಪಕ್ಷಿಗಳಿಗೆ ನೀರಿನ ತೊಟ್ಟಿ ಅಳವಡಿಸಿ ಮಹಾವೀರ ಜಯಂತಿಯನ್ನು ಕೆಎಂಪಿಕೆ ಟ್ರಸ್ಟ್ ವತಿಯಿಂದ ಆಚರಿಸಲಾಯಿತು.

ಮೈಸೂರು,ಮಾ.31–ಜೈನ ಧರ್ಮದ ಕೊನೆಯ ತೀರ್ಥಂಕರರಾಗಿದ್ದ ಭಗವಾನ್ ಮಹಾವೀರರು ಸತ್ಯ ಮತ್ತು ಅಹಿಂಸೆಯ ಮಾರ್ಗವನ್ನು ತೋರಿಸಿದರು ಎಂದು ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ್ ಅಯ್ಯಂಗಾರ್ ಹೇಳಿದರು.

ಮಹಾವೀರ ಜಯಂತಿ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಮನುಷ್ಯ ಹುಟ್ಟಿನಿಂದಲೇ ಶ್ರೇಷ್ಠನಾಗುವುದಿಲ್ಲ. ಸತ್ಯದ ಹಾದಿಯಲ್ಲಿ, ದಾರ್ಶನಿಕರ ತತ್ವ–ಸಿದ್ಧಾಂತಗಳನ್ನು ನಂಬಿ ನಡೆದಾಗ ಮನುಷ್ಯನ ಜೀವನ ಶ್ರೇಷ್ಠವಾಗುವುದು ಎಂದು ಅಭಿಪ್ರಾಯಪಟ್ಟರು.

ಬಿಸಿಲಿನ ಬೇಗೆಯಿಂದ ಎಲ್ಲ ಜೀವಿಗಳು ತತ್ತರಿಸುತ್ತಿವೆ. ಮನುಷ್ಯರಷ್ಟೇ ಅಲ್ಲ, ಪ್ರಾಣಿ–ಪಕ್ಷಿಗಳು ನೀರು, ಆಹಾರಕ್ಕಾಗಿ ಕಷ್ಟಪಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಪ್ರಾಣಿ–ಪಕ್ಷಿಗಳ ಸಂಕಷ್ಟ ಅರಿತು ಭಗವಾನ್ ಮಹಾವೀರ ಜಯಂತಿ ಅಂಗವಾಗಿ ನೀರಿನ ತೊಟ್ಟಿ ಅಳವಡಿಸಲು ಮುಂದಾಗಿದ್ದಾರೆ. ಮನುಷ್ಯನ ಜೀವ ಎಷ್ಟು ಮುಖ್ಯವೋ ಪ್ರಾಣಿ–ಪಕ್ಷಿಗಳ ಜೀವ ಕೂಡ ಅಷ್ಟೇ ಮುಖ್ಯ. ಬಿಸಿಲಿನ ತಾಪಮಾನ ಹೆಚ್ಚಾಗುತ್ತಿದೆ. ಜಲಮೂಲಗಳು ಬತ್ತುತ್ತಿವೆ. ಕುಡಿಯುವ ನೀರಿಗೂ ತತ್ವಾರ ಶುರುವಾಗಿದೆ. ನೀರಿಗಾಗಿ ಮೈಲುಗಟ್ಟಲೆ ಅಲೆಯಬೇಕಾಗಿದೆ. ಇದು ಸಣ್ಣ ಪ್ರಾಣಿ–ಪಕ್ಷಿಗಳ ಬದುಕಿಗೆ ಮಾರಕವಾಗಿದೆ. ನೀರು ಮತ್ತು ಆಹಾರ ಇಲ್ಲದೆ ಪಕ್ಷಿಗಳು ಜೀವ ಕಳೆದುಕೊಳ್ಳುವ ಆತಂಕ ಕಾಡುತ್ತಿದೆ. ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಟ್ರಸ್ಟ್‌ನ ಪದಾಧಿಕಾರಿಗಳಾದ ಜಿ.ರಾಘವೇಂದ್ರ, ಸಂದೇಶ್ ಪವರ್, ಎಸ್.ಎನ್.ರಾಜೇಶ್, ರವಿಚಂದ್ರ, ಸಚಿನ್ ನಾಯಕ್, ಅಮಿತ್, ರಾಕೇಶ್, ಕೃಷ್ಣಮೂರ್ತಿ ನಿಂಗಮ್ಮ ಹಾಗೂ ಇನ್ನಿತರರು ಹಾಜರಿದ್ದರು.

ರಾಷ್ಟ್ರೀಯ ಸಬ್ ಜೂನಿಯರ್ ಬಾಲಕರ ಥ್ರೋಬಾಲ್ ತಂಡಕ್ಕೆ ಆಯ್ಕೆ



ಮೈಸೂರು,ಮಾ.31–ಮೈಸೂರಿನ ಜಯನಗರದಲ್ಲಿರುವ ಶ್ರೀ ವಿವೇಕ ಬಾಲೋದ್ಯಾನ ಪಬ್ಲಿಕ್ ಶಾಲೆಯಿಂದ 39ನೇ ರಾಷ್ಟ್ರೀಯ ಸಬ್ ಜೂನಿಯರ್ ಬಾಲಕರ ಥ್ರೋ ಬಾಲ್ ತಂಡಕ್ಕೆ 10ನೇ ತರಗತಿ ವಿದ್ಯಾರ್ಥಿ ಉದ್ಧವ ಆಯ್ಕೆಯಾಗಿದ್ದಾನೆಂದು ಶಾಲಾ ಆಡಳಿತ ಮಂಡಳಿ ತಿಳಿಸಿದೆ.

ಇಂದು ತ್ರಿವಿಧ ದಾಸೋಹಿ ಡಾ.ಶಿವಕುಮಾರಸ್ವಾಮಿಗಳ 119ನೇ ಜಯಂತ್ಯೋತ್ಸವ



ಮೈಸೂರು, ಮಾ.31(ಜಿಎ)–ಬಸವ ಬಳಗ ಮತ್ತು ಡಾ.ಶಿವಕುಮಾರ ಸ್ವಾಮೀಜಿ ಭಕ್ತ ವೃಂದದ ವತಿಯಿಂದ ಏ.1ರಂದು ಬೆಳಗ್ಗೆ 9ಗಂಟೆಗೆ ನಗರದ ಬಸವೇಶ್ವರ ಮುಖ್ಯ ರಸ್ತೆ 13ನೇ ಅಡ್ಡ ರಸ್ತೆಯಲ್ಲಿ ತ್ರಿವಿಧ ದಾಸೋಹಿ ಡಾ.ಶಿವಕುಮಾರ ಸ್ವಾಮೀಜಿಯವರ 119ನೇ ಜಯಂತ್ಯೋತ್ಸವ ಆಯೋಜಿಸಲಾಗಿದೆ ಎಂದು ಅಧ್ಯಕ್ಷ ಸಿ.ಸಂದೀಪ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ಜಯಂತ್ಯೋತ್ಸವದಲ್ಲಿ ಶ್ರೀ ಹೊಸಮಠದ ಚಿದಾನಂದ ಸ್ವಾಮೀಜಿ, ಗುರುಶಾಂತ ಸ್ವಾಮೀಜಿ, ಇಮ್ಮಡಿ ಮಡಿವಾಳೇಶ್ವರ ಸ್ವಾಮೀಜಿ, ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಶ್ರೀಕಂಠ ಸ್ವಾಮೀಜಿ ಹಾಗೂ ಹರಗುರು ಚರಮೂರ್ತಿಗಳು ಸಾನ್ನಿಧ್ಯ ವಹಿಸಲಿದ್ದಾರೆ. ಭವ್ಯ ಮೆರವಣಿಗೆ ವಿವಿಧ ರಸ್ತೆಗಳಲ್ಲಿ ಸಾಗಿ ಆರಂಭದ ಸ್ಥಳಕ್ಕೇ ತಲುಪಲಿದೆ. 10 ಗಂಟೆಗೆ ನುರಿತ ಕಲಾವಿದರಿಂದ ಸುಗಮ ಸಂಗೀತ ಇರಲಿದೆ. ಮಧ್ಯಾಹ್ನ 12ಗಂಟೆಗೆ ಪ್ರಸಾದ ವಿನಿಯೋಗವಿದೆ ಎಂದರು. ಗೋಷ್ಠಿಯಲ್ಲಿ ಅಂಬಳೆ ಶಿವಣ್ಣ, ಲೋಹಿತ್, ಮಹದೇವ್, ಶಂಕರ್ ಜೆ.ಪಿ. ನಗರ, ಪ್ರಭುಶಂಕರ್, ಮುಕುಂದರಾಜ್ ಅರಸ್ ಮತ್ತಿತರರು ಉಪಸ್ಥಿತರಿದ್ದರು.

ವಾಟಾಳ್ ನಾಗರಾಜ್ ಪ್ರತಿಭಟನೆ...



ಮೈಸೂರಿನ ಹಾರ್ಡಿಂಗ್ ಸರ್ಕಲ್‌ನಲ್ಲಿ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಯುದ್ಧ ನಿಲ್ಲಿಸಿ, ಗ್ಯಾಸ್ ಸಿಲಿಂಡರ್ ಕೊಡಿ ಎಂದು ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆಯಲ್ಲಿ ಪಾರ್ಥಸಾರಥಿ, ಮೂಗೂರು ನಂಜುಂಡಸ್ವಾಮಿ, ತೇಜೇಶ್ ಲೋಕೇಶ್ ಗೌಡ, ಶಿವಶಂಕರ್, ಸಿಂದುವಳ್ಳಿ ಶಿವಕುಮಾರ್, ಶಿವರಾಂ, ರಾಧಾಕೃಷ್ಣ, ದರ್ಶನ್ ಗೌಡ, ರವೀಶ್ ಇನ್ನಿತರರು ಉಪಸ್ಥಿತರಿದ್ದರು.

ಬ್ಯೂಟಿಷಿಯನ್ ತರಬೇತಿ ಪಡೆದ ಪ್ರಶಿಕ್ಷಣಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ...



ಮೈಸೂರು ತಾಲೂಕು ಜಯಪುರ ಗ್ರಾಮದ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಅಂಗಸಂಸ್ಥೆ ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರದ ಜಯಪುರ ಶಾಖೆಯಲ್ಲಿ ಫ್ಯಾಷನ್ ಡಿಸೈನಿಂಗ್, ಬ್ಯೂಟಿಷಿಯನ್ ತರಬೇತಿ ಪಡೆದ 6ನೇ ಬ್ಯಾಚ್‌ನ ಪ್ರಶಿಕ್ಷಣಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು. ಈ ವೇಳೆ ಉದ್ಯಮಿ, ಹೆಚ್.ಎಂ.ಐ ಫ್ರೂಟ್ಸ್ ಮಾಲೀಕ ಮೋಹಿಯುದ್ದಿನ್, ಸರಗೂರು ವಿವೇಕಾನಂದ ಸ್ಮಾರಕ ಆಸ್ಪತ್ರೆ ಕಾರ್ಯಾಚರಣೆ ವ್ಯವಸ್ಥಾಪಕಿ ಬಿ.ಜಿ.ಸಂಧ್ಯಾ, ಜಯಪುರ ಗ್ರಾ.ಪಂ. ಮಾಜಿ ಅಧ್ಯಕ್ಷ ಎಂ.ಮಾದೇವಯ್ಯ, ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯದ ವ್ಯವಸ್ಥಾಪಕ ಕೆ.ಎಲ್.ಶಿವಪ್ಪ, ಬ್ಯೂಟಿಷಿಯನ್ ತರಬೇತಿ ಶಿಕ್ಷಕಿ ನೇತ್ರಾವತಿ, ಫ್ಯಾಷನ್ ಡಿಸೈನಿಂಗ್ ತರಬೇತಿ ಶಿಕ್ಷಕಿ ವಿಜಯ ಲಕ್ಷ್ಮೀ, ಟ್ರೈನಿಂಗ್ ಕೋ–ಆರ್ಡಿನೇಟರ್ ಅಬ್ದುಲ್ ರಶೀದ್, ಸಂಸ್ಥೆ ಸಿಬ್ಬಂದಿ ಐ.ಬಿ.ರವಿ, ರುಕ್ಮಿಣಿ ಇನ್ನಿತರರು ಉಪಸ್ಥಿತರಿದ್ದರು.

ಕಾಥ್ಕಿ ಕೈಗಾರಿಕ ಸಂಘದ ಪದಾಧಿಕಾರಿಗಳ ಆಯ್ಕೆ

ಮೈಸೂರು, ಮಾ.31(ಜಿಎ)–ಅಡಕನಹಳ್ಳಿ, ಕಡಕೊಳ, ತಾಂಡ್ಯ, ಇಮ್ಮಾವು ಮತ್ತು ಕೋಚನಹಳ್ಳಿ ಪ್ರದೇಶಗಳ ಕೈಗಾರಿಕೆಗಳನ್ನು ಒಳಗೊಂಡಂತೆ ಅಸ್ತಿತ್ವಕ್ಕೆ ಬಂದಿರುವ ಕಾಥ್ಕಿ ಕೈಗಾರಿಕೆಗಳ ಸಂಘಕ್ಕೆ ನೂತನ ಅವಧಿಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ಗೌರವಾಧ್ಯಕ್ಷ ಎಚ್.ರಾಮಕೃಷ್ಣೇಗೌಡ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಧ್ಯಕ್ಷರಾಗಿ ಜೋಷಿ ಬೇಸಿಲ್, ಉಪಾಧ್ಯಕ್ಷರಾಗಿ ದರ್ಶನ್, ಪ್ರಧಾನ ಕಾರ್ಯದರ್ಶಿಯಾಗಿ ಜಿ.ವಿ. ಪಿಂಟೋ, ಕಾರ್ಯದರ್ಶಿಯಾಗಿ ಮಾಧವಿಲತಾ, ಸಂಘಟನಾ ಕಾರ್ಯದರ್ಶಿಯಾಗಿ ಎ.ಎಸ್.ಶ್ರವಣ ಶೇಷಾದ್ರಿ, ಖಜಾಂಚಿಯಾಗಿ ಕೆ.ಸೈಯದ್ ಜುಬೇರ್ ಆಯ್ಕೆಯಾಗಿದ್ದಾರೆ ಎಂದು ತಿಳಿಸಿದರು.

ಈ ಭಾಗದಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಅಧಿಕಾರಿಗಳಿಂದ ಸೂಕ್ತ ಸ್ಪಂದನೆ ದೊರಕುತ್ತಿಲ್ಲ. ಹಣಕಾಸು ನೆರವು ಪಡೆಯುವುದು ಪರವಾನಿಗೆ ದೊರಕಿಸಿಕೊಳ್ಳುವುದು ಕಷ್ಟಕರವಾಗಿದೆ. ಈ ಕುರಿತು ನಡೆಸುವ ಪತ್ರ ವ್ಯವಹಾರಗಳಿಗೆ ಸಕಾಲದಲ್ಲಿ ಉತ್ತರ ಸಿಗುತ್ತಿಲ್ಲ. ಇತ್ತೀಚಿನ ವರ್ಷಗಳಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತ ಕೈಗಾರಿಕೆಗಳು ಸಾಗಿವೆ. ಹೀಗಿರುವಾಗ ಸೂಕ್ತ ನೆರವು ದೊರೆಯದಿದ್ದರೆ ಕೈಗಾರಿಕೆ ನಡೆಸುವುದು ಕಷ್ಟವಾಗುತ್ತದೆ. ಇದರಿಂದ ಆರ್ಥಿಕತೆಗೆ ಹೊಡೆತ ಮಾತ್ರವಲ್ಲದೇ ನಿರುದ್ಯೋಗವೂ ಹೆಚ್ಚಲಿದೆ. ಹೀಗಾಗಿ ಸರ್ಕಾರ ತಮ್ಮ ನೆರವಿಗೆ ಬರಬೇಕೆಂದು ಕೋರಿದರು. ಸುದ್ದಿಗೋಷ್ಠಿಯಲ್ಲಿ ಜೋಷಿ ಬೇಸಿಲ್, ದರ್ಶನ್, ಜಿ.ವಿ. ಪಿಂಟೋ, ಮಾಧವಿಲತಾ, ಕೆ.ಸೈಯದ್ ಜುಬೇರ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

1.4.2026 ಬುಧವಾರ, ಮಳೆ ನಕ್ಷತ್ರ: ರೇವತಿ 31.03.2026 ರಿಂದ 13.04.2026
ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ,
ತಿಥಿ: ಹುಣ್ಣಿಮೆ, ನಕ್ಷತ್ರ: ಉತ್ತರ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

■ **ನನ್ನವ್ವ ಸಾಂಸ್ಕೃತಿಕ ಕಲಾ ತಂಡ :** ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಸಂವಿಧಾನ ವಿಚಾರ ಕುರಿತು ವಿಚಾರ ಸಂಕಿರಣ, ಉದ್ಘಾಟನೆ : ಮಾಜಿ ಸಚಿವ ಬಿ. ಸೋಮಶೇಖರ್, ಅಧ್ಯಕ್ಷತೆ : ಸುತ್ತೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ಜಿಮಾರಹಳ್ಳಿ ರಂಗಸ್ವಾಮಿ, ಪುಷ್ಪಾರ್ಚನೆ : ತಿ. ನರಸೀಪುರ ತಾಲೂಕು ಪಂಚಾಯಿತಿ ತಾಂತ್ರಿಕ ಸಹಾಯಕ ಇಂಜಿನಿಯರ್ ಎಂ. ಕಿರಣ್‌ಕುಮಾರ್, ವಿಚಾರ ಮಂಡನೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು : ವಿಶ್ರಾಂತ ಶಿಕ್ಷಕ ಡಾ. ಅಲ್ಲೈ ನಾ. ಗಂಗಾಧರಪ್ಪ, ಕವಯತ್ರಿ ಶ್ರೀಮತಿ ಪ್ರಭಶಾಸ್ತ್ರಿ ಜೋಶ್ಯುಲ, ಸ್ಥಳ: ನಮನ ಕಲಾ ಮಂಟಪ, ಅಶೋಕ ರಸ್ತೆ, ಬೆಳಗ್ಗೆ 11ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು :** ಮಹಿಳಾ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸ, ಅಂಬೇಡ್ಕರ್ ಹೋರಾಟಕ್ಕೆ ಜೊತೆಯಾದ ಮಹಿಳೆಯರ ಕಥನ, ಉಪನ್ಯಾಸ : ಸಂದರ್ಶಕ ಪ್ರಾಧ್ಯಾಪಕ ಪ್ರೊ. ರಹಮತ್ ತರೀಕೆರೆ, ಅಧ್ಯಕ್ಷತೆ : ಪ್ರಿನ್ಸಿಪಾಲ್ ಡಾ. ಕೆ.ಸಿ. ಭದ್ರಗಿರಿಯಯ್ಯ, ಉಪಸ್ಥಿತರು : ಹಿರಿಯ ಪ್ರಾಧ್ಯಾಪಕ ಡಾ. ಎಸ್. ಸೋಮಶೇಖರ್, ಡಾ. ಎಸ್. ಆನಂದಕುಮಾರ್, ಸ್ಥಳ: ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಳಗ್ಗೆ 11ಕ್ಕೆ.

■ **ರಾಜೀವ್ ಗಾಂಧಿ ಫೌಂಡೇಷನ್ :** ರಸಗಳು ಮತ್ತು ಭಾವಗಳು, ಕಥಕ್ ನೃತ್ಯಪಟು ಪ್ರಸೋಬ್ ಕಲಾಮಂದಲಮ್ ಅವರಿಂದ ಭಾವನೆಗಳ ಭಾಷೆ, ಭಾರತೀಯ ಸೌಂದರ್ಯಶಾಸ್ತ್ರದ ಮೂಲಕ ಸಾಕಾರಗೊಂಡ ಅಭಿವ್ಯಕ್ತಿ ಕಾರ್ಯಕ್ರಮ, ಸ್ಥಳ: ಹಾರ್ಡ್ವಿಕ್ ಸ್ಕೂಲ್ ಆವರಣ, ಜೆಎಲ್‌ಬಿ ರಸ್ತೆ, ಸಂಜೆ 5 ರಿಂದ.

■ **ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು :** ಬೆಳದಿಂಗಳ ಸಂಗೀತ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉಸ್ತಾದ್ ಡಾ. ಮೊಹಸಿನ್ ಖಾನ್ ಅವರಿಂದ ಸಿತಾರ್ ವಾದನ, ಪಂಡಿತ್ ರಾಜೇಂದ್ರ ನಾಕೋಡ–ತಬಲ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

■ **ಅರಳಿಕಟ್ಟೆ ಶ್ರೀರಾಮ ಧಾರ್ಮಿಕ ಮತ್ತು ದಾನದತ್ತಿ:** ಶ್ರೀ ಪರಾಭವನಾಮ ಸಂವತ್ಸರ ಶ್ರೀರಾಮ ನವಮಿ ಪ್ರಯುಕ್ತ ವಿದ್ಯಾರಣ್ಯಪುರಂನ ಶ್ರೀ ಲಕ್ಷ್ಮಿಕಾಂತ ಭಜನಾ ಮಂಡಳಿಯವರಿಂದ ಭಜನೆ ಸ್ಥಳ: ಜಯಲಕ್ಷ್ಮಿ ವಿಲಾಸ ರಸ್ತೆ, ಚಾಮರಾಜಪುರಂ, ಸಂಜೆ 6.30ಕ್ಕೆ

■ **ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್:** ಕಲಾಸಪ್ತಮಿ, ವಾರದ ಸಾಂಸ್ಕೃತಿಕ ಕಾರ್ಯಕ್ರಮ, ಪಾಶ್ಚಾತ್ಯ ಗಾಳಿ ವಾದ್ಯಗಳಲ್ಲಿ ಕರ್ನಾಟಕ ಸಂಗೀತ, ಸಂಜೆ 6 ಗಂಟೆಗೆ ವಿದ್ವಾನ್ ಹರೀಶ್ ಪಾಂಡವ್ ಅವರಿಂದ ಸ್ಯಾಕ್ಸೋಫೋನ್ ವಾದನ, ವಿದ್ವಾನ್ ಎಂ.ಡಿ.ಅರ್ಜುನ್–ವಯೋಲಿನ್, ವಿದ್ವಾನ್ ಕುಮಾರ ಸ್ವಾಮಿ–ಮೃದಂಗ, ವಿದ್ವಾನ್ ಟಿ.ಎ.ರಾಮಾನುಜ–ಮೋರ್ಚಿಂಗ್; ಮೋಹನ್ ರಾಮು ಅವರಿಂದ ಕ್ಲಾರಿಯೋನೆಟ್ ವಾದನ, ಸ್ಥಳ: ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್, ವಿಜಯನಗರ, ಸಂಜೆ 7ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಅಂಚೆ ದನಿ ಪಾರಿವಾಳದಿಂದ ಡ್ರೋನ್‌ವರೆಗೆ ಅಂಚೆ ಪಯಣ – ಬಾನುಲಿ ಸರಣಿ, ಪ್ರಸ್ತುತಿ–ಡಾ. ಅಮ್ಮ ಸಂದ್ರ ಸುರೇಶ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎನ್. ಹೇಮಾ ಹಾಗೂ ಹಂಸಿನಿ ಎಸ್. ಕುಮಾರ್, ವ್ಯಾಖ್ಯಾನ–ಪ್ರೊ. ಮೈಸೂರು ಕೃಷ್ಣಮೂರ್ತಿ, 6.50 ರೈತರಿಗೆ ಸಲಹೆ, 7.15 ಪ್ರಾಯೋಜಿತ ಕಾರ್ಯಕ್ರಮ, ಲಿಡ್ಕರ್ ನಂಬಿಕೆ ನಿರಂತರ, ಪ್ರಾಯೋಜಕರು–ಡಾ. ಬಾಬು ಜಗಜೀವನ್ ರಾಮ್ ಚರ್ಮೋದ್ಯಮಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು, 7.45 ಕನ್ನಡ ಚಿತ್ರಗೀತೆಗಳು, 8.30 ಆಯುಷ್ ವಾಣಿ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಅಯುಷ್ ಇಲಾಖೆ, ಕರ್ನಾಟಕ ಸರ್ಕಾರ, 8.30 ಚಿತ್ರಗೀತೆಗಳು, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ–ಪಂಡಿತ್ ಜಸ್ ರಾಜ್ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ : 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಸ್, ರಾಕೇಶ್–ಕೊಳಲು ವಾದನ, 4.00 ಮಹಿಳಾರಂಗ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ–ಅನೂರಾಧ, 5.00 ಕಟ್ಟೋಣ ಬನ್ನಿ ನಿರ್ಮಾಣ ತಾಂತ್ರಿಕತೆಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಪ್ರಾಯೋಜಕರು– ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಇಂಡಿಯಾ, ಮೈಸೂರು ಛಾಪ್ಟರ್. ವಿಷಯ–ದುರಸ್ತಿ ಮತ್ತು ವಾರ್ಷಿಕ ಕಟ್ಟಡ ನಿರ್ವಹಣೆಯ ಪ್ರಾಮುಖ್ಯತೆ, ಭಾಗವಹಿಸುತ್ತಾರೆ–Streectral Consultant ಗಳಾದ ಎಚ್.ಎಸ್. ದೀಪಕ್ ಮತ್ತು ವಿಕ್ರಮ್, ಪ್ರಸ್ತುತಿ–ಎನ್.ಕೇಶವಮೂರ್ತಿ, 5.30 ಚಿತ್ರಗೀತೆಗಳು, 6.50 ಕೃಷಿರಂಗ–ಪಶು ಆಹಾರ ಉತ್ಪಾದನೆ ಹಾಗೂ ನಿರ್ವಹಣೆ ಈ ಕುರಿತು ಪಶು ವೈದ್ಯರಾದ ಡಾ. ಚನ್ನೆಗೌಡ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್. ಕೇಶವ ಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಸಂಸತ್ ಸಮೀಕ್ಷಾ, 8.15 ಕರ್ನಾಟಕ ಶಾಸ್ತ್ರೀಯ ಸಂಗೀತ, ಮಂಚಾಲ ಜಗನ್ನಾಥರಾವ್–ವೀಣಾ ವಾದನ, 9.30 ಕ್ರೀಡಾಲೋಕ, 10.00 ಸಂಸತ್ತಿನ ಪ್ರಶ್ನೋತ್ತರ ಅವಧಿಯ ಕಲಾಪಗಳ ಧ್ವನಿಮುದ್ರಣದ ಪ್ರಸಾರ.

ಶ್ರೀರಾಮ ನವಮಿ ಕಾರ್ಯಕ್ರಮಗಳು



■ **ಶ್ರೀ ರಾಮ ಮಂದಿರ, ಜಯನಗರ ಮೈಸೂರು:** 60 ನೇ ವರ್ಷದ ರಾಮೋತ್ಸವ, ಶ್ರೀರಾಮಚಂದ್ರಸ್ವಾಮಿಯವರ ಸೀತಾಕಲ್ಯಾಣ, ಪಟ್ಟಾಭಿಷೇಕ, ಶ್ರೀ ಆದಿತ್ಯಾದಿ ನವಗ್ರಹಗಳ ವಾರ್ಷಿಕೋತ್ಸವ, ಹನಮಂತೋತ್ಸವ ಮತ್ತು ವಸಂತೋತ್ಸವ ಕಾರ್ಯಕ್ರಮ, ಬೆಳಗ್ಗೆ 9 ಗಂಟೆಗೆ ಶ್ರೀ ಸೀತಾರಾಮರ ಕಲ್ಯಾಣೋತ್ಸವ, ಸಂಜೆ 6.30 ರಿಂದ ಡಾ. ತಾಂಡವಮೂರ್ತಿ ಮತ್ತು ಶಿಷ್ಯ ವೃಂದದವರಿಂದ ಪಂಚ ಪಿಟೀಲು ವಾದನ, ರಾತ್ರಿ 8.45ಕ್ಕೆ ಶ್ರೀ ಸೀತಾರಾಮರ ಶಯನೋತ್ಸವ ಕಾರ್ಯಕ್ರಮ, ಸ್ಥಳ: ಶ್ರೀರಾಮಮಂದಿರ ಜಯನಗರ

■ **ಶ್ರೀರಾಮ ಸೇವಾ ಮಂಡಳಿ :** 73ನೇ ವರ್ಷದ ಶ್ರೀರಾಮೋತ್ಸವ, ಸಂಜೆ 5.30 ರಿಂದ ಬಾಲಾಜಿ ಭಜನಾ ಮಂಡಳಿಯಿಂದ ಭಜನೆ, ಸಂಜೆ 6.30ಕ್ಕೆ ವಿದುಷಿ ಕು. ಅಕ್ಷತಾ ರುದ್ರಪಟ್ಟಣ ಮತ್ತು ವೃಂದದವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸ್ಥಳ: ಶ್ರೀ ಅವನಿಶಂಕರ ಮಠ 4ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ವಿದ್ಯಾರಣ್ಯಪುರಂ, ಮೈಸೂರು.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ ಮೈಸೂರು:** ಶ್ರೀ ಪರಭಾವ ಸಂವತ್ಸರದ 136ನೇ ವರ್ಷದ ಶ್ರೀ ರಾಮೋತ್ಸವ, ಶ್ರೀ ಪರಭಾವ ಸಂವತ್ಸರದ ಶ್ರೀ ರಾಮೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳು, ವಿದ್ವಾನ್ ಸಿಕ್ಕಿಲ್ ಗುರುಚರಣ್ ಅವರಿಂದ ಶಾಸ್ತ್ರೀಯ ಸಂಗೀತ, ವಿದ್ವಾನ್ ಮತ್ತೂರು ಶ್ರೀನಿಧಿ –ಪಿಟೀಲು, ವಿದ್ವಾನ್ ಹೆಚ್.ಎಸ್. ಸುಧೀಂದ್ರ–ಮೃದಂಗ, ವಿದ್ವಾನ್ ಗಿರಿಧರ್ ಉಡುಪ–ಘಟಂ, ಸ್ಥಳ: ಶಿವರಾಮಪೇಟೆ, ವಿನೋಬರಸ್ತೆ, ಮೈಸೂರು, ಸಂಜೆ 6.30 ರಿಂದ.

ಮೈಸೂರು ಮಿತ್ರ

ವೃತ್ತಿರಂಗಭೂಮಿ ನಾಟಕಗಳ ಪ್ರದರ್ಶನ ಯಾವುದೇ ಕಾರಣಕ್ಕೂ ನಿಲ್ಲಬಾರದು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ ಅಭಿಮತ



ಹಿರಿಯ ಕಲಾವಿದ ಮೈಮ್ ರಮೇಶ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಮಾ.31(ಎಸ್‌ಪಿಎನ್)– ತಂತ್ರಜ್ಞಾನ ಅಳವಡಿಸಿಕೊಂಡು ಆಧುನಿಕ ರಂಗಭೂಮಿ ಎಷ್ಟೇ ಆಕರ್ಷಣೀಯವಾದರೂ ವೃತ್ತಿ ರಂಗಭೂಮಿ ನಾಟಕಗಳ ಪ್ರದರ್ಶನ ನಿಲ್ಲಬಾರದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೈಸೂರು ವಿಭಾಗದ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಶ್ರೀ ರಾಜೇಶ್ವರಿ ವಸ್ತ್ರಾಲಂಕಾರ ರಂಗತಂಡ, ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ನಾಡೋಜ ಬೆಳಗಲ್ಲು ವೀರಣ್ಣನವರ 98ನೇ ಹಾಗೂ ಬಿ.ಪುಟ್ಟಸ್ವಾಮಯ್ಯನವರ 130ನೇ ಸ್ಮರಣಾರ್ಥ 'ಪೌರಾಣಿಕ ರಂಗ ಸಂಭ್ರಮ–2026'ರಲ್ಲಿ ಹಿರಿಯ ಕಲಾವಿದರಿಗೆ ಸನ್ಮಾನ ಹಾಗೂ 'ರಕ್ತರಾತ್ರಿ' ಪೌರಾಣಿಕ ನಾಟಕ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದರು.

ಯುವಕ–ಯುವತಿಯರು ಆಧುನಿಕ ರಂಗಭೂಮಿಯಲ್ಲಿ ತೊಡಗಿಸಿಕೊಳ್ಳುತ್ತಿರುವುದು ಶ್ಲಾಘನೀಯ. ಆಧುನಿಕ ರಂಗಭೂಮಿ ಜನರಿಂದ ದೂರವಾಗುತ್ತಿದೆ ಎಂದು ಭಾಸವಾದಾಗ ತಕ್ಷಣ ಅನೇಕ ನಿರ್ದೇಶಕರು, ವೃತ್ತಿ ರಂಗಭೂಮಿ ನಾಟಕಗಳ ಮೊರೆಹೋಗಿ, ಮತ್ತೆ ರಂಗಭೂಮಿ ಕಡೆಗೆ ಪ್ರೇಕ್ಷಕರನ್ನು ಕರೆ ತರುವಲ್ಲಿ ಯಶಸ್ವಿಯಾಗಿದ್ದಾರೆ. ರಂಗಾಯಣದಲ್ಲೂ ಆಧುನಿಕ ನಾಟಕಗಳಿಂದ ಪ್ರೇಕ್ಷಕರು ದೂರ ಸರಿದಾಗ ವೃತ್ತಿರಂಗಭೂಮಿ ನಾಟಕಗಳನ್ನು ಪ್ರದರ್ಶಿಸಿ, ಪ್ರೇಕ್ಷಕರನ್ನು ಮತ್ತೆ ರಂಗಭೂಮಿಕಡೆಗೆ ತರುವಲ್ಲಿ ಯಶಸ್ವಿಯಾಗಿರುವ ಅನೇಕ ಘಟನೆಗಳಿವೆ ಎಂದರು.


ವೃತ್ತಿರಂಗಭೂಮಿಯಲ್ಲಿ ಕನ್ನಡದ ಶೇಕ್ಸ್‌ಪಿಯರ್ ಎಂದೇ ಹೆಸರಾಗಿದ್ದ ಕಂದಗಲ್ಲ ಹನುಮಂತರಾಯರ ರಚನೆಯ, ಟಿ.ನಾಗರಾಜ ಹಿರೇಕುಂಬಳಗುಂಟೆ ನಿರ್ದೇಶನದ 'ರಕ್ತರಾತ್ರಿ' ಪೌರಾಣಿಕ ನಾಟಕ ಪ್ರದರ್ಶಿಸಲಾಯಿತು.

'ರಕ್ತರಾತ್ರಿ' ನಾಟಕದಲ್ಲಿ ಪ್ರಕಾಶ್ ಬೆಳಗಲ್(ಶ್ರೀಕೃಷ್ಣ), ಕೆ.ಎಸ್.ರುದ್ರೇಶ್ (ಶಿವ, ಕಲಿ), ನಾಗನಗೌಡ ಕೊಟ್ಟೂರು (ಧರ್ಮರಾಯ), ಎಸ್.ಭೀಮಪ್ಪ ಕಂದಗಲ್ಲು(ಭೀಮ), ಎಂ.ಬಿ.ಶಿವಕುಮಾರ್ (ಅರ್ಜುನ, ಗಂಧರ್ವ), ನಾಗರಾಜ್ ಹಿರೇಕುಂಬಳಗುಂಟೆ(ಶಕುನಿ), ಎಚ್.ಎಂ.ಅಮರೇಶ (ದುರ್ಯೋಧನ), ತಿಮ್ಮನಗೌಡ (ಅಶ್ವತ್ಥಾಮ), ಬಿ.ಗುರುಬಸವರಾಜ್ (ಕರ್ಣ), ವೀಣಾ ಅದೋನಿ(ದ್ರೌಪದಿ), ಜಯಶ್ರೀ ಪಾಟೀಲ(ಭಾನುಮತಿ), ಮೀನಾಕ್ಷಿ ಪಾಟೀಲ(ಉತ್ತರೆ), ಮೈಸೂರಿನ ಕಲಾವಿದರು (ಅನಂಗಪುಷ್ಪ, ಮದಹಂಸಿ) ಅಭಿನಯಿಸಿ ಪ್ರೇಕ್ಷಕರ ಮನಗೆದ್ದರು. ನೈಪಥ್ಯ ವಾದ್ಯದಲ್ಲಿ ಕ್ಯಾಷಿಯೋ ತಿಪ್ಪೇಸ್ವಾಮಿ ಸೂಲದಹಳ್ಳಿ, ತಬಲ ವಿರುಪಾಕ್ಷರಾವ್ ಮೋರಿಗೇರಿ, ಯಮನೂರಪ್ಪ ಗಿಣಿಗೇರಾ ಅವರು ರಿದಂಪ್ಯಾಡ್ ನುಡಿಸಿ ನಾಟಕಕ್ಕೆ ಮೆರಗು ತಂದರು.

ಈ ವೇಳೆ ಕನ್ನಡ ರಾಜ್ಯೋತ್ಸವ ಪುರಸ್ಕೃತರಾದ ಹಿರಿಯ ಕಲಾವಿದ ಮೈಮ್ ರಮೇಶ್ ಅವರಿಗೆ ಈ ಸಾಲಿನ ರಂಗಗೌರವ ಸಲ್ಲಿಸಲಾಯಿತು. ಹಿರಿಯ ರಂಗಕರ್ಮಿಗಳಾದ ಬಿ.ಎಂ.ರಾಮಚಂದ್ರ, ದಿನೇಶ್, ಕಲಾವಿದೆ ಭುವನ ಉಪಸ್ಥಿತರಿದ್ದರು.

ಅಮೂಲ್ಯ ನೆನಪುಗಳ ಫ್ರೇಂ....

–ಆರ್.ಜಿ.ಸಿಂಗ್
ಕಾರ್ಯದರ್ಶಿ, ರಾಮಸನ್ಸ್ ಕಲಾ ಪ್ರತಿಷ್ಠಾನ



ಚಿತ್ರ 1: 10–02–1945ರ ಗುಂಪು ಛಾಯಾಚಿತ್ರ

ಅಚ್ಚುಕಟ್ಟಾದ ಸಾಂಪ್ರದಾಯಿಕ ಆಸ್ಥಾನದ ಉಡುಪಿನ ಕುಲೀನರ ಈ ಅಧಿಕೃತ ಗುಂಪು ಛಾಯಾಚಿತ್ರವನ್ನು ಮೈಸೂರು ಅರಮನೆಯ ಮುಂಭಾಗದಲ್ಲಿ 1945ರ ಫೆಬ್ರವರಿ 10ರಂದು ತೆಗೆಸಿಕೊಳ್ಳಲಾಗಿದೆ. ಅಂದಿನ ಮೈಸೂರು ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಅವರಿಗೆ ಜಿಸಿಎಸ್‌ಐ ಗೌರವ ಸಂದ ಪ್ರಯುಕ್ತ ನಡೆದ ಸಂಭ್ರಮಾಚರಣೆ ಇದಾಗಿದ್ದು, ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಅವರು ಚಿತ್ರದಲ್ಲಿ ಮಧ್ಯಭಾಗದಲ್ಲಿ ಕುಳಿತಿರುವುದನ್ನು ಕಾಣಬಹುದು.

ಜಿಸಿಎಸ್‌ಐ (ನೈಟ್ ಗ್ರ್ಯಾಂಡ್ ಕಮಾಂಡರ್ ಆಫ್ ದಿ ಸ್ಟಾರ್ ಆಫ್ ಇಂಡಿಯಾ) ಎಂಬುದು ಭಾರತದಲ್ಲಿ ವಿಶಿಷ್ಟ ಸೇವೆ ಸಲ್ಲಿಸಿದವರಿಗೆ ನೀಡಲಾಗುತ್ತಿದ್ದ ಹಿರಿಯ ಅಶ್ವದಳ ಪದವಿಯಾಗಿತ್ತು. 'ಸ್ವರ್ಗದ ಬೆಳಕು ನಮ್ಮ ಮಾರ್ಗದರ್ಶಿ' ಎಂಬುದು ಈ ಪದವಿಯ ಧ್ಯೇಯವಾಕ್ಯವಾಗಿತ್ತು. ಇದನ್ನು ಅಂದಿನ ಸಾಮ್ರಾಜ್ಞಿ ವಿಕ್ಟೋರಿಯಾ ಸ್ಥಾಪಿಸಿದ್ದು, ರಾಜಮನೆತನದ ಇಚ್ಛೆಯಂತೆ ಪ್ರದಾನ ಮಾಡಲಾಗುತ್ತಿತ್ತು. 1857ರ ಸಿಪಾಯಿ ದಂಗೆಯ ನಾಲ್ಕು ವರ್ಷಗಳ ನಂತರದಲ್ಲಿ ಭಾರತೀಯ ರಾಜಕುಮಾರರು, ಮುಖ್ಯಸ್ಥರು ಮತ್ತು ಬ್ರಿಟಿಷ್ ಅಧಿಕಾರಿಗಳು ಮತ್ತು ಆಡಳಿತಗಾರರನ್ನು ಗೌರವಿಸಲು ಈ ಗೌರವ ಪ್ರದಾನ ಮಾಡಲಾಗುತ್ತಿತ್ತು. ಆ ಮೂಲಕ ಭಾರತದಲ್ಲಿ ವಸಾಹತುಶಾಹಿ ಶಕ್ತಿಯನ್ನು ಬಲಪಡಿಸುವ ಸಾಧನವಾಗಿ ಇದನ್ನು ಬಳಸಲಾಯಿತು.



ಚಿತ್ರ 2
GCSIನ ನಕ್ಷತ್ರ ಮತ್ತು ಕಾಲರ್
Image by Bazylevnik0-Own work, CC BY-SA 4.0
https://commons. wikimedia.org/w/index.php?curid=137201411

ಉಡುಪು ಮತ್ತು ಆಭರಣಗಳು

ಪ್ರಮುಖ ಔಪಚಾರಿಕ ಸಂದರ್ಭದಲ್ಲಿ ಸದಸ್ಯರು ಅದ್ಧೂರಿತನದ ವೇಷಭೂಷಣದಲ್ಲಿ ಇರುತ್ತಿದ್ದರು. ನೈಟ್ಸ್ ಗ್ರ್ಯಾಂಡ್ ಕಮಾಂಡರ್ ಮಾತ್ರ ಧರಿಸುವ ನಿಲುವಂಗಿಯನ್ನು ಬಿಳಿ ರೇಷ್ಮೆಯಿಂದ ಲೇಪಿತವಾದ ತಿಳಿನೀಲಿ ಸ್ಯಾಟಿನ್‌ನಿಂದ ಮಾಡಲಾಗುತ್ತಿತ್ತು. ಎಡಭಾಗದಲ್ಲಿ ನಕ್ಷತ್ರದ ಪ್ರಾತಿನಿಧ್ಯವಿರುತ್ತಿತ್ತು. ನೈಟ್ಸ್ ಗ್ರ್ಯಾಂಡ್ ಕಮಾಂಡರ್ ಧರಿಸುವ ಕಾಲರ್ ಅನ್ನು ಚಿನ್ನದಿಂದ ಮಾಡಲಾಗುತ್ತಿತ್ತು. ಇದು ಕಮಲಗಳು, ಕೆಂಪು ಮತ್ತು ಬಿಳಿ ಗುಲಾಬಿಗಳು ಮತ್ತು ತಾಳೆ ಕೊಂಬೆಗಳ ಪರ್ಯಾಯ ಆಕೃತಿಗಳಿಂದ ಕೂಡಿರುತ್ತಿತ್ತು. ಮಧ್ಯದಲ್ಲಿ ಸಾಮ್ರಾಜ್ಯಶಾಹಿಯ ಕಿರೀಟ ಹೊಂದಿರುತ್ತಿತ್ತು.

ಬ್ಯಾಂಕಾಕ್‌ನಿಂದ ಆಗಮಿಸಿದ ಪ್ರಯಾಣಿಕರಿಂದ 6 ಕೋಟಿಗೂ ಅಧಿಕ ಮೌಲ್ಯದ ಗಾಂಜಾ ವಶಕ್ಕೆ

ಬೆಂಗಳೂರು, ಮಾ.31– ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಅಧಿಕಾರಿಗಳು ನಡೆಸಿದ ಕಾರ್ಯಾಚರಣೆಗಳಲ್ಲಿ, ಬ್ಯಾಂಕಾಕ್‌ನಿಂದ ಆಗಮಿಸಿದ್ದ ಪ್ರಯಾಣಿಕರಿಂದ ಹೆಚ್ಚಿನ ಪ್ರಮಾಣದ ಹೈಡ್ರೋಪೋನಿಕ್ ಗಾಂಜಾ ವಶಪಡಿಸಿಕೊಂಡು, ಆರು ಮಂದಿಯನ್ನು ಬಂಧಿಸಲಾಗಿದೆ.

ಅಧಿಕಾರಿಗಳ ಮಾಹಿತಿಯ ಪ್ರಕಾರ, ಮಾರ್ಚ್ 29 ಮತ್ತು 30ರಂದು ನಡೆದ ಈ ಕಾರ್ಯಾಚರಣೆಯಲ್ಲಿ, ಥಾಯ್ಲ್ಯಾಂಡ್‌ನಿಂದ ಬಂದ ಪ್ರಯಾಣಿಕರ ಚೆಕ್–ಇನ್ ಬ್ಯಾಗೇಜ್‌ನಲ್ಲಿ ಅಕ್ರಮ ವಸ್ತುಗಳನ್ನು ಅಡಗಿಸಲಾಗಿತ್ತು. ಮಂಗಳವಾರ ಬಿಡುಗಡೆ ಮಾಡಿದ ಪ್ರಕಟಣೆಯಲ್ಲಿ ಕಸ್ಟಮ್ಸ್ ಇಲಾಖೆ ತಿಳಿಸಿರುವ ಮಾಹಿತಿಯ ಪ್ರಕಾರ, ಬ್ಯಾಂಕಾಕ್‌ನಿಂದ ಬಂದ 5 ಪ್ರಯಾಣಿಕರನ್ನು ಬೆಂಗಳೂರು ಕಸ್ಟಮ್ಸ್ ಅಧಿಕಾರಿಗಳು ತಡೆದು, ಅವರ ಚೆಕ್–ಇನ್ ಬ್ಯಾಗ್‌ನಲ್ಲಿ ಅಡಗಿಸಲಾಗಿದ್ದ 17.45 ಕಿಲೋಗ್ರಾಂ ಹೈಡ್ರೋಪೋನಿಕ್ ಗಾಂಜಾವನ್ನು ವಶಪಡಿಸಿಕೊಂಡಿದ್ದಾರೆ. ಇದರ ಮೌಲ್ಯವನ್ನು ಸುಮಾರು ರೂ. 6.10 ಕೋಟಿಯಾಗಿ ಅಂದಾಜಿಸಲಾಗಿದೆ. ಇದಕ್ಕೂ ಹಿಂದಿನ ದಿನ ನಡೆದ ಪ್ರತ್ಯೇಕ ಕಾರ್ಯಾಚರಣೆಯಲ್ಲಿ, ಮತ್ತೊಬ್ಬ ಪ್ರಯಾಣಿಕನನ್ನು ತಡೆದು, ಆತನ ಬಳಿಯಿಂದ ಗಣನೀಯ ಪ್ರಮಾಣದ ನಿಷೇಧಿತ ಮಾದಕ ವಸ್ತುವನ್ನು ವಶಪಡಿಸಿಕೊಳ್ಳಲಾಗಿದೆ.

ಬ್ಯಾಂಕಾಕ್‌ನಿಂದ ಬಂದಿಳಿದ ಪ್ರಯಾಣಿಕನನ್ನು ಬೆಂಗಳೂರು ಕಸ್ಟಮ್ಸ್ ಅಧಿಕಾರಿಗಳು ತಡೆದು, ಅಡಗಿಸಲಾಗಿದ್ದ 11.5 ಕಿಲೋಗ್ರಾಂ ಹೈಡ್ರೋಪೋನಿಕ್ ಗಾಂಜಾ ವನ್ನು ವಶಪಡಿಸಿಕೊಂಡಿದ್ದಾರೆ. ಇದರ ಮೌಲ್ಯವನ್ನು ರೂ. 4.02 ಕೋಟಿಗಳೆಂದು ಅಂದಾಜಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಎರಡೂ ಪ್ರಕರಣಗಳಲ್ಲಿ ಆರೋಪಿತರನ್ನೆಲ್ಲಾ ಎನ್‌ಡಿಪಿಎಸ್ ಕಾಯ್ದೆಯಡಿ ಬಂಧಿಸಲಾಗಿದೆ ಎಂದು ಕಸ್ಟಮ್ಸ್ ಇಲಾಖೆ ತಿಳಿಸಿದ್ದು, ತನಿಖೆ ಮುಂದುವರೆದಿದೆ.

ನಕ್ಕರೆ ಅದೇ ಸ್ವರ್ಗ

ಶಿಕ್ಷಕ : ಯಾಕೋ ಗುಂಡ ಒಂದು ವಾರದಿಂದ ಸ್ಕೂಲ್‌ಗೆ ಬಂದಿಲ್ಲ.
ಗುಂಡ : ಹೋದ ಜಾಗಕ್ಕೆ ಪದೇ ಪದೇ ಹೋದ್ರೆ ಮರ್ಯಾದೆ ಇರೋದಿಲ್ಲ ಅಂತ ನಮ್ಮಪ್ಪ ಹೇಳಿದ್ದಾರೆ ಮೇಷ್ಟ್ರೇ.

ಮೈಸೂರು ಮಿತ್ರ

ಬುಧವಾರ, ಏಪ್ರಿಲ್ 1, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಬೆಲೆ ಗೊತ್ತಿಲ್ಲದವರ ಬಳಿ ವಜ್ರ ಕೊಟ್ರು ಕೂಡ
ಅದು ಕೇವಲ ಕಲ್ಲು ಮಾತ್ರ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಾವೂ ಸಾಯ್ಬಾರ್ದು, ಕೋಲೂ ಮುರೀಬಾರ್ದು

ನಿಮ್ಮ ಪತ್ರಗಳು

ಪೊಲೀಸ್ ಆಯುಕ್ತರ ಗಮನಕ್ಕೆ!

ಮಾನ್ಯರೆ,

ಮೈಸೂರಿನ ಕೃಷ್ಣಮೂರ್ತಿಪುರಂನ ಕಾಂತರಾಜ ಅರಸ್ ರಸ್ತೆಯಲ್ಲಿ ವಾಹನಗಳ ಸಂಚಾರ ದಟ್ಟವಾಗಿರುತ್ತದೆ.ಹಾಗಾಗಿ ಈ ಭಾಗದಲ್ಲಿ ಇರುವ ರಸ್ತೆಯ ಎರಡೂ ಬದಿಗಳಲ್ಲಿ ನೋ ಪಾರ್ಕಿಂಗ್ ಫಲಕಗಳಿವೆ.ಈ ಫಲಕಗಳಿಗೆ ಕವಡೆ ಕಾಸಿನ ಕಿಮ್ಮತ್ತಿಲ್ಲ.

ಹಾಗಾಗಿ ಮೈಸೂರಿನ ಪೊಲೀಸ್ ಆಯುಕ್ತರಲ್ಲಿ ಕೆಲವು ಪ್ರಶ್ನೆಗಳನ್ನು ಕೇಳಬೇಕಾಗಿದೆ.

ನೋ ಪಾರ್ಕಿಂಗ್ ಫಲಕವನ್ನು ಅಳವಡಿಸಿರುವ ಉದ್ದೇಶವೇನು?

ನೋ ಪಾರ್ಕಿಂಗ್ ಫಲಕದ ಅರ್ಥವೇನು?

ನೋ ಪಾರ್ಕಿಂಗ್ ಫಲಕವನ್ನು ಅಳಡಿಸಿರುವವರು ಯಾರು?

ನೋ ಪಾರ್ಕಿಂಗ್ ಫಲಕದ ಬುಡದಲ್ಲಿ ಕಾರ್ ಶೋರೂಂ ಮಾಲೀಕರು ಕಾರುಗಳನ್ನು ನಿಲ್ಲಿಸಲು ಅವಕಾಶವಿದೆಯೇ?

ನೋ ಪಾರ್ಕಿಂಗ್ ನಿಯಮ ಶೋರೂಂ ಮಾಲೀಕರಿಗೆ ಅನ್ವಯಿಸುವುದಿಲ್ಲವೇ?

ಶೋರೂಂ ಮಾಲೀಕರು ಸಂಚಾರ ನಿಯಮವನ್ನು ಉಲ್ಲಂಘಿಸಬಹುದೇ?

ಶೋ ರೂಂ ಮಾಲೀಕರಿಗೆ ಪೊಲೀಸರ ಭಯವಿಲ್ಲವೇ?

ಶೋರೂಂ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳಲು ಪೊಲೀಸರಿಗೆ ಭಯವೇ?

ಮೈಸೂರಿನ ಚಾಮರಾಜಪುರಂ ಮತ್ತು ಕೃಷ್ಣಮೂರ್ತಿಪುರಂ ನಡುವೆ ಇರುವ ಕಾಂತರಾಜ ಅರಸ್ ರಸ್ತೆಯಲ್ಲಿ ಯಾವಾಗಲೂ ವಾಹನ ಸಂಚಾರ ದಟ್ಟವಾಗಿರುತ್ತದೆ. ಈ ರಸ್ತೆಯ ಒಂದು ಭಾಗದಲ್ಲಿ ಸರ್ವೀಸ್ ರಸ್ತೆ ಇದ್ದು, ಆ ರಸ್ತೆಯ ಬಳಿ ಹಾಸ್ಪಿಟಲ್, ಕೆಫೆ, ಹೋಟೆಲ್‌ಗಳು ಇವೆ. ಇಲ್ಲಿಗೆ ಬರುವ ಗ್ರಾಹಕರು ತಮ್ಮ ದ್ವಿಚಕ್ರ ವಾಹನ ಹಾಗೂ ಕಾರುಗಳನ್ನು ಸರ್ವೀಸ್ ರಸ್ತೆಯ ಉದ್ದಕ್ಕೂ ನಿಲ್ಲಿಸಿ ಆ ರಸ್ತೆಯನ್ನೇ ಆಕ್ರಮಿಸಿಕೊಂಡಿರುತ್ತಾರೆ. ಅದು ಸಾಲದ್ದಕ್ಕೆ ಈ ಹೋಟೆಲುಗಳಿಗೆ ಬರುವ ತಿಂಡಿಪೋತರು ತಮ್ಮ ಐಷಾರಾಮಿ ಕಾರುಗಳನ್ನು ಕಾಂತರಾಜ ಅರಸ್ ರಸ್ತೆಯ ಮಧ್ಯದಲ್ಲಿ ನಿಲ್ಲಿಸಿ ಆ ರಸ್ತೆಯಲ್ಲಿ ಸಂಚರಿಸುವ ಬಸ್ ಹಾಗೂ ಇತರ ವಾಹನಗಳ ಸಂಚಾರಕ್ಕೆ ಅಡ್ಡಿ ಉಂಟುಮಾಡುತ್ತಿದ್ದಾರೆ. ಇಂತಹ ಕಾರುಗಳ ವಿರುದ್ಧ ಕ್ರಮ ಜರುಗಿಸಲು ಹಿಂದೇಟು ಹಾಕುವ ಪೊಲೀಸರು ಈಗ ಕಾಟಾಚಾರಕ್ಕೆಂದು ರಸ್ತೆಯ ಒಂದು ಭಾಗದಲ್ಲಿ ಉದ್ದಕ್ಕೂ ಬ್ಯಾರಿಕೇಡ್ ಹಾಗೂ ಪ್ಲಾಸ್ಟಿಕ್ ಹಗ್ಗಗಳನ್ನು ಕಟ್ಟಿ ಕೈತೊಳೆದುಕೊಂಡಿದ್ದಾರೆ.

ಹಳ್ಳಿಯ ಮಹಿಳೆಯರು ಹಪ್ಪಳ ಒಣಗಿಸುವಾಗ ಕಾಗೆಗಳು ಬಾರದಂತೆ ತಡೆಯಲು ದಾರ ಕಟ್ಟಿದಂತೆ ನಮ್ಮ ಪೊಲೀಸರು ಬೀಡಾಡಿ ಕಾರುಗಳಿಂದ ಬಚಾವಾಗಲು ಪ್ಲಾಸ್ಟಿಕ್ ದಾರಗಳನ್ನು ಕಟ್ಟಿದ್ದಾರೆ.

ಪೊಲೀಸರು ಕಟ್ಟಿದ ಮೂರುಕಾಸಿನ ದಾರಕ್ಕೆ ಕವಡೆ ಕಾಸಿನ ಕಿಮ್ಮತ್ತಿಲ್ಲ ಎಂಬಂತೆ ಹಾಸ್ಪಿಟಲ್, ಕೆಫೆ,ಹೋಟೆಲ್ ಬಳಿ ಬರುವ ಗ್ರಾಹಕರು ಈ ದಾರವನ್ನು ತಳ್ಳಿ ರಸ್ತೆಯ ಮಧ್ಯೆಯೇ ಕಾರು ನಿಲ್ಲಿಸಿ ಸಂಚಾರಕ್ಕೆ ಅಡ್ಡಿ ಉಂಟು ಮಾಡುತ್ತಿದ್ದಾರೆ.ಈ ರಸ್ತೆಯಲ್ಲಿ ಸಂಚರಿಸುವ ವಾಹನ ಸವಾರರು ರಸ್ತೆಯ ಮಧ್ಯೆ ನಿಂತಿರುವ ಈ ಬೀಡಾಡಿ ಕಾರುಗಳ ಚಾಲಕರನ್ನು ಹಾಗೂ ಪೊಲೀಸರನ್ನು ಶಪಿಸುತ್ತಾ ಚಕ್ರವ್ಯೂಹವನ್ನು ಪ್ರವೇಶಿಸಿದಂತೆ ಈ ರಸ್ತೆಯಲ್ಲಿ ಸಂಚರಿಸುವಂತಾಗಿದೆ.

ಇಂತಹ ಬೀಡಾಡಿ ಕಾರುಗಳ ಚಕ್ರಕ್ಕೆ ವ್ಹೀಲ್ ಲಾಕ್ ಮಾಡುವಷ್ಟು ಬೀಗಗಳು ನಮ್ಮ ಪೊಲೀಸರ ಬಳಿ ಇಲ್ಲ. ಇಂತಹ ಕಾರುಗಳ ವಿರುದ್ಧ ಕ್ರಮ ಕೈಗೊಳ್ಳುವಷ್ಟು ಧೈರ್ಯ ಇರುವ ಪೊಲೀಸರ ಸಂಖ್ಯೆಯೂ ನಮ್ಮಲ್ಲಿ ಸಾಕಷ್ಟಿಲ್ಲ. ಈ ಬೀಡಾಡಿ ಕಾರುಗಳನ್ನು ಅನಾಮತ್ತಾಗಿ ಎತ್ತಿಹಾಕಿಕೊಂಡು ಹೋಗುವ ವಾಹನಗಳೂ ಪೊಲೀಸರ ಬಳಿ ಇಲ್ಲ. ರಸ್ತೆಯ ಮಧ್ಯೆ ವಾಹನ ನಿಲ್ಲಿಸಿದರೆ ವಾಹನಗಳ ಸುಗಮ ಸಂಚಾರಕ್ಕೆ ಅಡ್ಡಿಯಾಗುತ್ತದೆ ಎಂಬ ಕನಿಷ್ಠ ಜ್ಞಾನವೂ ಸಹ ಇಂತಹ ಐಷಾರಾಮಿ ಕಾರುಗಳಲ್ಲಿ ಸಂಚರಿಸುವವರಿಗಿಲ್ಲ.

ಹಾಗಾಗಿ ರಸ್ತೆಯ ಮಧ್ಯೆ ಕಾರು ನಿಲ್ಲಿಸಿ ಸಂಚಾರಕ್ಕೆ ಅಡ್ಡಿಪಡಿಸುವ ಇಂತಹ ಕಾರುಗಳ ಮುಂಭಾಗದ ಗಾಜಿನ ಮೇಲೆ ಪೊಲೀಸರು 'ನೋ ಪಾರ್ಕಿಂಗ್' ಎಂಬ ಎಚ್ಚರಿಕೆಯ ಸಂದೇಶವುಳ್ಳ ದೊಡ್ಡ ಸ್ಟಿಕ್ಕರ್ ಅಂಟಿಸಿದರೆ ಆ ಸ್ಟಿಕ್ಕರ್ ಅಡಿಯಲ್ಲಿರುವ ಅಂಟಿಗೆ/ಗೋಂದಿಗೆ ಹೆದರಿಕೊಂಡಾದರೂ ನಮ್ಮ ಬೀಡಾಡಿ ಕಾರುಗಳ ಚಾಲಕರು ಸಂಚಾರ ನಿಯಮಕ್ಕೆ ಬೆಲೆ ನೀಡಿ ರಸ್ತೆಯ ಮಧ್ಯೆ ಕಾರು ನಿಲ್ಲಿಸುವಂತಹ ಬೇಜವಾಬ್ದಾರಿ ನಡವಳಿಕೆಯನ್ನು ಬಿಟ್ಟುಬಿಡಬಹುದು.

ಈ ವಿಚಾರವಾಗಿ ಮೈಸೂರು ಪೊಲೀಸ್ ಕಮಿಷನರ್ ಕ್ರಮ ಕೈಗೊಳ್ಳಬೇಕಿದೆ.

–ಪಿ.ಜೆ.ರಾಘವೇಂದ್ರ ನ್ಯಾಯವಾದಿ ಮೈಸೂರು

ಹಿಂದಿ ರಾಷ್ಟ್ರ ಭಾಷೆಯಲ್ಲ

ಮಾನ್ಯರೆ,

ರಾಜ್ಯ ಸರ್ಕಾರವು 10ನೇ ತರಗತಿಯಲ್ಲಿ ತೃತೀಯ ಭಾಷೆಯನ್ನು ಅಂಕ ದಿಂದ ಬಿಟ್ಟು ಗ್ರೇಡ್‌ಗೆ ಮಾತ್ರ ಮಾನ್ಯ ಮಾಡಿದೆ. ಇದರಿಂದ ವಿದ್ಯಾರ್ಥಿಗಳು ಯಾವ ಭಾಷೆಯನ್ನು ತೃತೀಯ ಭಾಷೆಯಾಗಿ ಓದುತ್ತಾರೋ ಅವರಿಗೆ ಅನುಕೂಲವಾಗಿದೆ. ಆದರೆ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಕರ್ನಾಟಕದಲ್ಲಿ ಕನ್ನಡವನ್ನೇ ತೃತೀಯ ಭಾಷೆಯಾಗಿ ಓದುವುದರಿಂದ ಕನ್ನಡಕ್ಕೂ ಹೆಚ್ಚಿನ ನಷ್ಟವಾಗಿದೆ. ಆದ್ದರಿಂದ ಸರ್ಕಾರ ಕನ್ನಡ ಮತ್ತು ಇಂಗ್ಲೀಷ್‌ಗಳನ್ನು ಕಡ್ಡಾಯವಾಗಿ ಕಲಿಯುವಂತೆ ದ್ವಿಭಾಷಾ ನೀತಿಯನ್ನು ಜಾರಿಗೆ ತಂದು ಕನ್ನಡವನ್ನು ಕಡ್ಡಾಯವಾಗಿ ಕಲಿಯುವಂತೆ ಶಿಕ್ಷಣ ನೀತಿಯನ್ನು ಜಾರಿ ಮಾಡಬೇಕು. ಆಗ ಮಾತ್ರ ಕನ್ನಡದ ಉಳಿವು ಸಾಧ್ಯ.

ದಿನಾಂಕ 30.3.26.ರ ಪತ್ರಿಕೆಯ ಓದುಗರ ಪತ್ರದಲ್ಲಿ ಹಿಂದಿ ಭಾಷೆ ತಾತ್ಸಾರ ಸಲ್ಲದು ಎಂಬ ಹರಳಹಳ್ಳಿ ಪುಟ್ಟರಾಜು ಅವರು, ಹಿಂದಿ ರಾಷ್ಟ್ರ ಭಾಷೆ ಎಂದು ತಪ್ಪು ಮಾಹಿತಿ ನೀಡಿದ್ದಾರೆ. ಹಿಂದಿ ಕೂಡ ಕನ್ನಡದಂತೆ ಸಂವಿಧಾನದಲ್ಲಿ ಮಾನ್ಯತೆ ಪಡೆದ 22 ಅಧಿಕೃತ ಭಾಷೆಗಳಲ್ಲಿ ಒಂದು ಮಾತ್ರ. ಹಾಗೆಯೇ ಹಿಂದಿ ಮತ್ತು ಇಂಗ್ಲಿಷ್ ಈ ಎರಡೂ ಭಾಷೆಗಳನ್ನು ಕೇಂದ್ರ ಸರ್ಕಾರದ ಅಧಿಕೃತ ಭಾಷೆಗಳೆಂದು ಸಂವಿಧಾನ ಮಾನ್ಯ ಮಾಡಿದೆ. ಆದ್ದರಿಂದಲೇ ಕಳೆದ 2014 ರಲ್ಲಿ ಈಗಿನ ಬಿಜೆಪಿ ಸರ್ಕಾರ ಬರುವವರೆಗೂ ಕೇಂದ್ರ ಸರ್ಕಾರದ ಆದೇಶಗಳು ಹಾಗೂ ಸರ್ಕಾರದ ಮುಖ್ಯಸ್ಥರ ಭಾಷಣಗಳು ಹಿಂದಿ ಹಾಗೂ ಇಂಗ್ಲಿಷ್ ಎರಡರಲ್ಲೂ ಪ್ರಸಾರ, ಪ್ರಕಟವಾಗುತ್ತಿದ್ದವು. ಅದು ನಡೆದು ಬಂದ ಸಂಪ್ರದಾಯವಾಗಿತ್ತು. ಆದರೆ ಅಮಿತ್ ಶಾ ಮತ್ತು ಪ್ರಧಾನಿ ಮೋದಿಯವರು ಹಿಂದಿಯನ್ನು ರಾಷ್ಟ್ರ ಭಾಷೆ ಮಾಡಲು ಇನ್ನಿಲ್ಲದ ಕಸರತ್ತು ಮಾಡುತ್ತಿದ್ದಾರೆ. ಆದರೆ ಇದು ಪ್ರಾದೇಶಿಕ ಭಾಷೆಗಳ ಜನರನ್ನು ಕೆರಳಿಸುತ್ತಿದೆ. ಇದು ಭಾಷಾವಾರು ಪ್ರಾಂತ್ಯಗಳ ರಚನೆಯ ವ್ಯವಸ್ಥೆಯನ್ನೇ ಬುಡಮೇಲು ಮಾಡುತ್ತಿದೆ. ಇದೇ ಕಾರಣಕ್ಕೆ ಕರ್ನಾಟಕ ಮತ್ತು ತಮಿಳುನಾಡುಗಳಲ್ಲಿ ಹಿಂದಿ ವಿರುದ್ಧ ಆಕ್ರೋಶ ವ್ಯಕ್ತವಾಗುತ್ತಿದೆ. ಭಾರತದಂತ ಬಹುಭಾಷಾ ರಾಷ್ಟ್ರದಲ್ಲಿ ಯಾವುದೇ ಒಂದು ಭಾಷೆಯನ್ನು ರಾಷ್ಟ್ರ ಭಾಷೆ ಮಾಡಲು ಸಾಧ್ಯವಿಲ್ಲ. ಹಿಂದೆ ಇದ್ದಂತೆ ಕೇಂದ್ರ ಸರ್ಕಾರ ತನ್ನ ಆಡಳಿತವನ್ನು ಹಿಂದಿ ಹಾಗೂ ಇಂಗ್ಲಿಷ್ ಈ ಎರಡು ಭಾಷೆಗಳಲ್ಲೂ ಆಡಳಿತ ಕಲಾಪ ನಡೆಸುವುದು ದೇಶದ ದೃಷ್ಟಿಯಿಂದ ಹಿತಕರ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಸಿದ್ಧಗಂಗೆಯ ದೇವಪುರುಷ ಶ್ರೀ ಶಿವಕುಮಾರ ಸ್ವಾಮೀಜಿ

ಶ್ರೀಗಳ ಜನ್ಮದಿನದ ನಿಮಿತ್ತ ಲೇಖನ

**ಸಾಮಾನ್ಯರಾಗಿ ಹುಟ್ಟಿ ಅಸಾಮಾನ್ಯರಾಗಿ ಬೆಳೆದು
ಮನುಷ್ಯತ್ವದಿಂದ ದೈವತ್ವಕ್ಕೇರಿದ
ದೇವಪುರುಷರು ನೀವು ಅಕ್ಷರಶಃ ದೇವರೇ
ಶರಣು ನಿಮಗೆ ನಿತ್ಯಶರಣೆಂಬೆವು**

ಕಳೆದ ಏಳೆಂಟು ದಶಕಗಳಿಂದಲೂ ಅನ್ನ, ಆಶ್ರಯ, ಅಕ್ಷರ ಈ ಮೂರನ್ನೂ ದೀನದಲಿತರಿಗೆ, ಬಡಬಗ್ಗರಿಗೆ, ಅಸಹಾಯಕರಿಗೆ ಧಾರೆಯೆರೆಯುತ್ತಾ ತ್ರಿವಿಧ ದಾಸೋಹದಲ್ಲಿ ಅವಿರತವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದ ಶ್ರೀ ಸಿದ್ಧಗಂಗಾ ಮಠಾಧೀಶರಾಗಿದ್ದ ಡಾ.ಶಿವಕುಮಾರ ಸ್ವಾಮೀಜಿ ಇಡೀ ರಾಷ್ಟ್ರವೇ ತಮ್ಮತ್ತ ಕಣ್ಣೆತ್ತಿ ನೋಡುವಂತೆ ಸೇವೆಯ ಹಿಮಾಲಯವಾಗಿ ಬೆಳೆದು ನಿಂತವರು. ತಮ್ಮ ಕೈಂಕರ್ಯದ ಬೆಳಕಿನಿಂದ ವಿಶ್ವವನ್ನೇ ಬೆರಗುಗೊಳಿಸಿದವರು. ಇತರೆ ಸ್ವಾಮೀಜಿಗಳಂತೆ ಇವರು ಯಾವುದೋ ಒಂದು ಜನಾಂಗಕ್ಕೆ, ಜಾತಿಗೆ ಮಾತ್ರ ಸೀಮಿತವಾಗದೆ ಜಾತಿ, ಮತ, ಪಂಥ, ಧರ್ಮಗಳ ಭೇದಭಾವವಿರದೆ "ಇವನಾರವ ಇವನಾರವ ನೆನ್ನದೆ ಇವ ನಮ್ಮವ ಇವ ನಮ್ಮವ' ನೆನ್ನುತ ಬಸವ ಬೆಳಕಿನಲ್ಲಿ ಸಮಾಜ ಸೇವೆಗೈದು ಮಹಾಮಾನವತಾವಾದಿಯಾಗಿ ಜನಮನಸ್ಸಗೆದ್ದವರು. ಮಹಾಜ್ಞಾನಿಗಳೂ, ಮಹಾಯೋಗಿಗಳೂ ಆಗಿದ್ದ ಇವರು ಕ್ರಿಸ್ತ ಬುದ್ಧ, ಬಸವ, ಅಂಬೇಡ್ಕರ್, ಗಾಂಧಿ, ಪೈಗಂಬರ್, ಪ್ಲೇಟೋ, ಅರಿಸ್ಟಾಟಲ್, ರಾಮಕೃಷ್ಣ ಪರಮಹಂಸ, ವಿವೇಕಾನಂದ, ಮಹಾವೀರ ಮುಂತಾದ ವಿಶ್ವದ ನೂರಾರು ಚಿಂತಕರ ವಿಚಾರ ಧಾರೆಯನ್ನು ಅರೆದು ಕುಡಿದವರಂತೆ ಜ್ಞಾನದ ಮಹಾಪರ್ವತವಾಗಿದ್ದರು. ಹಾಗೆಯೇ ತಮ್ಮ ಬಳಿಗೆ ಬಂದವರಿಗೆಲ್ಲಾ ನೆರಳು ನೀಡುವ ಮಹಾವೃಕ್ಷವಾಗಿದ್ದರು. ಶ್ರೀ ಸಿದ್ಧಗಂಗಾ ಮಠವನ್ನು ಮಾನವ ಕುಲದ ಮಹಾಮನೆಯನ್ನಾಗಿಸಿದ ಮಹಾಕೀರ್ತಿ ಈ ತ್ರಿವಿಧ ದಾಸೋಹ ಮೂರ್ತಿಗೆ ಸಲ್ಲುತ್ತದೆ.

ಇಂದಿಗೂ ಅನ್ನಕ್ಕಾಗಿ ಸಿದ್ಧಗಂಗೆಯಲ್ಲಿ ಇವರು ಹಚ್ಚಿದ ಒಲೆ ಉರಿಯುತ್ತಲೇ ಇದೆ. ಆಶ್ರಯಕ್ಕಾಗಿ ಇವರು ಅಡಿಗಲ್ಲಿಟ್ಟ ತಾಣ ಸೇವಾಸೌಧವಾಗಿ ಬೆಳೆಯುತ್ತಲೇ ಇದೆ. ಇವರು ಹೊತ್ತಿಸಿದ ಅಕ್ಷರ ಜ್ಯೋತಿ ಆರದ ನಂದಾದೀಪವಾಗಿ ಬೆಳಗುತ್ತಲೇ ಇದೆ. ಪ್ರತಿನಿತ್ಯ ಇಲ್ಲಿ ಸುಮಾರು ಹತ್ತು ಸಾವಿರಕ್ಕೂ ಹೆಚ್ಚು ಮಂದಿ ಊಟ ಮಾಡುತ್ತಾರೆಂದರೆ, ಸಹಸ್ರಾರು ಮಂದಿ ಆಶ್ರಿತರಾಗಿದ್ದಾರೆಂದರೆ, ಸಂಸ್ಥೆಗಳಲ್ಲಿ ಸುಮಾರು ಅರ್ಧಲಕ್ಷ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆಂದರೆ ಯಾರು ಬೇಕಾದರೂ ಊಹಿಸಬಹುದು ಶಿವಕುಮಾರ ಸ್ವಾಮೀಜಿಯ ಮಹಾಕರ್ತೃತ್ವ ಶಕ್ತಿಯನ್ನು, ಕಾಯಕದ ಮಹಾಮಹಿಮೆ ಇವರನ್ನು ನಡೆದಾಡುವ ದೇವರು, ಮಹಾಮಹಿಮರು, ಅವತಾರ ಪುರುಷರು,



ಶ್ರೀ ಶಿವಕುಮಾರ ಸ್ವಾಮೀಜಿ

ಕರ್ಮಯೋಗಿಗಳು, ಇಪ್ಪತ್ತೊಂದನೆ ಶತಮಾನದ ಬಸವಣ್ಣನವರು, ಹೀಗೆ ಹಲವಾರು ಪದಪುಂಜಗಳಿಂದ, ಬಿರುದು ಬಾವಲಿಗಳಿಂದ ಕರೆದು ಆನಂದಿಸುವ ಭಕ್ತಜನ ಸಮೂಹವೇ ಇದೆ. ಇವರಲ್ಲಿ ಹೆಚ್ಚಿನವರು ಸಿದ್ಧಗಂಗೆಯ ಸ್ವಾಮೀಜಿಯ ಸದ್ಬೆಳಕಿನಲ್ಲಿ ತಮ್ಮ ಬದುಕನ್ನು ಕಟ್ಟಿಕೊಂಡವರೇ ಆಗಿದ್ದಾರೆ. ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ ಅವರಂತಹ ಅನೇಕ ಮಂದಿ ಮಹಾಪ್ರತಿಭೆಗಳು ಇಲ್ಲಿ ಅರಳಿವೆ. ಇಲ್ಲಿನ ಸೇವೆಯ ಸಿರಿಫಸಲನ್ನು ಅನುಭವಿಸಿರುವ ಡಾ. ಜಿ.ಎಸ್.ಶಿವರುದ್ರಪ್ಪನವರು ಹೇಳುತ್ತಾರೆ–

**ಕಾವಿಯುಡುಗೆಯನುಟ್ಟು ನಭವೇ ಕಿರಣ ಹಸ್ತವ ಚಾಚಿದೆ
ಎಲ್ಲಾ ನನ್ನವರೆನುವ ಭಾವದ ಕರುಣೆಯೇ ಕಣ್ತೆರೆದಿದೆ..."**

ಇಂಥ ಮಹಾಮಾನವತಾವಾದಿ ಡಾ. ಶಿವಕುಮಾರ ಸ್ವಾಮೀಜಿ ಅವತರಿಸಿದ್ದು ಸಾವಿರದ ಒಂಬೈನೂರ ಎಂಟರ ಏಪ್ರಿಲ್ ಒಂದರಂದು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸೋಲೂರು ಹೋಬಳಿಯ ವೀರಾಪುರ ಇವರಿಗೆ ಜನ್ಮ ನೀಡಿದ ಪುಣ್ಯ ಸ್ಥಳ. ಸುಸಂಸ್ಕೃತ ಮನೆತನದ ಹೊನ್ನೇಗೌಡ ಮತ್ತು ಗಂಗಮ್ಮ ದಂಪತಿ ಇವರನ್ನು ಹೆತ್ತ ಪುಣ್ಯವಂತರು. ಹದಿಮೂರು ಮಂದಿ ಮಕ್ಕಳಲ್ಲಿ ಇವರೇ ಕಿರಿಯವರು. ಶಿವಣ್ಣ ಎಂಬುದು ಇವರ ಪೂರ್ವಾಶ್ರಮದ ಹೆಸರು. ಇವರು ತುಮಕೂರಿನಲ್ಲಿ ಹೈಸ್ಕೂಲ್ ವ್ಯಾಸಂಗ ಮಾಡುತ್ತಿದ್ದಾಗ ತುಮಕೂರಿನಲ್ಲಿ ಭಯಂಕರ ಪ್ಲೇಗ್‌ರೋಗ ಬಂದು ಜನರು ಜೀವಭಯದಿಂದ ತತ್ತರಿಸುವಂತೆ ಮಾಡಿತ್ತು. ಆದರೆ ಓದಿನಲ್ಲಿ ವಿಪರೀತ ಆಸಕ್ತಿ ಇದ್ದ ಇವರು ಹೇಗಾದರೂ ಮಾಡಿ ಓದನ್ನು ಮುಂದುವರಿಸುವ ಮಹದಾಸೆ ಇಟ್ಟುಕೊಂಡು ಇದಕ್ಕಾಗಿ ಮಾರ್ಗ ಹುಡುಕತೊಡಗಿದರು. ಆಗ ಕಾರ್ಗತ್ತಲಲ್ಲಿ ಇಣುಕುವ ಬೆಳಕಿನ ಹನಿಯಂತೆ ಗೋಚರಿಸಿದ್ದೇ ಶ್ರೀ ಸಿದ್ಧಗಂಗ ಮಠ. ಆಗ ಅಲ್ಲಿಗೆ ಪ್ರವೇಶಿಸಿದ ಇವರು ಆಗ ಅಲ್ಲಿ ಮಠಾಧೀಶರಾಗಿದ್ದ ಶ್ರೀ ಉದ್ದಾನ ಶಿವಯೋಗಿಗಳಲ್ಲಿ ಆಶ್ರಯ ಬೇಡಿದರು. ಅಪಾರ ವಿದ್ಯಾದಾಹದಿಂದ ಬಂದಿದ್ದ ಇವರು ಆಶ್ಚರ್ಯಕರ ರೀತಿಯಲ್ಲಿ ಪ್ರಥಮ ಭೇಟಿಯಲ್ಲೇ ಉದ್ದಾನ ಶಿವಯೋಗಿಗಳ ಆಕರ್ಷಿಸಿಬಿಟ್ಟರು.

ಸಿದ್ಧಗಂಗಾ ಮಠದಲ್ಲಿದ್ದುಕೊಂಡೇ ಹೈಸ್ಕೂಲ್ ವ್ಯಾಸಂಗ ಮುಗಿಸಿದ ಶಿವಕುಮಾರ ಸ್ವಾಮೀಜಿ ಅವರು ಆಗಲೇ ಆದ್ಯಾತ್ಮ ಹಾಗೂ ಸಮಾಜಸೇವೆ ಬಗ್ಗೆ ವಿಶೇಷ ಆಸಕ್ತಿ ಬೆಳೆಸಿಕೊಂಡಿದ್ದರು.ಈ ಅಭಿಮಾನದ ಪ್ರೀತಿಯಿಂದಲೇ ಶಿವಕುಮಾರ ಸ್ವಾಮೀಜಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ. ಆನರ್ಸ್ ಪದವಿ ಪಡೆಯುತ್ತಿದ್ದಂತೆಯೇ 1930ರ ಮಾರ್ಚ್ 3ರಂದು ಉದ್ದಾನ ಶ್ರೀಗಳು ಇವರನ್ನು ಸಿದ್ಧಗಂಗಾ ಮಠದ ಕಿರಿಯ ಶ್ರೀಗಳನ್ನಾಗಿ ನೇಮಿಸಿದರು. ನಂತರದ ದಿನಗಳಲ್ಲಿ ಉದ್ದಾನ ಶಿವಯೋಗಿಗಳು ಕಾಲವಾದ ನಂತರ 1941ರಲ್ಲಿ ಶಿವಕುಮಾರ ಸ್ವಾಮೀಜಿ ಸಿದ್ಧಗಂಗಾ ಮಠದ ಪೀಠವನ್ನೇರಿದರು. ಅಲ್ಲಿಂದೀಚೆಗೆ ಬಹುಮುಖ್ಯವಾದ ಜವಾಬ್ದಾರಿ ತಲೆಮೇಲೆ ಹೊತ್ತುಕೊಂಡು ಶ್ರೀ ಮಠದ ಅಭಿವೃದ್ಧಿಗಾಗಿ ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ಊರೂರು ಅಲೆದು ನಿಜದ ಅರ್ಥದಿ ಜಂಗಮರೇ ಆಗಿ ಸಾತ್ವಿಕ ಮನಸ್ಸಿನಿಂದ ಜೋಗಸೆಯೊಡ್ಡಿ ಬೇಡಿ ಮಠವನ್ನು ಭುವಿಯಿಂದ ಗಗನದೆತ್ತರ ಬೆಳೆಸಿದರು. ತನ್ಮೂಲಕ ಸಮಾಜ ಸೇವೆಯನ್ನು ತಮ್ಮ ಬದುಕಿನ ಧ್ಯೇಯವಾಕ್ಯ ಮಾಡಿಕೊಂಡು ನಾಡು ಕೊಂಡಾಡುವಂತೆ ತ್ರಿವಿಧ ದಾಸೋಹದ ಹೊಸ ಇತಿಹಾಸವನ್ನೇ ಸೃಷ್ಟಿಸಿದರು.

ಶ್ರೀಗಳ ದೂರದೃಷ್ಟಿಯ ಫಲವಾಗಿ ಶಿಕ್ಷಣ ಕಾಶಿಯಾಗಿ ಹಾಗೂ ತ್ರಿವಿಧ ದಾಸೋಹದ ಮಹಾಸೌಧವಾಗಿ ರೂಪುಗೊಂಡಿರುವ ಸಿದ್ಧಗಂಗಾ ಮಠದ ಒಡೆತನದಲ್ಲಿ ಪ್ರಾಥಮಿಕ ಹಂತದಿಂದ ಹಿಡಿದು ಉನ್ನತ ಶಿಕ್ಷಣದ ವರೆಗೆ 125ಕ್ಕೂ ಹೆಚ್ಚು ವಿವಿಧ ಶಿಕ್ಷಣ ಸಂಸ್ಥೆಗಳಿದ್ದು ಈಗಲೂ ಯಶಸ್ವಿಯಾಗಿ ನಡೆಯುತ್ತಿವೆ. ಇಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವವರಲ್ಲಿ ಶೇಕಡ 30ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅನಾಥರು. ಆದರೆ ಅನಾಥ ರೆಂಬ ಭಾವ ಬಾರದಂತೆ. ಶ್ರೀಗಳ ಆಶಯದಂತೆ ಅವರಿಗೆ ಮಠವೇ ತಾಯಿಯೂ ಆಗಿ, ತಂದೆಯೂ ಆಗಿ, ಕರುಣಾ ಸಿಂಧು ವಾಗಿ ಅವರೆಲ್ಲರನ್ನು ಸ್ವಂತ ಮಕ್ಕಳಂತೆ ಸಲಹುವ ಮಹಾ ಬೆಳಕಾಗಿದೆ.

'ಕಾಯಕವೇ ಕೈಲಾಸ' ಎಂಬುದಕ್ಕೆ ಅನ್ವರ್ಥವಾಗಿ ಸಂತನಂತೆ ಬದುಕಿ ತಮ್ಮ ನಿರಾಡಂಬರ, ನಿಸ್ವಾರ್ಥ, ನಿರ್ಮಲ, ನಿರ್ವಂಚನೆ, ಪ್ರಾಮಾಣಿಕತೆಯೊಂದಿಗೆ ಭಕ್ತಿ, ಜ್ಞಾನ, ಕರ್ಮ ಯೋಗಗಳ ಸತ್ಪಥದಲ್ಲಿ ಊಹೆಗೂ ನಿಲುಕದ ರೀತಿಯಲ್ಲಿ ಸಾಧನೆಗಳ ಸರಮಾಲೆಯನ್ನೇ ಧರಿಸಿದ್ದರು. ಸಿದ್ಧಗಂಗೆಯ ಈ ಸಿದ್ಧಿ ಪುರುಷ ಶತಾಯುಷಿಗಳಾದ ಶುಭ ಸಂದರ್ಭದಲ್ಲಿ ನಾಡಿನ ಸಮಸ್ತ ಜನತೆ ಪರ ವಾಗಿ ಉಘೇ ಉಘೇ ಅನ್ನುವ ರೀತಿಯಲ್ಲಿ ಕರ್ನಾಟಕ ಸರ್ಕಾರ ಇವರಿಗೆ 'ಕರ್ನಾಟಕರತ್ನ' ಬಿರುದಿನ ಪ್ರಶಸ್ತಿ ನೀಡಿ 2007ರ ಏಪ್ರಿಲ್ ಒಂದರಂದು ಸನ್ಮಾನಿಸಿದೆ. ಆ ಘನ ಸಂದರ್ಭದಲ್ಲೂ ಇವರ ಹೃನ್ಮನ ಕಂಗಳಲ್ಲಿ ಮಿಂಚಿದ್ದು 'ಸೇವಾರತ್ನ'ವೇ!. ಹಾಗೆಯೇ ಭಾರತ ಸರ್ಕಾರದ 'ಪದ್ಮಭೂಷಣ' ಪ್ರಶಸ್ತಿ ಇವರ ಮುಡಿಗೇರಿದಾಗಲೂ ಭೂಮಿಗೆ ಭಗವಂತನಂತಿದ್ದ ಈ ಭೂಲೋಕದ ದೇವರ ಮುಖದಲ್ಲಿ ಹೊಳೆದದ್ದು ನಿಸ್ವಾರ್ಥದ ಹೊಂಬೆಳಕೇ!. ಅಂತೆಯೇ ಇಡೀ ಕರ್ನಾಟಕ ಸರ್ಕಾರವೇ ತುಮಕೂರಿನ ಸಿದ್ಧಗಂಗಾ ಮಠಕ್ಕೆ ತೆರಳಿ ಈ ಅಭಿನವ ಬಸವಣ್ಣನಿಗೆ ಅವರ 103ನೇ ಹುಟ್ಟುಹಬ್ಬದ ಸಂದರ್ಭದಲ್ಲಿ 50ಕ್ಕೂ ಹೆಚ್ಚು ಸ್ವಾಮೀಜಿಗಳ ಸಾನ್ನಿಧ್ಯದಲ್ಲಿ 2010 ಏ.1ರಂದು 'ರಾಷ್ಟ್ರೀಯ ಬಸವ ಪುರಸ್ಕಾರ ಪ್ರಶಸ್ತಿ' ನೀಡಿ ಗೌರವಿಸಿ ದಾಗಲೂ ಇವರ ಇಡೀ ಶರೀರದ ತುಂಬಾ ಪ್ರಜ್ವಲಿಸಿದ್ದು ತ್ರಿವಿಧ ದಾಸೋಹದ ದಿವ್ಯ ಬೆಳಕೇ!. ಇವೆಲ್ಲಕ್ಕೂ ಕಳಶ ವಿಟ್ಟಂತೆ ಕೇಂದ್ರ ಸರ್ಕಾರದ 2015ನೇ ಸಾಲಿನ ಪದ್ಮಭೂಷಣ ಪ್ರಶಸ್ತಿಗೆ ಇವರು ಭಾಜನರಾಗಿ ನಡೆದಾಡುವ ದೇವರೆಂದೇ ಹೆಸರಾಗಿದ್ದ ಡಾ.ಶಿವಕುಮಾರ ಸ್ವಾಮೀಜಿ 111 ವರ್ಷಗಳ ಸಾರ್ಥಕವಾದ ತುಂಬು ಜೀವನ ನಡೆಸಿ 2019ರ ಜನವರಿ 21ರಂದು ಶಿವೈಕ್ಯರಾದರೂ ಶ್ರೀಗಳು ಎಂದೆಂದೂ ಅಜರಾಮರರು.



ಬನ್ನೂರು ಕೆ.ರಾಜು
ಸಾಹಿತಿ, ಪತ್ರಕರ್ತ
ಮೊ.94815 33167



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ


'ಪ್ರಾಪ್ತಿ', 'ಮುಕ್ತಿ': ಗೌರಿಸತ್ಯರ ಕಾದಂಬರಿಗಳು


ಗೌರಿ ಸತ್ಯ ಕನ್ನಡ ಸಾಹಿತ್ಯದಲ್ಲಿ ಮತ್ತು ಪತ್ರಿಕಾ ರಂಗದಲ್ಲಿ ಹೆಸರಾಂತ ಸಾಹಿತಿಗಳು. ಅವರು ಏನನ್ನು ಬರೆದರೂ ಅದರ ಹಿಂದೆ ಗಂಭೀರ ಅಧ್ಯಯನ ಮತ್ತು ಗಾಢ ಚಿಂತನೆಗಳು ಇರುತ್ತವೆ. ಸುಮಾರು ಮೂವತ್ತೈದು ವರ್ಷಗಳ ಹಿಂದೆ ಅವರು ಬರೆದು 1990ರಲ್ಲಿ ಪ್ರಕಟಿಸಿದ್ದುದು **ಪ್ರಾಪ್ತಿ** ಎಂಬ ಕಾದಂಬರಿ. 2018ರಲ್ಲಿ ಅದರ ಉತ್ತರ ಭಾಗ ಎನ್ನಬಹುದಾದ **ಮುಕ್ತಿ** ಪ್ರಕಟಗೊಂಡಿದೆ. ಎರಡನ್ನೂ ಓದಿದಾಗ ಇವು ಒಂದೇ ಕಥೆಯ ಎರಡು ಭಾಗಗಳೆಂದೇ ಭಾವನೆ ಬರುತ್ತದೆ. ಶಂಕರಶಾಸ್ತ್ರಿ ಎಂಬ ವಿದ್ವಾಂಸನ ಜೀವನದ ಎರಡು ಮಜಲುಗಳೇ ಈ ಕಾದಂಬರಿಗಳ ವಸ್ತು. ನಂಜನಗೂಡು, ಮೈಸೂರು ಮತ್ತು ಕಾಶಿ ಈ ಕಥೆ ನಡೆಯುವ ಕ್ಷೇತ್ರಗಳು. ಕಾಲ ಹತ್ತೊಂಬತ್ತನೆಯ ಶತಮಾನ. ಇಲ್ಲಿ ಆ ಕಾಲದ ಸಾಮಾಜಿಕ ಮತ್ತು ಐತಿಹಾಸಿಕ ಹಿನ್ನೆಲೆಯೂ ಮುಖ್ಯವಾಗಿದೆ. ಇಂತಹ ಕಾದಂಬರಿಯನ್ನು ಸಾಂಪ್ರತಿಕ ಘಟನೆಗಳನ್ನು ಕುರಿತು ಸಾಮಾಜಿಕ ಕಾದಂಬರಿಯನ್ನು ರಚಿಸುವಷ್ಟು ಸುಲಭವಲ್ಲ. ಆ ಕಾಲದ ರೀತಿ ರಿವಾಜುಗಳನ್ನು ಸರಿಯಾಗಿ ಅಳವಡಿಸಿಕೊಳ್ಳುವುದು ಒಂದು ಕಲೆ.

ಐತಿಹಾಸಿಕವಾಗಿ ನೊಡುವುದಾದರೆ ಹತ್ತೊಂಬತ್ತನೆಯ ಶತಮಾನ ಮೈಸೂರಿಗೆ ಪರಿವರ್ತನೆಯ ಕಾಲ. ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನರ ದರ್ಬಾರು ನಡೆಯಿತು. ಒಡೆಯರ್ ಮನೆತನದ ಮಹಾರಾಜರಿಗೆ ಯಾವ ಅಧಿಕಾರವೂ ಇರಲಿಲ್ಲ. ಭಾರತದ ಇತರ ಭಾಗಗಳಲ್ಲಿ ಬ್ರಿಟಿಷರ ಪ್ರಾಬಲ್ಯ ಹೆಚ್ಚುತ್ತಿತ್ತು. ಬ್ರಿಟಿಷರೆಂದರೆ ಇಂಗ್ಲೆಂಡಿನ ರಾಜ–ರಾಣಿಯರ ಅಥವಾ ಪಾರ್ಲಿಮೆಂಟಿನ ಆಡಳಿತ ಇಲ್ಲಿ ಇರಲಿಲ್ಲ. ಈಸ್ಟ್ ಇಂಡಿಯಾ ಕಂಪನಿಯದೇ ಆಗ ಸರ್ಕಾರ. ಆ ಕಂಪನಿಯ ಸೈನ್ಯಗಳೇ 1799 ರಲ್ಲಿ ಬಂದು ಟಿಪ್ಪು ಸುಲ್ತಾನನನ್ನು ಹೊಡೆದುರುಳಿಸಿ ಮುಮ್ಮಡಿ ಕೃಷ್ಣರಾಜರನ್ನು ಮಹಾರಾಜರೆಂದು ಘೋಷಿಸಿ ಪಟ್ಟಾಭಿಷೇಕ ಮಾಡಿತು. ಅವರಿಗೆ ಆಗ ಕೇವಲ ಐದು ವರ್ಷ. 1812ರವರೆಗೂ ದಿವಾನ್ ಪೂರ್ಣಯ್ಯನವರು ಆಡಳಿತವನ್ನು ಮಹಾರಾಜರ ಹೆಸರಿನಲ್ಲಿ ನಡೆಸಿದರು. ಆಮೇಲೆ ಅವರನ್ನು ಯಳಂದೂರಿಗೆ ಕಳುಹಿಸಿ ಮುಮ್ಮಡಿ ಕೃಷ್ಣರಾಜರೇ ರಾಜ್ಯಭಾರವನ್ನು ವಹಿಸಿಕೊಂಡರು. ಆದರೂ ಅವರು ಈಸ್ಟ್ ಇಂಡಿಯಾ ಕಂಪನಿಯ ಕಟ್ಟುಪಾಡುಗಳನ್ನು ಮೀರುವಂತಿರಲಿಲ್ಲ. ಅದಕ್ಕೆ ಅನುಗುಣವಾಗಿಯೇ ನಡೆದುಕೊಳ್ಳುತ್ತಿದ್ದರು. ಆದರೂ ಸಂದರ್ಭಗಳು ಅವರಿಗೆ ವಿರುದ್ಧವಾದುವು. ಕುಹಕಿಗಳು ತಂತ್ರಗಳನ್ನು ಹೂಡಿದರು. 1820ರ ದಶಕದಲ್ಲಿ ಬ್ರಿಟಿಷರು, ಎಂದರೆ ಈಸ್ಟ್ ಇಂಡಿಯಾ ಕಂಪನಿ, ಮಹಾರಾಜರ ಅಧಿಕಾರಗಳನ್ನೆಲ್ಲ ಕಸಿದುಕೊಂಡು ಅವರನ್ನು ಹೆಸರಿಗೆ ಮಾತ್ರ ರಾಜರನ್ನಾಗಿ ಉಳಿಸಿತು. ಅವರ ಉತ್ಸವ, ಹಬ್ಬ, ದರ್ಬಾರುಗಳನ್ನು ನಡೆಸಲು ಮತ್ತು ಸಂಗೀತ ಸಾಹಿತ್ಯಾದಿ ಪೋಷಣೆಗಾಗಿ ರಾಜಧನವನ್ನು ನೀಡುತ್ತಿತ್ತು. ಆಡಳಿತದ ಭಾರವಿಲ್ಲದುದರಿಂದ ಮುಮ್ಮಡಿಯವರು ತಮ್ಮ ಕಾಲವನ್ನು ಸಾಹಿತ್ಯ ರಚನೆ, ಅಧ್ಯಾತ್ಮ ಚಿಂತನೆ, ಕಲಾಪೋಷಣೆ, ಧರ್ಮರಕ್ಷಣೆಗಳಿಗೆ ವಿನಿಯೋಗಿಸಿದರು. 1858ರಲ್ಲಿ, ಬ್ರಿಟಿಷ್ ಸರ್ಕಾರವು ಕಂಪನಿಯ ಆಡಳಿತವನ್ನು ರದ್ದುಗೊಳಿಸಿ ತಾನೇ ಅಧಿಕಾರವನ್ನು ವಹಿಸಿಕೊಂಡಿತು. ಮುಮ್ಮಡಿ ಕೃಷ್ಣರಾಜರ ಅವಸಾನದ ವೇಳೆಗೆ ಬ್ರಿಟಿಷ್ ಸರ್ಕಾರವು ಮೈಸೂರಿನ ಮಹಾರಾಜರಿಗೆ ಪೂರ್ಣ ರಾಜ್ಯಾಧಿಕಾರವನ್ನು ಕೊಟ್ಟಿತು. ಅದರ ಫಲವಾಗಿ ಚಾಮರಾಜ ಒಡೆಯರು ಸಂಪೂರ್ಣ ಅಧಿಕಾರವುಳ್ಳ ಮಹಾರಾಜರೆಂಬುದು ಇತಿಹಾಸ.

ಮುಮ್ಮಡಿ ಕೃಷ್ಣರಾಜರು ಸಂಸ್ಕೃತ ಶಾಸ್ತ್ರ ವಿದ್ಯೆಯಲ್ಲಿ ಪರಿಣತರಾಗಿದ್ದುದರಿಂದ ಕನ್ನಡದಲ್ಲೂ, ಸಂಸ್ಕೃತದಲ್ಲೂ ಹಲವಾರು ಗ್ರಂಥಗಳನ್ನು ರಚಿಸಿದ್ದಾರೆ. ಕಲಾಪೋಷಕರಾಗಿ ಸಂಗೀತ, ನೃತ್ಯ ಗಳನ್ನು ಬೆಳೆಸಿದ್ದಾರೆ. ವಿದ್ವಾನೇವ ವಿಜಾನಾತಿ ವಿದ್ವಜ್ಜನಪರಿಶ್ರಮಮ್ (ವಿದ್ವಾಂಸನೇ ವಿದ್ವಾಂಸರ ಯೋಗ್ಯತೆಯನ್ನು ತಿಳಿಸಬಲ್ಲನು) ಎಂಬುದು ನಿತ್ಯ ಸತ್ಯ. ಅಂತಹ ಮಹಾರಾಜರಿಗೆ ಪೂರ್ಣಾಧಿಕಾರ ಇದ್ದಿದ್ದರೆ ವಿದ್ಯೆಯೂ ಕಲೆಯೂ ಇನ್ನಷ್ಟು ಅಭಿವೃದ್ಧಿ ಪಡೆಯಬಹುದಾಗಿತ್ತೇನೋ! ಈ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಗೌರಿಸತ್ಯ ಅವರು ಪ್ರಾಪ್ತಿ–ಮುಕ್ತಿ ಗಳನ್ನು ರಚಿಸಿದ್ದಾರೆ. ಅರಮನೆಯ ಸಂಪ್ರದಾಯಗಳು, ನೀತಿ ನಿಯಮ ಗಳು ಅವರಿಗೆ ಸುಪರಿಚಿತ. ಈ ಕಾರಣಗಳಿಂದ ಅಂದಿನ ವಾತಾವರಣವನ್ನು ವಾಚಕರಿಗೆ ಕಟ್ಟಿಕೊಡಲು ಅವರು ಸಮರ್ಥರಾಗಿದ್ದಾರೆ.

ಕಥಾಸಾರಾಂಶ : ಶಂಕರ ಶಾಸ್ತ್ರಿಗಳು ನಂಜನಗೂಡಿನಲ್ಲಿ ತಮ್ಮ ಪತ್ನಿ ಲಲಿತಮ್ಮನೊಂದಿಗೆ ಜೀವಿಸುತ್ತಾ ನಂಜುಂಡೇಶ್ವರನ ಸೇವೆ





ಮಾಡುತ್ತಿರುತ್ತಾರೆ. ಸಂತಾನವಿಲ್ಲವೆಂಬ ಒಂದು ಚಿಂತೆ ಬಿಟ್ಟರೆ ಅವರಿಗೆ ಯಾವ ಕೊರತೆಯೂ ಇರುವುದಿಲ್ಲ. ಅವರ ತೇಜಸ್ಸನ್ನು ನೋಡಿ, ಅವರ ವಿದ್ಯೆಯ ಬಗೆಗೆ ತಿಳಿದು ರಾಜಧಾನಿ ಮೈಸೂರಿಗೇ ಬರಲು ಮಹಾರಾಜರ ಅಪ್ಪಣೆಯಾಗಿ ಶಂಕರ ಶಾಸ್ತ್ರಿಗಳು ಮೈಸೂರಿಗೆ ಬಂದು ನೆಲೆಸುತ್ತಾರೆ. ಪಾಠಶಾಲೆಯಲ್ಲಿ ಪಾಠ, ಪ್ರವಚನ, ಅರಮನೆಯಲ್ಲಿ ಪೌರೋಹಿತ್ಯ ಇವು ಅವರ ಕರ್ತವ್ಯಗಳಾಗಿರುತ್ತವೆ. ಲಲಿತಮ್ಮನವರು ಮರಣ ಹೊಂದಲು ಶಂಕರ ಶಾಸ್ತ್ರಿಗಳು ಒಬ್ಬೊಂಟಿಗರಾಗುತ್ತಾರೆ. ಅವರಿಗೆ ಮತ್ತೊಂದು ಮದುವೆ ಮಾಡಿಸಲು ಮಿತ್ರರು ಮಾಡಿದ ಪ್ರಯತ್ನ ಸಫಲವಾಗುವುದಿಲ್ಲ. ಅವರು ಲಲಿತಾ ಸಹಸ್ರನಾಮದ, ಲಲಿತಾತ್ರಿಶತಿಯ ಪಾರಾಯಣದಲ್ಲಿ ಸದಾ ಮುಳುಗಿರುತ್ತಾರೆ. ಶೃಂಗೇರಿ ಜಗದ್ಗುರುಗಳು ಮೈಸೂರಿಗೆ ಬಂದಾಗ ಶಾಸ್ತ್ರಿಗಳು ಮಾಡಿದ ಉಪನ್ಯಾಸ ಅತ್ಯಂತ ಪ್ರಭಾವ ಶಾಲಿಯಾಗಿರುತ್ತದೆ. ಹೀಗಿರುವಾಗ ಮೈಸೂರಿನ ಅರಮನೆಯಲ್ಲಿ ಗೌರಾಂಬೆ ಎಂಬ ನರ್ತಕಿಯ ನೃತ್ಯ ಪ್ರದರ್ಶನ ಏರ್ಪಟ್ಟಿರುತ್ತದೆ. ಮಹಾರಾಜರ ಸಮ್ಮುಖದಲ್ಲಿ ಶಂಕರ ಶಾಸ್ತ್ರಿಗಳೂ ನೃತ್ಯವನ್ನು ನೋಡಲು ಕುಳಿತಿರುತ್ತಾರೆ. ಅಪ್ಸರೆಯಂತಿದ್ದ ಗೌರಾಂಬೆ ನರ್ತಿಸುತ್ತಿದ್ದರೆ ಅವಳಲ್ಲಿ ಜಗನ್ಮಾತೆ ಲಲಿತಾಂಬೆಯನ್ನು ಕಂಡು ತನ್ಮಯರಾದ ಶಂಕರ ಶಾಸ್ತ್ರಿಗಳು ಎದ್ದು ಭಾವಾವೇಶದಿಂದ ಅವಳ ಪಾದಗಳಿಗೆ ನಮಸ್ಕಾರ ಮಾಡುತ್ತಾರೆ. ನೃತ್ಯ ಅರ್ಧದಲ್ಲೇ ನಿಂತು ಹೋಗುತ್ತದೆ. ಶಾಸ್ತ್ರಿಗಳು ಹಾಗೇಕೆ ಮಾಡಿದರೆಂದು ಯಾರಿಗೂ ಅರ್ಥವಾಗುವುದಿಲ್ಲ. ಆಮೇಲೆ ಒಂದು ದಿನ ಶಾಸ್ತ್ರಿಗಳು ಗೌರಾಂಬೆಯ ಮನೆಗೆ ಹೋಗಿ 'ನೀನು ಸಾಕ್ಷಾತ್ತಾಗಿ ನನ್ನ ಮನೆಗೆ ಬಂದು ಪೂಜೆಯನ್ನು ಸ್ವೀಕರಿಸಿ ಅನುಗ್ರಹಿಸಬೇಕು' ಎಂದು ಕೇಳಿಕೊಳ್ಳುತ್ತಾರೆ. ಆಕೆಯು ಒಪ್ಪಿ ಬಂದಾಗ ಶಾಸ್ತ್ರೋಕ್ತವಾಗಿ ಮಂತ್ರೋಚ್ಚಾರಣಪೂರ್ವಕವಾಗಿ ರಾತ್ರಿಯೆಲ್ಲ ಪೂಜೆ ನಡೆಯುತ್ತದೆ. ಮರುದಿನ ಬೆಳಗ್ಗೆ ಗೌರಾಂಬೆ ತನ್ನ ಮನೆಗೆ ಹಿಂದಿರುಗುವುದನ್ನು ನೋಡಿದ ಜನರು ಶಾಸ್ತ್ರಿಗಳ ನಡತೆಯ ಬಗೆಗೆ ಅಪವಾದವನ್ನು ಹಬ್ಬಿಸುತ್ತಾರೆ. ಇದರಿಂದ ನೊಂದ ಶಂಕರ ಶಾಸ್ತ್ರಿಗಳು ಮೈಸೂರನ್ನು ತೊರೆದು ಕಾಶಿಗೆ ಹೊರಟರು.

ಇಷ್ಟು **ಪ್ರಾಪ್ತಿ** ಎಂಬ ಮೊದಲನೆಯ ಕಾದಂಬರಿಯ ಕಥೆ. ಮುಂದಿನ ಭಾಗದಲ್ಲಿ ಎಂದರೆ **ಮುಕ್ತಿ** ಎಂಬ ಕಾದಂಬರಿಯಲ್ಲಿ ಕಾಶಿಯಲ್ಲಿ ಶಂಕರ ಶಾಸ್ತ್ರಿಗಳು ಶೃಂಗೇರಿ ಶಂಕರ ಮಠದಲ್ಲಿ ಅಧ್ಯಾತ್ಮಾನ್ವೇಷಣೆ, ವಿಶ್ವನಾಥನ ಸೇವೆ, ಪಂಡಿತರೊಡನೆ ಅಧ್ಯಯನ ಇತ್ಯಾದಿ ಮಾಡಿದ ವರ್ಣನೆಯಿದೆ. ಶಂಕರ ಶಾಸ್ತ್ರಿಗಳು ಇದ್ದಕ್ಕೆ ಇದ್ದಂತೆ ಮೈಸೂರನ್ನು ಬಿಟ್ಟು ಹೋದದ್ದು, ಅದಕ್ಕೆ ಕಾರಣವಾದ ಜನರ ಗುಸುಗುಸು ಮಾತು–ಇವೆಲ್ಲ ಮಹಾರಾಜರ ಕಿವಿಗೂ ಬೀಳುತ್ತದೆ. ಆದರೆ ಅವರು ಎಲ್ಲಿಗೆ ಹೋದರೆಂಬುದು ತಿಳಿಯುವುದಿಲ್ಲ. ಈ ಮಧ್ಯೆ ಕಾಶೀವಿಶ್ವನಾಥನ ದರ್ಶನಕ್ಕಾಗಿ ಮಹಾರಾಜರು ಕಾಶಿಗೇ ಬರುತ್ತಾರೆ. ದೂರದಲ್ಲಿ ಶಾಸ್ತ್ರಿಗಳನ್ನು ಕಂಡು ಅವರೇ ಶಂಕರ ಶಾಸ್ತ್ರಿಗಳಿರಬೇಕೆಂದು ಊಹಿಸಿ, ವಿಚಾರಿಸಿ ಶಂಕರ ಮಠಕ್ಕೆ ಬಂದು 'ನೀವು ಯಾವುದೇ ಚಿಂತೆಯಿಲ್ಲದೆ ರಾಜಧಾನಿಗೆ ಹಿಂದಿರುಗಬೇಕು. ಇದು ನಮ್ಮ ಅಪೇಕ್ಷೆ ಎಂದು ಮಹಾರಾಜರು ಹೇಳುತ್ತಾರೆ. ಅದಕ್ಕೆ ಅನುಗುಣವಾಗಿ ಶಾಸ್ತ್ರಿಗಳು ಮೈಸೂರಿಗೆ ಬರುತ್ತಾರೆ. ಮಹಾರಾಜರ ಆದೇಶಾನುಸಾರವಾಗಿ ಅವರಿಗೆ ಭವ್ಯವಾದ ಸ್ವಾಗತವಾಗುತ್ತದೆ. ಮಹಾರಾಜರ ಅಪೇಕ್ಷೆಯಂತೆ ಅರಮನೆಯಲ್ಲಿ ಮತ್ತೊಮ್ಮೆ ಗೌರಾಂಬೆಯ ನೃತ್ಯ ಪ್ರದರ್ಶನ ಏರ್ಪಾಡಾದಾಗ ಸಭೆಯಲ್ಲಿ ಶಂಕರ ಶಾಸ್ತ್ರಿಗಳೂ ಉಪಸ್ಥಿತರಾಗಿರುತ್ತಾರೆ. ನೃತ್ಯ ಮುಗಿದು ಎಲ್ಲರೂ ತೆರಳಿದರೂ ರಸಾನುಭವದಲ್ಲಿ ತಲ್ಲೀನರಾಗಿದ್ದ ಶಾಸ್ತ್ರಿಗಳು ಅಲ್ಲೇ ಕುಳಿತಿರುತ್ತಾರೆ. ಆಮೇಲೆ ಮನೆಗೆ ತೆರಳುತ್ತಾರೆ. ಹೀಗಿರಲು ಸಂಭ್ರಮದಿಂದ ಗೌರಾಂಬೆಯ ಮದುವೆ ಆಗುತ್ತದೆ. ಶಾಸ್ತ್ರಿಗಳು ಮಹಾರಾಜರಿಗೆ ಗಾಯತ್ರೀ ಮಂತ್ರದ ಮಹಿಮೆಯನ್ನು ವಿವರಿಸುತ್ತಾರೆ. ಆಮೇಲೆ ಮೈಸೂರನ್ನು ಬಿಟ್ಟು ನಂಜನಗೂಡಿಗೆ ಹಿಂದಿರುಗುತ್ತಾರೆ. ಕಪಿಲೆಯಲ್ಲಿ ಮುಳುಗಿ ನಂಜುಂಡೇಶ್ವರನಿಗೆ ನಮಸ್ಕರಿಸಿ ಪ್ರವಾಹದಲ್ಲೇ ಲೀನವಾಗುತ್ತಾರೆ.

ಇಷ್ಟು ಮುಕ್ತಿಯಲ್ಲಿನ ಕಥೆ. ಕಾದಂಬರಿಯಲ್ಲಿ ಹಲವು ಪಾತ್ರಗಳು ಕಾಣಿಸಿಕೊಳ್ಳುತ್ತವೆ. ಗೌರಾಂಬೆ ಒಂದು ಮುಖ್ಯ ಪಾತ್ರ. ಅವಳ ಸೌಂದರ್ಯದ ವರ್ಣನೆ ಕಾದಂಬರಿಗಳಲ್ಲಿ ಹಲವು ಬಾರಿ ಬಂದಿದೆ.

"ಶಾಸ್ತ್ರಿಗಳು ಗೌರಾಂಬೆಯ ಅಸಾಧಾರಣ ಸೌಂದರ್ಯ ಕಂಡು ಬೆರಗಾಗಿ ಹೋದರು. ಎಂತಹ ಸುರಸುಂದರಿ ಇವಳು। ಎಲ್ಲಿಯ ಲಾವಣ್ಯಸಿರಿ ಇವಳದು । ಓಹ್ ! ಏನು ಮೈಮಾಟವಿದು! ಆ ಸಾಕ್ಷಾತ್ ಪರಮೇಶ್ವರಿಯೇ ಮೈತಾಳಿ ಬಂದಿರುವಂತಿದೆಯಲ್ಲ ಈ ಹೆಣ್ಣು ! ಇನ್ನು ನಾಟ್ಯಕ್ಕೂ ಇಳಿದುಬಿಟ್ಟರೆ!"

(ಪ್ರಾಪ್ತಿ : ಪು 87)

"ಮಹಾರಾಜರ ಮುಂದೆ ಬಂದು ನಿಂತು ತನ್ನ ತೆಳು ಮುಸುಕನ್ನು ತೆಗೆದು ಪ್ರಭುಗಳಿಗೆ ನಡುಬಾಗಿ ನಮಸ್ಕರಿಸಿದಾಗ ಇಡೀ ಸಭೆ ಅವಳ ಸೌಂದರ್ಯ ಕಂಡು ಬೆರಗಾಗಿ ಹೋಯಿತು. ಅವಳ ರೂಪ, ಲಾವಣ್ಯದ ಜೊತೆಗೆ ನಾಟ್ಯಾಲಂಕಾರವೂ ಸೇರಿ ಅವಳ ಅನುಪಮ ಸೌಂದರ್ಯ ಮತ್ತಷ್ಟು ರೂಪುಗೊಂಡಿತ್ತು. ಇಂದ್ರಲೋಕದ ಅಪ್ಸರೆಯೇ ಬಂದು ನಾಟ್ಯವಾಡಲು ನಿಂತಿದ್ದಾಳೇನೋ ಎನ್ನುವಂತಿತ್ತು. ಅವಳ ಸೌಂದರ್ಯ–ಸೊಬಗು. ಮಹಾರಾಜರು ಅವಳ ಸೌಂದರ್ಯ ಕಂಡು ಹಸನ್ಮುಖಿಗಳಾದರು."

(ಮುಕ್ತಿ ಪು. 129–130)

ಗೌರಿ ಸತ್ಯ ಲಲಿತಾಸಹಸ್ರನಾಮ, ಸೌಂದರ್ಯ ಲಹರೀ, ಸ್ವರ ಚೂಡಾಮಣಿ ಮುಂತಾದ ಗ್ರಂಥಗಳ ಅಧ್ಯಯನದ ಸಾರವನ್ನು ಈ ಎರಡು ಕಾದಂಬರಿಗಳಲ್ಲಿ ಧಾರಾಕಾರವಾಗಿ ಹರಿಸಿದ್ದಾರೆ. ಶಂಕರ ಶಾಸ್ತ್ರಿಗಳ ಉಪನ್ಯಾಸವನ್ನು ವರ್ಣಿಸುವಾಗ ಅದು ಅಭಿವ್ಯಕ್ತವಾಗುತ್ತದೆ.

"ಹಯಗ್ರೀವ ಮುನಿಯು ಅಗಸ್ತ್ಯರಿಗೆ ಉಪದೇಶಿಸಿದಂತೆ ರಹಸ್ಯಗಳಲ್ಲಿ ಅತ್ಯಂತ ರಹಸ್ಯವಾದ ಈ ಸ್ತವವು ದೇವಿಯ ಭಕ್ತಾದಿಗಳಿಂದ ರಕ್ಷಿಸಲ್ಪಡಬೇಕು. ಈ ಶಕ್ತ್ಯಕ್ಷರಗಳನ್ನು ಕೇವಲ ನಮ್ಮ ಧೀಶಕ್ತಿಯನ್ನು ಪ್ರಚೋದಿಸಿಕೊಳ್ಳಲು ಅದರಿಂದ ನಮ್ಮ ತಪಃ ಶಕ್ತಿಯನ್ನು ವೃದ್ಧಿಸಿಕೊಳ್ಳಲು ಬಳಸಿಕೊಳ್ಳಬೇಕೇ ಹೊರತು ಅನ್ಯರಿಗೆ, ಅಪ್ರಾಪ್ತರಿಗೆ ಇದನ್ನು ಬೋಧಿಸಬಾರದು". (ಪ್ರಾಪ್ತಿ ಪು. 72) ಇತ್ಯಾದಿ.

ಗಾಯತ್ರೀ ಮಂತ್ರದ ಬಗೆಗೆ ಗ್ರಂಥಕಾರರಿಗಿರುವ ಶ್ರದ್ಧೆಯೂ ಹಲವು ಸ್ಥಳಗಳಲ್ಲಿ ಪ್ರಕಾಶಿತವಾಗಿದೆ.

"ತಮ್ಮ ಬುದ್ಧಿಶಕ್ತಿಯನ್ನು ಪ್ರಚೋದಿಸಿಕೊಂಡು ಪರಮಾತ್ಮನ ಸ್ವರೂಪವನ್ನು ಅವನ ತೇಜಃಸ್ವರೂಪದಲ್ಲಿ ಕಾಣಬಹುದಾದ ಇಂತಹ ಪವಿತ್ರವಾದ ಗಾಯತ್ರೀ ಜಪವನ್ನು ಯಾವುದೇ ಕಾರಣಕ್ಕೆ ಬಿಡಬಾರದು." (ಮುಕ್ತಿ ಪು. 154).

ಪ್ರಾಪ್ತಿಯಲ್ಲಿ ಸಹಗಮನದ ದೃಶ್ಯವೊಂದಿದೆ. ಸಂಗೀತಗಾರ ಶುಂಠಿ ವೆಂಕಟರಮಣಯ್ಯನವರ ಪತ್ನಿ ಗೌರಮ್ಮನು ಸಹಗಮನ ಮಾಡುವ ದೃಶ್ಯ (ಪು.31). ಮಹಾರಾಜರೇ ಬೇಡವೆಂದು ಹೇಳಿದರೂ, ಅದು ಅಂದಿನ ಕಾನೂನಿಗೆ ವಿರುದ್ಧವಾದರೂ, ತಿಳಿಸಿದರೂ ಆಕೆ ಸಹಗಮನ ಮಾಡಿದರೆಂದು ಹೇಳಲಾಗಿದೆ. ಅದು ಮೈಸೂರು ಕಂಡ ಕಟ್ಟಕಡೆಯ ಸಹಗಮನವೆಂದೂ, ಆ ಸ್ಥಾನದಲ್ಲಿ ಒಂದು ಬೃಂದಾವನವನ್ನು ನಿರ್ಮಿಸಿದರೆಂದೂ ಪುಸ್ತಕದಲ್ಲಿ ಹೇಳಿದ್ದಾರೆ. ಇದೊಂದು ಐತಿಹಾಸಿಕ ವಿಷಯ. ಸಾಮಾನ್ಯ ಜನರಿಗೆ ತಿಳಿಯದ ವಿಷಯ. ಇದನ್ನು ವಾಚಕರ ಗಮನಕ್ಕೆ ತಂದುದಕ್ಕೆ ಗ್ರಂಥಕಾರರಿಗೆ ನಾವು ಋಣಿಗಳು.

ಪ್ರಾಪ್ತಿಗೆ ಮುನ್ನುಡಿಯನ್ನು ಬರೆದ ಮಳಲಿ ವಸಂತಕುಮಾರ್ ಈ ಪುಸ್ತಕದಲ್ಲಿರುವ ವಿಶಿಷ್ಟ ಕನ್ನಡ ಪದಗಳ (ಪೆಠಾರಿ, ಸಂದೂಕ, ಕೊಂಪೆ, ಲವಾಜಮೆ, ಹೆಂಟೆ) ಬಗೆಗೆ ಓದುಗರ ಗಮನವನ್ನು ಸೆಳೆದಿದ್ದಾರೆ. ದರೋಗ, ಭಕ್ಷಿ ಮೊದಲಾದುವನ್ನೂ ಇಲ್ಲಿ ನೆನೆಸಿಕೊಳ್ಳಬಹುದು. ಕೆಲವು ಸಂಸ್ಕೃತ ಪದಗಳ ತಪ್ಪುರೂಪಗಳೂ ಪುಸ್ತಕದಲ್ಲಿವೆ. ಸ್ತಿಮಿತ ಎಂಬುದನ್ನು ಸ್ಥಿಮಿತ ಎಂದೂ ಪುರಸ್ಕಾರ ಎಂಬುದನ್ನು ಪುನಸ್ಕಾರ ಎಂದೂ ಮುದ್ರಿಸಲಾಗಿದೆ. ಮುಂದಿನ ಮುದ್ರಣದಲ್ಲಿ ಈ ತಪ್ಪುಗಳನ್ನು ತಿದ್ದಿದರೆ ಒಳ್ಳೆಯದು.

ಗೌರಿ ಸತ್ಯ (ಜಿ. ಸತ್ಯನಾರಾಯಣ) ಅವರ ಕನ್ನಡ ಸಾಹಿತ್ಯ ಸೇವೆ ಅಭಿನಂದನೀಯ. ಸಂಸ್ಕೃತಿಯ ತಿರುಳನ್ನು ಹೀಗೆ ನಿರೂಪಿಸಬಲ್ಲ ಲೇಖಕರು ವಿರಳ. ಅವರ ಸಾರಸ್ವತ ಸಪರ್ಯೆ ಸಫಲವಾಗಲೆಂದು ಹಾರೈಸೋಣ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಶ್ರೀಗಳಿಂದ ಮಾಂಟೆಸ್ಸರಿ ಸ್ಕೂಲ್ ಉದ್ಘಾಟನೆ...



ಬೆಂಗಳೂರಿನ ಜಂಬುನಗರದಲ್ಲಿರುವ ಭಾರತ್ ಎಜುಕೇಶನ್ ಸೊಸೈಟಿಯಲ್ಲಿ ಆರಂಭಿಸಿರುವ ಮಾಂಟೆಸ್ಸರಿ ಸ್ಕೂಲ್ ಅನ್ನು ಆದಿಚುಂಚನಗಿರಿ ಪೀಠಾಧ್ಯಕ್ಷರಾದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು. ಈ ವೇಳೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ, ಭಾರತ್ ಎಜುಕೇಶನ್ ಸೊಸೈಟಿ ಗೌರವಾಧ್ಯಕ್ಷರೂ ಆದ ಶಾಸಕ ಎಸ್.ಟಿ.ಸೋಮಶೇಖರ್, ಅಧ್ಯಕ್ಷ ನಿರ್ಮಲ್‌ಕುಮಾರ್ ಉಪಸ್ಥಿತರಿದ್ದರು.

ಗುಜರಾತ್ ವಿರುದ್ಧ ಪಂಜಾಬ್‌ಗೆ ಪ್ರಯಾಸದ ಗೆಲುವು

ನ್ಯೂ ಚಂಡೀಗಡ, ಮಾ.31(ವಿವಿಹೆಚ್)– ಕನ್ನಡಿಗ ವೈಶಾಖ್ ವಿಜಯ್ ಕುಮಾರ್ ಮಾರಕ ಬೌಲಿಂಗ್ ದಾಳಿ ಹಾಗೂ ಕೂಪರ್ ಕಾನೋಲಿ ಅವರ ಅರ್ಧಶತಕದ ನೆರವಿನಿಂದ ಗುಜರಾತ್ ಟೈಟಾನ್ಸ್ ವಿರುದ್ಧ ಪಂಜಾಬ್ ಕಿಂಗ್ಸ್ 3 ವಿಕೆಟ್‌ಗಳ ಪ್ರಯಾಸದ ಗೆಲುವು ದಾಖಲಿಸಿದೆ.

ಆ ಮೂಲಕ ಟೂರ್ನಿಯಲ್ಲಿ ಪಂಜಾಬ್ ಶುಭಾರಂಭ ಮಾಡಿದ್ದು, ಐಪಿಎಲ್ ಪ್ರಾರಂಭವಾದಾಗಿಂದ ಒನ್ ಸೈಡೆಡ್ ಪಂದ್ಯಗಳನ್ನು ನೋಡಿ ಬೋರ್ ಆಗಿದ್ದ ಕ್ರಿಕೆಟ್ ಪ್ರೇಮಿಗಳಿಗೆ ಗುಜರಾತ್ ಟೈಟಾನ್ಸ್ ಮತ್ತು ಪಂಜಾಬ್ಸ್ ಕಿಂಗ್ಸ್ ನಡುವಿನ ಪಂದ್ಯ ಚುಟುಕು ಕ್ರಿಕೆಟ್‌ನ ರೋಚಕತೆಯನ್ನು ಉಣಬಡಿಸಿತು.

ಇಲ್ಲಿನ ಮುಲ್ಲನ್ಪುರ್ ಮಹಾರಾಜ ಯಾದವೀಂದ್ರ ಸಿಂಗ್ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ಟೈಟಾನ್ಸ್ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 162 ರನ್ ಗಳಿಸಿತು. ನಂತರ ಗುರಿ ಬೆನ್ನತ್ತಿದ ಪಂಜಾಬ್ ಕಿಂಗ್ಸ್ 19.1 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 165 ರನ್ ಕಲೆ ಹಾಕಿ 5 ಎಸೆತಗಳು ಬಾಕಿ ಉಳಿದಿರುವಂತೆ 3 ವಿಕೆಟ್‌ಗಳಿಂದ ಗೆಲುವು ದಾಖಲಿಸಿತು. ಪಂದ್ಯದುದ್ದಕ್ಕೂ ಕರ್ನಾಟಕದ ಮಧ್ಯಮ ವೇಗದ ಬೌಲರ್‌ಗಳಾದ ವಿಜಯಕುಮಾರ್ ವೈಶಾಖ್ ಮತ್ತು ಪ್ರಸಿದ್ಧ ಕೃಷ್ಣ ಅವರು ಹೈಲೈಟ್ ಆದರು.



ಇದಕ್ಕೂ ಮುನ್ನಾ ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ಟೈಟಾನ್ಸ್‌ಗೆ ನಾಯಕ ಶುಭ್‌ಮನ್ ಗಿಲ್ ಹಾಗೂ ಜೋಸ್ ಬಟ್ಲರ್ ನೆರವಾದರು. ಗಿಲ್ 27 ಎಸೆತಗಳಲ್ಲಿ 6 ಬೌಂಡರಿ ಒಳಗೊಂಡ 39 ರನ್ ಗಳಿಸಿದರೆ, ಬಟ್ಲರ್ 33 ಎಸೆತಗಳಲ್ಲಿ 3 ಬೌಂಡರಿ, 2 ಸಿಕ್ಸರ್ ಒಳಗೊಂಡ 38 ರನ್ ಗಳಿಸಿ ನಿರ್ಗಮಿಸಿದರು.

ಉಳಿದಂತೆ ಗ್ಲೇನ್ ಫಿಲಿಪ್ಸ್ 25, ಸಾಯ್ ಸುದರ್ಶನ್ 13, ವಾಷಿಂಗ್ಟನ್ ಸುಂದರ್ 18, ಶಾರುಖ್ ಖಾನ್ 4, ರಾಹುಲ್ ತೆವಾಟಿಯಾ ಅಜೇಯ 11 ರನ್ ಗಳಿಸಿ ತಂಡದ ಗೌರವಾನ್ವಿತ ಮೊತ್ತಕ್ಕೆ ಕಾರಣರಾದರು.

ಲಯಬದ್ಧ ಬೌಲಿಂಗ್ ಪ್ರದರ್ಶನ ನೀಡಿದ ಪಂಜಾಬ್ ಪರ ಕನ್ನಡಿಗ ವೈಶಾಖ್ ವಿಜಯ್ ಕುಮಾರ್ 3, ಯುಜುವೇಂದ್ರ ಚಹಲ್ 2, ಮಾರ್ಕೋ ಯಾನ್ಸನ್ 1 ವಿಕೆಟ್ ಪಡೆದರು.

ಬಳಿಕ ಗೆಲುವಿನ ಗುರಿ ಬೆನ್ನತ್ತಿದ ಪಂಜಾಬ್ ಆರಂಭದಲ್ಲೇ 7 ರನ್ ಗಳಿಸಿದ್ದ ಪ್ರಿಯಾಂಶ್ ಆರ್ಯ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. 2ನೇ ವಿಕೆಟ್‌ಗೆ ಜೊತೆಯಾದ ಪ್ರಭ್‌ಸಿಮ್ರಾನ್ ಸಿಂಗ್ ಹಾಗೂ ಕೂಪರ್ ಕಾನಲಿ 76 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ 4 ಸಿಕ್ಸರ್, 1 ಬೌಂಡರಿ ಒಳಗೊಂಡ 37 ರನ್ ಗಳಿಸಿದ್ದ ಪ್ರಭ್‌ಸಿಮ್ರಾನ್ ಸಿಂಗ್ ವಿಕೆಟ್ ಒಪ್ಪಿಸಿದರು. ನಂತರ ಬಂದ ನಾಯಕ ಶ್ರೇಯಸ್ ಅಯ್ಯರ್ 2 ಸಿಕ್ಸರ್ ಒಳಗೊಂಡ 18 ರನ್ ಗಳಿಸಿ ಬಹುಬೇಗ ಔಟಾದರು. ಈ ವೇಳೆ 110 ರನ್ ಗಳಿಗೆ 3 ವಿಕೆಟ್ ಕಳೆದುಕೊಂಡಿದ್ದ ಪಂಜಾಬ್ 118 ರನ್ ಗಳಿಸುವ ವೇಳೆ ಮತ್ತೆ 3 ವಿಕೆಟ್‌ಗಳನ್ನು ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಒಂದೆಡೆ ವಿಕೆಟ್ ಬೀಳುತ್ತಿದ್ದರೂ ಏಕಾಂಗಿ ಹೋರಾಟ ನಡೆಸಿದ ಕೂಪರ್ ಕಾನೋಲಿ 44 ಎಸೆತಗಳಲ್ಲಿ ತಲಾ 5 ಬೌಂಡರಿ, ಸಿಕ್ಸರ್ ಒಳಗೊಂಡ ಜೇಯ 72 ರನ್ ಗಳಿಸಿ ತಂಡಕ್ಕೆ ಜಯ ತಂದುಕೊಟ್ಟರು. ಇವರಿಗೆ ಉತ್ತಮ ಸಾಥ್ ನೀಡಿದ ಜೇವಿಯ್ ಬಾರ್ಟ್ಲೆಟ್ ಅಜೇಯ 11 ರನ್ ಗಳಿಸಿದರು.

ಗುಜರಾತ್ ಪರ ಕನ್ನಡಿಗ ಪ್ರಸಿದ್ಧ್ ಕೃಷ್ಣ 3, ಕಗಿಸೋ ರಬಾಡ, ಅಶೋಕ್ ಶರ್ಮಾ, ರಶೀದ್ ಖಾನ್ ಹಾಗೂ ವಾಷಿಂಗ್ಟನ್ ಸುಂದರ್ ತಲಾ ಒಂದೊಂದು ವಿಕೆಟ್ ಪಡೆದರು. ಕೂಪರ್ ಕಾನೋಲಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಏ.5ರಂದು ಸಭೆ

ಮೈಸೂರು: ಮೈಸೂರಿನ ಅಶೋಕ ಪುರಂನಲ್ಲಿರುವ ವೀಳ್ಯದೆಲೆ ಬೆಳೆ ಯುವ ರೈತರ ಸಂಘದ 2026ರಿಂದ 2028ರ 3 ವರ್ಷದ ಅವಧಿಯ ಪದಾಧಿಕಾರಿಗಳ ಚುನಾವಣೆ ಸಂಬಂಧ ಸಂಘದ ಹಿರಿಯ ಉಪಾಧ್ಯಕ್ಷ ದಾಸಯ್ಯ ಅಧ್ಯಕ್ಷತೆಯಲ್ಲಿ ವೀಳ್ಯದೆಲೆ ಬೆಳೆಗಾರರು, ಮಾರಾಟಗಾರರ ಸಭೆಯನ್ನು ಏ.5ರಂದು ನಾಚನಹಳ್ಳಿಯ ಪುಟ್ಟಚೆಲುವ ಅವರ ವೀಳ್ಯದೆಲೆ ತೋಟದಲ್ಲಿ ಏರ್ಪಡಿಸಲಾಗಿದೆ.

ಟೆನ್ನಿಸ್ ದಂತಕಥೆ ಲಿಯಾಂಡರ್ ಪೇಸ್ ಬಿಜೆಪಿ ಸೇರ್ಪಡೆ!

ಕೊಲ್ಕೋತಾ, ಮಾ.31– ಪಶ್ಚಿಮ ಬಂಗಾಳ ಚುನಾವಣೆಗೂ ಮುನ್ನ ಭಾರತೀಯ



ಟೆನಿಸ್ ದಂತಕಥೆ ಲಿಯಾಂಡರ್ ಪೇಸ್ ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ಕೇಂದ್ರ ಸಚಿವ ಕಿರಣ್ ರಿಜಿಜು ಸೇರಿದಂತೆ ಪಕ್ಷದ ಹಿರಿಯ ನಾಯಕರ ಸಮ್ಮುಖದಲ್ಲಿ ಅವರು ಬಿಜೆಪಿ ಸೇರಿದ್ದಾರೆ. ಟೆನಿಸ್ ತಾರೆ ಲಿಯಾಂಡರ್ ಪೇಸ್ ಇತ್ತೀಚೆಗೆ ಕೋಲ್ಕತ್ತಾದಲ್ಲಿ ಬಿಜೆಪಿ ಮುಖ್ಯಸ್ಥ ನಿತಿನ್ ನಬಿನ್ ಅವರನ್ನು ಭೇಟಿಯಾಗಿದ್ದರು, ಇದು ಅವರು ಪಕ್ಷ ಸೇರುವ ಬಗ್ಗೆ ಊಹಾಪೋಹಗಳಿಗೆ ಕಾರಣವಾಯಿತು.

ಪೇಸ್ 2021ರಲ್ಲಿ ತೃಣಮೂಲ ಕಾಂಗ್ರೆಸ್ ಸೇರಿದ್ದರು ಮತ್ತು 2022ರಲ್ಲಿ ಗೋವಾ ಚುನಾವಣೆಯ ಸಮಯದಲ್ಲಿ ಪಕ್ಷಕ್ಕಾಗಿ ಪ್ರಚಾರ ಮಾಡಿದ್ದರು. ಆದರೆ ಅವರು ಚುನಾವಣೆಯಲ್ಲಿ ಸ್ಪರ್ಧಿಸಿರಲಿಲ್ಲ.

ಮುಂದಿನ 2 ದಿನ ರಾಜ್ಯದಲ್ಲಿ ಭಾರೀ ಮಳೆ: ಹಲವು ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್!

ಬೆಂಗಳೂರು, ಮಾ.31– ಬೆಂಗಳೂರು ಸೇರಿದಂತೆ ರಾಜ್ಯದ ಹಲವೆಡೆ ಮುಂದಿನ ಎರಡು ದಿನ ಭಾರೀ ಮಳೆಯಾಗಲಿದ್ದು ಹಲವು ಜಿಲ್ಲೆಗಳಿಗೆ ರಾಜ್ಯ ಹವಾಮಾನ ಇಲಾಖೆ ಯೆಲ್ಲೋ ಅಲರ್ಟ್ ಘೋಷಿಸಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣವಿದ್ದು, ಕಲಬುರಗಿ, ವಿಜಯಪುರ ಮತ್ತು ಧಾರವಾಡ ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಬೀದರ್, ಬಾಗಲಕೋಟೆ, ಗದಗ, ಉತ್ತರ ಕನ್ನಡ, ಶಿವಮೊಗ್ಗ, ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಕೊಡಗು, ಹಾಸನ, ಮೈಸೂರು, ಮಂಡ್ಯ, ಚಾಮರಾಜನಗರ, ರಾಮನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ ಜಿಲ್ಲೆಗಳಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಉತ್ತರ ಒಳನಾಡಿನ ಕೆಲವು ಪ್ರದೇಶಗಳಲ್ಲಿ ಅಲ್ಲಲ್ಲಿ ಮಳೆಯ ಮುನ್ಸೂಚನೆ ಇದೆ. ಗಾಳಿಯ ಪ್ರಭಾವ ಹೆಚ್ಚಿದ್ದರೆ ಉಳಿದ ಭಾಗಗಳಲ್ಲಿಯೂ ಅಲ್ಲಲ್ಲಿ ತುಂತುರು ಮಳೆಯ ಸಾಧ್ಯತೆಗಳಿವೆ.

ಜಯಲಲಿತಾರ ಹೈದರಾಬಾದ್ ಮನೆ ಮುಟ್ಟುಗೋಲು

ಹೈದರಾಬಾದ್, ಮಾ.31– ಹೈದರಾಬಾದ್‌ನಲ್ಲಿರುವ ತಮಿಳುನಾಡು ಮಾಜಿ ಮುಖ್ಯಮಂತ್ರಿ ದಿವಂಗತ ಜೆ. ಜಯಲಲಿತಾ ಒಡೆತನದ ವಸತಿ ಕಟ್ಟಡವನ್ನು ಗ್ರೇಟರ್ ಹೈದರಾಬಾದ್ ಮುನ್ಸಿಪಲ್ ಕಾರ್ಪೊರೇಷನ್ (GHMC) ತಾತ್ಕಾಲಿಕವಾಗಿ ವಶಪಡಿಸಿಕೊಂಡಿದ್ದು, ತೆರಿಗೆ ಬಾಕಿ ಪಾವತಿಸುವುದಾಗಿ ವಾರಸುದಾರರು ಭರವಸೆ ನೀಡಿದ ನಂತರ ಮಂಗಳವಾರ ಬಿಡುಗಡೆ ಮಾಡಿದೆ.




ಶ್ರೀನಗರ ಕಾಲೋನಿಯಲ್ಲಿರುವ G+4(ನೆಲಮಹಡಿ ಮತ್ತು ನಾಲ್ಕು ಮಹಡಿ) ಕಟ್ಟಡವನ್ನು ಸೋಮವಾರ ಗ್ರೇಟರ್ ಹೈದರಾಬಾದ್ ಮುನ್ಸಿಪಲ್ ಕಾರ್ಪೊರೇಷನ್(GHMC) ಅಧಿಕಾರಿಗಳು ವಶಪಡಿಸಿಕೊಂಡಿದ್ದರು. ಕಾರಣ 2017ರಿಂದ ಬಾಕಿ ಇರುವ ತೆರಿಗೆ ಪಾವತಿಸುವಂತೆ ಅದರ ವಾರಸುದಾರರಿಗೆ ಹಲವು ನೋಟಿಸ್‌ಗಳನ್ನು ನೀಡಿದರೂ ಪ್ರತಿಕ್ರಿಯಿಸಲು ವಿಫಲರಾಗಿದ್ದರು ಎಂದು GHMC ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆಸ್ತಿ ತೆರಿಗೆ ಬಾಕಿ ಪಾವತಿಸಲು ನಾವು ನೋಟಿಸ್‌ಗಳನ್ನು ನೀಡಿದ್ದೇವೆ. ತೆರಿಗೆ ಸಂಗ್ರಹಿಸಲು ಹಲವಾರು ಬಾರಿ ಅವರ ಮನೆಗೆ ಭೇಟಿ ನೀಡಿದ್ದೇವೆ. ಆದರೆ ಯಾವುದಕ್ಕೂ ಸ್ಪಂದಿಸದಿದ್ದಾಗ ನಾವು ಅದನ್ನು ನಿಯಮಗಳ ಪ್ರಕಾರ ವಶಪಡಿಸಿಕೊಳ್ಳಬೇಕಾಯಿತು ಎಂದು ಅವರು ಹೇಳಿದ್ದಾರೆ.

ಮಧ್ಯಪ್ರಾಚ್ಯ ಸಂಘರ್ಷದ ನಡುವೆಯೂ ಭಾರತ ಸುಸ್ಥಿರ

ಇದಕ್ಕೆ ಮೋದಿ ದೂರದೃಷ್ಟಿಯೇ ಪ್ರಮುಖ ಕಾರಣ; ಕೆ.ಬಿ.ಲಿಂಗರಾಜು ಅಭಿಪ್ರಾಯ

ಮೈಸೂರು,ಮಾ.31–ಮಧ್ಯಪ್ರಾಚ್ಯ ಸಂಘರ್ಷದಿಂದ ಹಲವು ದೇಶಗಳು ತತ್ತರಿಸಿರುವ ಸಂದರ್ಭದಲ್ಲಿ ನಮ್ಮ ಭಾರತವು ಸದೃಢವಾಗಿರುವಲ್ಲಿ ಪ್ರಧಾನಿ ಮೋದಿ ಅವರ ದೂರ ದೃಷ್ಟಿಯ 'ಆತ್ಮ ನಿರ್ಭರ್' ಹಾಗೂ 'ಮೇಕ್ ಇನ್ ಇಂಡಿಯಾ' ಯೋಜನೆಗಳು ಮಹತ್ವದ ಪಾತ್ರ ವಹಿಸಿವೆ ಎಂದು ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ. ಲಿಂಗರಾಜು ಅಭಿಪ್ರಾಯಿಸಿದ್ದಾರೆ.



ಕೆ.ಬಿ.ಲಿಂಗರಾಜು

ಅಮೆರಿಕ, ಇಸ್ರೇಲ್ ಹಾಗೂ ಇರಾನ್ ನಡುವಿನ ಯುದ್ಧದ ಪರಿಣಾಮ ಹಲವು ರಾಷ್ಟ್ರಗಳು ಅನಿಲ ಹಾಗೂ ಪೆಟ್ರೋಲಿಯಂ ಉತ್ಪನ್ನಗಳ ವಿಚಾರದಲ್ಲಿ ತೀವ್ರ ಸಂಕಷ್ಟಕ್ಕೆ ಸಿಲುಕಿವೆ. ಆದರೆ ಭಾರತದಲ್ಲಿ ವ್ಯತ್ಯಯವಾಗಿದ್ದರೂ ತತ್ತರಿಸುವ ಪರಿಣಾಮಗಳೇನು ಉಂಟಾಗಿಲ್ಲ. ಇದಕ್ಕೆ ಕಾರಣ ಪ್ರಧಾನ ಮಂತ್ರಿ ಅವರ ದೂರದೃಷ್ಟಿ, ಈ ಹಿಂದೆಯೇ ಸೌರಶಕ್ತಿ ಘಟಕಗಳ ಸ್ಥಾಪನೆ ಮತ್ತು ಜೈವಿಕ ಅನಿಲ ಬಳಕೆಗೆ ಒತ್ತು ನೀಡಲಾಗಿದೆ. ಆತ್ಮ ನಿರ್ಭರ್ ಹಾಗೂ ಮೇಕ್ ಇನ್ ಇಂಡಿಯಾ ಯೋಜನೆಗಳ ಮೂಲಕ ದೇಶವನ್ನು ಸದೃಢಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

ಒಂದು ಕಾಲದಲ್ಲಿ ಭಾರತಕ್ಕೆ ಜಾಗತಿಕ ಮನ್ನಣೆ ಸಿಗುತ್ತಿರಲಿಲ್ಲ. ಆದರೆ ಪ್ರಸ್ತುತ ಇಡೀ ವಿಶ್ವವೇ ಬಲಿಷ್ಠ ಭಾರತದತ್ತ ತಿರುಗಿ ನೋಡುತ್ತಿವೆ. ಅತೀ ಹೆಚ್ಚು ಜನ ಸಂಖ್ಯೆ ಹೊಂದಿರುವ ಭಾರತ, ಕೋವಿಡ್ ಕಾಲಘಟ್ಟದ ಸವಾಲುಗಳನ್ನು ಸಮರ್ಥವಾಗಿ ಎದುರಿಸಿ, ಜನರ ಜೀವದ ಜೊತೆಗೆ ಜೀವನವನ್ನೂ ರಕ್ಷಿಸಿಕೊಂಡಿತು. ಕೋವಿಡ್‌ನಿಂದ ರಕ್ಷಿಸಿಕೊಳ್ಳುವ ಲಸಿಕೆಗಳನ್ನು ಸಂಶೋಧನೆ ಮಾಡಿ, ಇತರೆ ದೇಶಗಳಿಗೂ ನೆರವಿನ ಹಸ್ತ ಚಾಚಿತು. ಇದೀಗ ಯುದ್ಧದ ಪರಿಣಾಮವನ್ನೂ ಜನತೆಗೆ ಹೊರೆಯಾಗದಂತೆ ನಿಭಾಯಿಸುತ್ತಿದೆ. ಕೈಗಾರಿಕಾ ಕ್ಷೇತ್ರದಲ್ಲಿನ ಅತ್ಯುತ್ತಮ ಸಾಧನೆಯೊಂದಿಗೆ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಹಾಗೂ ಧಾರ್ಮಿಕ ಕ್ಷೇತ್ರದಲ್ಲೂ ಪ್ರಗತಿಯ ದಾಪುಗಾಲಿಟ್ಟಿದೆ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

ಪ್ರಧಾನಿ ಮೋದಿಯವರ ದೂರದೃಷ್ಟಿ ಹಾಗೂ ರಾಷ್ಟ್ರಾಭಿಮಾನ ಎಲ್ಲರೂ ಮೆಚ್ಚುವಂತದ್ದು. ಜಾಗತಿಕ ಮಟ್ಟದಲ್ಲಿ ಭಾರತಕ್ಕೆ ಅಗ್ರಮಾನ್ಯತೆ ತಂದು ಕೊಟ್ಟ ಮಹಾನ್ ನಾಯಕ ಮೋದಿಯವರನ್ನು ಪ್ರಧಾನಿಯಾಗಿ ಪಡೆದ ನಾವೇ ಧನ್ಯರು. ನಾಲ್ಕು ಬಾರಿ ಗುಜರಾತ್ ಮುಖ್ಯಮಂತ್ರಿಯಾಗಿ ಅಲ್ಲಿನ ಅಭಿವೃದ್ಧಿ ಹರಿಕಾರರಾದ ಮೋದಿ, ಮೂರನೇ ಬಾರಿಗೆ ಪ್ರಧಾನಮಂತ್ರಿಯಾಗಿ ಪ್ರಾಮಾಣಿಕ ಹಾಗೂ ದಕ್ಷ ಆಡಳಿತ ನೀಡುತ್ತಿದ್ದಾರೆ. ಭಾರತ ವಿಶ್ವಗುರುವಾಗಿ ಮೋದಿ ವಿಶ್ವ ನಾಯಕರಾಗುವ ಸತ್ಕಾಲ ಕೂಡಿಬರುತ್ತಿದೆ ಎಂದು ತಿಳಿಸಿದ್ದಾರೆ.

ವೈಭವದ ಶ್ರೀ ಚೆಲುವನ ಮಹಾ ರಥೋತ್ಸವ



ಮೇಲುಕೋಟೆಯಲ್ಲಿ ಶ್ರೀಚೆಲುವನಾರಾಯಣಸ್ವಾಮಿ ಮಹಾ ರಥೋತ್ಸವ ವಿಜೃಂಭಣೆಯಿಂದ ನೆರವೇರಿತು.

ಮೇಲುಕೋಟೆ, ಮಾ.31– ಶ್ರೀಚೆಲುವನಾರಾಯಣ ಸ್ವಾಮಿ ವೈರಮುಡಿ ಬ್ರಹ್ಮೋತ್ಸವದ 7ನೇ ತಿರುನಾಳ್ ಪ್ರಯುಕ್ತ ಮಂಗಳವಾರ ಲಕ್ಷಾಂತರ ಭಕ್ತರ ಸಮಕ್ಷಮದಲ್ಲಿ ಮಹಾ ರಥೋತ್ಸವ ವೈಭವದಿಂದ ನೆರವೇರಿತು.

ಶ್ರೀದೇವಿ–ಭೂದೇವಿ ಕಲ್ಯಾಣ ನಾಯಕಿಯರೊಡನೆ ರಥಾರೂಢನಾದ ಚೆಲುವನಾರಾಯಣಸ್ವಾಮಿ ದರ್ಶನ ಪಡೆದ ನಾಡಿನ ವಿವಿಧೆಡೆಗಳಿಂದ ಆಗಮಿಸಿದ್ದ ಲಕ್ಷಾಂತರ ಭಕ್ತರು ರಥೋತ್ಸವದಲ್ಲಿ ಭಾಗಿಯಾಗಿ ರಥಕ್ಕೆ ಹಣ್ಣು ಜವನ ಎಸೆದು ಸಂಭ್ರಮಿಸಿದರು.

ರಥೋತ್ಸವಕ್ಕೂ ಮುನ್ನಾ ನಡೆದ ಉತ್ಸವದಲ್ಲಿ ಶಾಸಕ ದರ್ಶನ್ ಪುಟ್ಟಣ್ಣಯ್ಯ ಭಾಗವಹಿಸಿದ್ದರು. ವೈರಮುಡಿ ಜಾತ್ರಾ ಮಹೋತ್ಸವದ 7ನೇ ತಿರುನಾಳ್ ಅಂಗವಾಗಿ ನಡೆದ ಮಹಾ ರಥೋತ್ಸವಕ್ಕೆ ಮಧ್ಯಾಹ್ನ 12.30ರ ವೃಷಭ ಲಗ್ನದಲ್ಲಿ ರಥಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅವರ ಪುತ್ರ ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷ ಸಚಿನ್, ಎಡಿಸಿ ಶಿವಾನಂದಮೂರ್ತಿ ಹಾಗೂ ಅಧಿಕಾರಿಗಳು ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಿದರು. ರಥೋತ್ಸವ ವೇಳೆ ಆಕಾಶದಲ್ಲಿ ಗರುಡ ಪಕ್ಷಿಗಳು ಪ್ರದಕ್ಷಿಣೆ ಹಾಕಿದ್ದು ಭಕ್ತರಲ್ಲಿ ಸಂಭ್ರಮದ ಜೊತೆಗೆ ಶುಭ ಸೂಚನೆ ನೀಡಿತು.

ಭಕ್ತರ ಜಯಘೋಷಗಳೊಂದಿಗೆ ಮಹಾರಥ ಮಾರಿಗುಡಿ ಬೀದಿ, ರಾಜ ಬೀದಿಗಳಲ್ಲಿ ಸಾಗಿ 1.40ರ ವೇಳೆಗೆ ದೇವಾಲಯದ ರಾಜಗೋಪುರದ ಬಳಿ ನೆಲೆ ನಿಂತಿತು. ಈ ವೇಳೆ ದೇವಾಲಯದಿಂದ ಪೂಜೆ ನೆರವೇರಿಸಿದ ಬಳಿಕ ವಾನಮಾಮಲೈ ಬೀದಿ, ರಥದ ಬೀದಿಯಲ್ಲಿ ಸಾಗಿ ಮಧ್ಯಾಹ್ನ 3 ಗಂಟೆ ವೇಳೆಗೆ ಸ್ವಸ್ಥಾನ ರಥದ ಮಂಟಪಕ್ಕೆ ಬಂದು ತಲುಪಿತು. ದೇವಾಲಯದ ಶ್ರೀಪಾದದವರು, ಬಂಡೀಕಾರರು, ಗ್ರಾಮದ ಯುವಕರು ಮಹಾರಥೋತ್ಸವದ ಯಶಸ್ಸಿಗೆ ಶ್ರಮಿಸಿದರು. ಮಹಾ ರಥೋತ್ಸವದಲ್ಲಿ ಪಾಂಡವಪುರ ಉಪವಿಭಾಗಾಧಿಕಾರಿ ಶ್ರೀನಿವಾಸ್, ತಹಸೀಲ್ದಾರ್ ಬಸವರಾಜ ರೆಡ್ಡಪ್ಪ, ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಪರಮೇಶ್‌ಗೌಡ, ದೇವಾಲಯದ ಇಓ ಶೀಲಾ, ಶಾಸಕರ ಸಹೋದರ ರಾಘವ ಪ್ರಕಾಶ್, ಪಾರುಪತ್ತೇಗಾರ ಸ್ಥಾನಾಚಾರ್ಯ ಶ್ರೀನಿವಾಸನರಸಿಂಹನ್ ಗುರೂಜಿ, ಎಂ.ಎನ್. ಪಾರ್ಥಸಾರಥಿ ಇದ್ದರು. ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಮೇಲುಕೋಟೆಗೆ ಆಗಮಿಸಿ ದೇವರ ದರ್ಶನ ಪಡೆದರು. ಭಕ್ತರ ದಾಹ ತಣಿಸಲು ಯತಿರಾಜ ದಾಸರ್ ಗುರುಪೀಠ ಹಾಗೂ ಚಿನ್ನಜೀಯರ್ ಮಠದ ವತಿಯಿಂದ ಮಜ್ಜಿಗೆ, ಪಾನಕ ವಿತರಿಸಲಾಯಿತು.

ಬೆಳಗ್ಗೆ 6 ಗಂಟೆಗೆ ದೇವಾಲಯದಲ್ಲಿ ಪೂಜಾ ಕೈಂಕರ್ಯಗಳು ನಡೆದವು. 8.30ಕ್ಕೆ ರಥ ಬಲಿ ಪೂರೈಸಿ ನಂತರ ಯಾತ್ರಾದಾನ ಕೈಗೊಳ್ಳಲಾಯಿತು. ನಂತರ ರಾಮಾನುಜಾಚಾರ್ಯರೊಂದಿಗೆ ಶ್ರೀದೇವಿ ಭೂದೇವಿ ಕಲ್ಯಾಣನಾಯಕಿ ಅಮ್ಮನವರೊಂದಿಗೆ ವಜ್ರಖಚಿತ ರಾಜಮುಡಿ ಧರಿಸಿದ್ದ ಚೆಲುವನಾರಾಯಣಸ್ವಾಮಿ ಉತ್ಸವ ವಿಶೇಷ ಮಂಗಳವಾದ್ಯ ಹಾಗೂ ವೇದಘೋಷದೊಂದಿಗೆ ರಥದ ಮಂಟಪದ ಬಳಿಗೆ ಸಾಗಿ 3 ಪ್ರದಕ್ಷಿಣೆ ಹಾಕಿ ಮಹೂರ್ತ ಪಠಣದ ನಂತರ ರಥಾರೋಹಣ ನಡೆಯಿತು. ಸ್ಥಾನೀಕಂ ನಾಗರಾಜ ಅಯ್ಯಂಗಾರ್ ಸಾಂಸ್ಕೃತಿಕ ವೇದಿಕೆ ವತಿಯಿಂದ ಯತಿರಾಜ ದಾಸರ್ ಗುರುಪೀಠದಿಂದ ನಡೆಯುತ್ತಿರುವ 11ನೇ ವರ್ಷದ ನಾದೋಪಾಸನ ಸೇವೆಯಡಿ ವಿದ್ವಾನ್ ಆನಂದ ಕುಮಾರ್ ತಂಡ ವಿಶೇಷ ನಾದಸ್ವರ ಕೈಂಕರ್ಯ ನಡೆಸಿದರು.

ಮಹಾ ರಥೋತ್ಸವದಲ್ಲಿ ನಿರೀಕ್ಷೆಗೂ ಮೀರಿ ಭಕ್ತರು ಆಗಮಿಸಿ ಮೇಲುಕೋಟೆಯ ಪ್ರಮುಖ ಬೀದಿಗಳಲ್ಲಿ ಚೆಲುವನ ದರ್ಶನಕ್ಕೆ ಕಾಯುತ್ತಿದ್ದ ದೃಶ್ಯ ಕಂಡು ಬಂತು. ಸರ್ಕಲ್ ಇನ್ಸ್‌ಪೆಕ್ಟರ್ ಶರತ್ ಕುಮಾರ್ ಮಾರ್ಗದರ್ಶನದಲ್ಲಿ ಪೊಲೀಸರು ಭದ್ರತೆ ನೀಡಿದ್ದರು.

ಚಿಟ್ಟನಹಳ್ಳಿ ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷರಿಗೆ ಅಭಿನಂದನೆ



ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅಭಿನಂದಿಸಿದರು.

ಪಾಂಡವಪುರ, ಮಾ.31– ತಾಲೂಕಿನ ಚಿಟ್ಟನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷ, ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಾದ ಅಧ್ಯಕ್ಷ ಕೆ.ಕುಮಾರ್ ಹಾಗೂ ಉಪಾಧ್ಯಕ್ಷ ಜೆ.ಗಿರೀಶ್ ಅವರನ್ನು ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಅಭಿನಂದಿಸಿದರು.

ನಿರ್ದೇಶಕರ ಚುನಾವಣೆಯಲ್ಲಿ ಸಂಘದ ಎಲ್ಲಾ 11 ಸ್ಥಾನಗಳಲ್ಲೂ ಜೆಡಿಎಸ್ ಬೆಂಬಲಿತರು ನಿರ್ದೇಶಕರಾಗಿ ಆಯ್ಕೆಯಾಗುವ ಮೂಲಕ ಸಂಘದ ಆಡಳಿತದ ಚುಕ್ಕಾಣಿ ಹಿಡಿಯುವಲ್ಲಿ ಯಶಸ್ವಿಯಾಗಿದ್ದರು. ನಂತರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕುಮಾರ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಜೆ.ಗಿರೀಶ್ ಅವರನ್ನು ಅವರನ್ನು ಹೊರತುಪಡಿಸಿ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಘೋಷಣೆ ಮಾಡಲಾಗಿತ್ತು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ಎಲ್ಲಾ 11 ಸ್ಥಾನಗಳನ್ನು ಗೆಲ್ಲುವ ಮೂಲಕ ಚಿಟ್ಟನಹಳ್ಳಿ ಪಿಎಸಿಎಸ್ ಅಧಿಕಾರವನ್ನು ಜೆಡಿಎಸ್ ಬೆಂಬಲಿತರು ತಮ್ಮದಾಗಿಸಿಕೊಂಡಿರುವುದು ಸಂತಸದ ವಿಚಾರ. ತಾಲೂಕಿನ ಬಹುತೇಕ ಸಹಕಾರ ಸಂಘಗಳಲ್ಲಿ ಜೆಡಿಎಸ್ ಬೆಂಬಲಿತರು ಅಧಿಕಾರ ನಡೆಸುತ್ತಿದ್ದು, ಇದು ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ದಿಕ್ಸೂಚಿಯಾಗಲಿದೆ. ಮುಂದಿನ ದಿನಗಳಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಸಹಕಾರದೊಂದಿಗೆ ಸಂಘದ ಅಭಿವೃದ್ಧಿಗೆ ಪೂರಕವಾಗಿ ಶ್ರಮಿಸುತ್ತೇನೆ ಎಂದರು.

ಈ ವೇಳೆ ನಿರ್ದೇಶಕರಾದ ಕೆಂಪೇಗೌಡ, ಶಿವಣ್ಣ, ಎಸ್.ವೆಂಕಟೇಶ್, ನಾಗರಾಜು, ನೀಲಕಂಠೇಗೌಡ, ಎನ್. ದಿವ್ಯ, ಹೇಮಾ, ಗೋಪಾಲ್, ಮುಖಂಡರಾದ ಗ್ರಾಪಂ ಮಾಜಿ ಅಧ್ಯಕ್ಷ ರಾಧಾಕೃಷ್ಣ, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಸುಂದ್ರಣ್ಣ, ಕೆ.ಟಿ.ರಘು ಬೋರೇಗೌಡ, ಬಲರಾಮು, ಗೋವಿಂದೇಗೌಡ, ಸುಭಾಷ್, ಕುಮಾರ್, ಜಗದೀಶ್, ಪುಟ್ಟರಾಜು, ಶಂಕರ್ ಸೇರಿದಂತೆ ಇತರರಿದ್ದರು.

ಆಟೋ ಪಲ್ಟಿ: ತಂದೆ ಸಾವು, ಮಗನಿಗೆ ತೀವ್ರ ಗಾಯ

ಭಾರತೀನಗರ, ಮಾ.31– ಆಟೋ ಪಲ್ಟಿಯಾದ ಪರಿಣಾಮ ತಂದೆ ಸಾವನ್ನಪ್ಪಿ, ಮಗ ತೀವ್ರವಾಗಿ ಗಾಯಗೊಂಡಿರುವ ಘಟನೆ ಇಲ್ಲಿಗೆ ಸಮೀಪದ ಚಿಕ್ಕರಸಿನಕೆರೆ ಗೇಟ್ ಬಳಿ ನಡೆದಿದೆ.



ಸಿದ್ದರಾಜು

ತಿ.ನರಸೀಪುರ ತಾಲೂಕಿನ ಹಲವಾರ ಗ್ರಾಮದ ನಿವಾಸಿ ಸಿದ್ದರಾಜು(40) ಸಾವನ್ನಪ್ಪಿದ್ದು, ಅವರ ಪುತ್ರ ದಿಲೀಪ್(20) ತೀವ್ರ ಗಾಯಗೊಂಡಿದ್ದಾರೆ. ಸ್ವಗ್ರಾಮ ಹಲವಾರ ಗ್ರಾಮದಲ್ಲಿ ಸಂಬಂಧಿಕರೊಬ್ಬರು ಸಾವನ್ನಪ್ಪಿದ್ದ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ವಾಸವಾಗಿದ್ದ ಸಿದ್ದರಾಜು ಅವರು ಪತ್ನಿ, ಪುತ್ರನೊಂದಿಗೆ ಬಾಡಿಗೆ ಆಟೋದಲ್ಲಿ ಹಲವಾರ ಗ್ರಾಮಕ್ಕೆ ಭಾರತೀನಗರ ಮಾರ್ಗವಾಗಿ ಮದ್ದೂರು–ಮಳವಳ್ಳಿ ಹೆದ್ದಾರಿಯಲ್ಲಿ ತೆರಳುತ್ತಿದ್ದಾಗ ಚಿಕ್ಕರಸಿನಕೆರೆ ಗೇಟ್‌ನ ಸೇತುವೆ ಬಳಿ ಎದುರಿನಿಂದ ಲಾರಿ ವೇಗವಾಗಿ ಬಂದಿದ್ದರಿಂದ ಆಟೋ ಚಾಲಕ ಆಟೋವನ್ನು ಎಡಬದಿಗೆ ಎಳೆದಿದ್ದಾನೆ. ಈ ವೇಳೆ ಸೇತುವೆ ಬಳಿ ಸಾಗುತ್ತಿದ್ದ ಎತ್ತಿನ ಗಾಡಿಗೆ ಆಟೋ ಡಿಕ್ಕಿಯಾಗಿ ಪಲ್ಟಿ ಹೊಡೆದಿದೆ. ಈ ಸಂದರ್ಭ ಆಟೋಗೆ ಅಳವಡಿಸಿದ್ದ ಕಂಬಿ ಸಿದ್ದರಾಜು ದೇಹಕ್ಕೆ ಚುಚ್ಚಿದ್ದರಿಂದ ಅವರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಇನ್ನು ಪುತ್ರ ದಿಲೀಪ್‌ಗೆ ಕಾಲು ಮುರಿದು ತೀವ್ರ ಗಾಯಗೊಂಡಿದ್ದು, ಪತ್ನಿ ಭಾಗ್ಯಮ್ಮ ಹಾಗೂ ಆಟೋ ಡ್ರೈವರ್ ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾಗಿದ್ದಾರೆ. ಎಲ್ಲರನ್ನೂ ಚಿಕಿತ್ಸೆಗಾಗಿ ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಕೆ.ಎಂ.ದೊಡ್ಡಿ ಠಾಣೆ ಪೊಲೀಸರು ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಮದ್ದೂರು ನಗರಸಭೆಗೆ ಗೆಜ್ಜಲಗೆರೆ ಗ್ರಾಮ ಸೇರ್ಪಡೆ ಖಂಡಿಸಿ ಪ್ರತಿಭಟನೆ

ನೂರನೇ ದಿನಕ್ಕೆ ಕಾಲಿಟ್ಟ ಸ್ಥಳೀಯರ ಹೋರಾಟ



ತಹಸೀಲ್ದಾರ್ ಪರಶುರಾಮ್ ಸತ್ತಿಗೇರಿ ಅವರಿಗೆ ಪ್ರತಿಭಟನಾಕಾರರು ಮನವಿ ಸಲ್ಲಿಸಿದರು.

ಮದ್ದೂರು, ಮಾ.31– ಗೆಜ್ಜಲಗೆರೆ ಗ್ರಾಮವನ್ನು ಮದ್ದೂರು ನಗರಸಭೆಗೆ ಸೇರ್ಪಡೆಗೊಳಿಸಿರುವ ಕ್ರಮ ಖಂಡಿಸಿ ಸ್ಥಳೀಯ ನಿವಾಸಿಗಳು ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿ ನೂರನೇ ದಿನಕ್ಕೆ ಕಾಲಿಟ್ಟಿದ್ದು, ಪ್ರತಿಭಟನಾಕಾರರು ತೋಳಿಗೆ ಕಪ್ಪು ಬಟ್ಟೆ ಧರಿಸಿ ಹಲವು ನಿರ್ಣಯಗಳ ಪ್ರತಿಯನ್ನು ತಹಸೀಲ್ದಾರ್ ಪರಶುರಾಮ್ ಸತ್ತಿಗೇರಿ ಅವರಿಗೆ ಸಲ್ಲಿಸಿದರು.

ತಾಲೂಕಿನ ಗೆಜ್ಜಲಗೆರೆ ಗ್ರಾಪಂ ಕಚೇರಿ ಬಳಿ ಕಳೆದ ನೂರು ದಿನಗಳಿಂದಲೂ ನಗರಸಭೆಯಿಂದ ಗ್ರಾಮವನ್ನು ಕೈ ಬಿಡುವಂತೆ ಒತ್ತಾಯಿಸಿ ಸಾರ್ವಜನಿಕರು ಸೇರಿದಂತೆ ವಿವಿಧ ಸಂಘಟನೆಯ ಪದಾಧಿಕಾರಿಗಳು ಹಲವು ರೀತಿಯ ಪ್ರತಿಭಟನೆಗಳನ್ನು ಕೈಗೊಂಡು ಸರ್ಕಾರಕ್ಕೆ ಬಿಸಿ ಮುಟ್ಟಿಸುತ್ತಿದ್ದಾರೆ.

ನೂರನೇ ದಿನದ ಅಂಗವಾಗಿ ನೂರಾರು ಸ್ಥಳೀಯ ನಿವಾಸಿಗಳು, ಪ್ರತಿಭಟನಾಕಾರರು, ಮಹಿಳೆಯರು ಸರ್ಕಾರ ಹಾಗೂ ಜಿಲ್ಲಾಡಳಿತ ಮತ್ತು ಚುನಾಯಿತ ಪ್ರತಿನಿಧಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರಲ್ಲದೆ ಕೂಡಲೇ ಗ್ರಾಮವನ್ನು ನಗರಸಭೆಯಿಂದ ಕೈ ಬಿಡುವಂತೆ ಆಗ್ರಹಿಸಿದರು. ಮಹಿಳೆಯರು, ಮಕ್ಕಳು ವಿವಿಧ ಸಂಘ ಸಂಸ್ಥೆ ಪದಾಧಿಕಾರಿಗಳು ನಿರಂತರವಾಗಿ ಪ್ರತಿಭಟನೆ ಕೈಗೊಂಡಿದ್ದರೂ, ಜಿಲ್ಲಾಡಳಿತ ಯಾವುದೇ ಕ್ರಮಕ್ಕೆ ಮುಂದಾಗದಿರುವ ಬಗ್ಗೆ ಕಿಡಿಕಾರಿದ ಪ್ರತಿಭಟನಾಕಾರರು, ಗೆಜ್ಜಲಗೆರೆ ಗ್ರಾಪಂನಲ್ಲಿ ಹಲವು ಸೌಲಭ್ಯಗಳು ಸಿಗದೆ ಸಾರ್ವಜನಿಕರು ಪರದಾಡುವಂತಾಗಿದ್ದು, ಕೂಡಲೇ ಹಲವು ಸೌಲಭ್ಯಗಳನ್ನು ಒದಗಿಸಲು ಕಚೇರಿಯಲ್ಲಿ ಅಧಿಕಾರಿಗಳು ಕರ್ತವ್ಯ ನಿರ್ವಹಿಸಬೇಕೆಂದು ಒತ್ತಾಯಿಸಿದರು.

ಮುಂದಿನ ದಿನಗಳಲ್ಲಿ ಯಾವುದೇ ಅಹಿತಕರ ಘಟನೆಗಳು ಜರುಗಿದರೆ ಜಿಲ್ಲಾಡಳಿತ ಮತ್ತು ಚುನಾಯಿತ ಪ್ರತಿನಿಧಿಗಳೇ ನೇರ ಹೊಣೆ. ಅದಕ್ಕೆ ಆಸ್ಪದ ನೀಡದೆ ಸಂಬಂಧಿಸಿದ ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿ ಚರ್ಚಿಸಿ ನಿರ್ಣಯ ವಾಪಸ್ ಪಡೆಯುವುದರ ಜೊತೆಗೆ ಗ್ರಾಮವು ಗ್ರಾಮವಾಗೇ ಉಳಿಯಲು ಕ್ರಮ ವಹಿಸಬೇಕೆಂದರು.

ಸ್ಥಳೀಯ ಆಡಳಿತ ಮಂಡಳಿ ಒಪ್ಪಿಗೆ ಪಡೆಯದೆ ಏಕಾಏಕಿ ಗ್ರಾಪಂ ಪಿಡಿಓ ನಿರ್ಧಾರ ಕೈಗೊಂಡಿದ್ದು, ಜೊತೆಗೆ ಸ್ಥಳೀಯ ಸಾರ್ವಜನಿಕರೊಟ್ಟಿಗೆ ಚರ್ಚಿಸದೆ ಮತ್ತು ಗ್ರಾಮಸಭೆ ನಡೆಸದೆ ಕೆಲ ಗ್ರಾಪಂ ಸದಸ್ಯರ ಒಪ್ಪಿಗೆ ಮೇರೆಗೆ ಅನುಮೋದನೆ ಪಡೆದಿದ್ದು ಇದು ಕಾನೂನು ಬಾಹಿರ. ಕೂಡಲೇ ನಗರಸಭೆಯಿಂದ ತಮ್ಮ ಗ್ರಾಮವನ್ನು ಹೊರಗಿಡಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಮುಂದಿನ 2 ದಿನಗಳೊಳಗಾಗಿ ಜಿಲ್ಲಾಡಳಿತ ಅಗತ್ಯ ಕ್ರಮ ವಹಿಸದಿದ್ದಲ್ಲಿ ಮುಂದಿನ ಪ್ರತಿಭಟನೆ ರೂಪರೇಷೆಗಳನ್ನು ಬದಲಿಸಿ ಬೀದಿಗಿಳಿದು ಹೋರಾಟ ಹಮ್ಮಿಕೊಳ್ಳುವುದಾಗಿ ಎಚ್ಚರಿಕೆ ನೀಡಿದರಲ್ಲದೆ ಹಗಲು ರಾತ್ರಿಯೆನ್ನದೆ ನಿರಂತರವಾಗಿ ಸ್ಥಳೀಯರು ಪ್ರತಿಭಟನೆ ನಡೆಸುತ್ತಿದ್ದರೂ ಯಾವೊಬ್ಬ ಅಧಿಕಾರಿಯೂ ಗ್ರಾಮಕ್ಕೆ ಭೇಟಿ ನೀಡಿ ಚರ್ಚಿಸದ ಕ್ರಮವನ್ನು ಖಂಡಿಸಿ ಸರ್ಕಾರಕ್ಕೆ ಹಲವು ನಿರ್ಣಯಗಳ ಪ್ರತಿಯ ಮನವಿಯನ್ನು ತಹಸೀಲ್ದಾರ್ ಅವರಿಗೆ ಸಲ್ಲಿಸಿದರು.

ರೈತಪರ ಹೋರಾಟಗಾರ್ತಿ ಸುನಂದಾ ಜಯರಾಮು ಮಾತನಾಡಿ, ಮದ್ದೂರು ನಗರಸಭೆಗೆ ಗೆಜ್ಜಲಗೆರೆ ಗ್ರಾಮವನ್ನು ಸೇರ್ಪಡೆ ಮಾಡಿರುವ ಕ್ರಮ ಖಂಡಿಸಿ ಗ್ರಾಮಸ್ಥರು ನಡೆಸುತ್ತಿರುವ ಪ್ರತಿಭಟನೆ 100 ದಿನ ಪೂರೈಸಿದ್ದರೂ ಜಿಲ್ಲಾಡಳಿತವಾಗಲಿ, ಜಿಲ್ಲಾ ಉಸ್ತುವಾರಿ ಸಚಿವರಾಗಲಿ, ಶಾಸಕರಾಗಲಿ ಸಮಸ್ಯೆ ಬಗೆಹರಿಸುವಲ್ಲಿ ಉದಾಸೀನ ಮಾಡುತ್ತಾ ಬಂದಿರುವುದು ವಿಪರ್ಯಾಸ ಎಂದರು.

ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ಹಳ್ಳಿಗಳು ನಾಶವಾದರೆ ಕೃಷಿ ನಾಶವಾದಂತೆ ಇದನ್ನು ಶಾಸಕರು ಮನಗಂಡು ಪ್ರಜೆಗಳ ಒತ್ತಾಸೆಯಂತೆ ಗ್ರಾಮವನ್ನು ನಗರಸಭೆಯಿಂದ ಕೈಬಿಡಿಸಬೇಕೆಂದರು. ಈ ಬಗ್ಗೆ ಹಲವು ಬಾರಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಮನವಿ ಮಾಡಿದ್ದರೂ, ಸಮಸ್ಯೆ ಬಗೆಹರಿದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಮನವಿ ಸ್ವೀಕರಿಸಿ ಮಾತನಾಡಿದ ತಹಸೀಲ್ದಾರ್ ಪರಶುರಾಮ್ ಸತ್ತಿಗೇರಿ, ತಮ್ಮ ಮನವಿಯನ್ನು ಪುರಸ್ಕರಿಸಿದ್ದು ಈ ಸಂಬಂಧ ಜಿಲ್ಲಾಧಿಕಾರಿಗಳೊಟ್ಟಿಗೆ ಚರ್ಚಿಸಿ ಅಗತ್ಯ ಕ್ರಮ ವಹಿಸುವ ಭರವಸೆ ನೀಡಿದರು.

ಸಮಾಜ ಸೇವಕ ಉಗ್ರನರಸಿಂಹ, ತಾಪಂ ಮಾಜಿ ಅಧ್ಯಕ್ಷ ಜಿ.ಪಿ.ಯೋಗೇಶ್, ಮಹಿಳಾ ಮುಖಂಡರಾದ ಯದುಶೈಲ ಸಂಪತ್, ನೇತ್ರಾವತಿ, ಪದಾಧಿಕಾರಿಗಳಾದ ವಸಂತ್, ಬೋರಯ್ಯ, ಕೃಷ್ಣೇಗೌಡ, ರವೀಂದ್ರ, ಮಲ್ಲೇಶ್, ಲಿಂಗಪ್ಪಾಜಿ, ಜಿ.ಎ.ಶಂಕರ್, ವೀರಪ್ಪ, ತಾಪಂ ಮಾಜಿ ಅಧ್ಯಕ್ಷ ಜಿ.ಪಿ.ಯೋಗೇಶ್, ಮೋಹನ್‌ಕುಮಾರ್, ಜಿ.ಸಿ.ಮಹೇಂದ್ರ, ಜಿ.ಟಿ.ಪುಟ್ಟಸ್ವಾಮಿ, ಚಂದ್ರಶೇಖರ್, ಮೋಹನ್ ಇತರರಿದ್ದರು.

ಒಂದನೇ ಪುಟದಿಂದ

ಇನ್ನು ದುಬಾರಿ ದುನಿಯಾ...!

ಎಲ್‌ಪಿಜಿ ದರ ಪರಿಷ್ಕರಣೆ: ಗೃಹ ಬಳಕೆಯ ಅಡುಗೆ ಅನಿಲ ಸಿಲಿಂಡರ್ ಬೆಲೆಯನ್ನು ಕೇಂದ್ರ ಸರ್ಕಾರವು ಏಪ್ರಿಲ್ ಒಂದರಂದು ಪರಿಷ್ಕರಿಸುವ ಸಾಧ್ಯತೆಯಿದೆ. ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧದಿಂದ ಉಂಟಾಗಿರುವ ಜಾಗತಿಕ ರಾಜಕೀಯ ಸವಾಲುಗಳನ್ನು ನಿಭಾಯಿಸಲು ಅಡುಗೆ ಅನಿಲ ಬೆಲೆಯಲ್ಲಿ ಹೆಚ್ಚಳವಾಗುವ ನಿರೀಕ್ಷೆಯಿದೆ. ಹಾಗೆಯೇ ಕೊಳವೆ ಮೂಲಕ ಪೂರೈಕೆಯಾಗುವ ನೈಸರ್ಗಿಕ ಅನಿಲ(ಪಿಎನ್‌ಜಿ), ಸಿಎನ್‌ಜಿ ಮತ್ತು ವಿಮಾನ ಇಂಧನ(ಎಟಿಎಫ್) ಬೆಲೆಗಳು ಪರಿಷ್ಕರಣೆಯಾಗಲಿವೆ. ಇದು ವಿಮಾನ ಯಾನ ದರ ಮತ್ತು ದೈನಂದಿನ ಸಾರಿಗೆ ವ್ಯವಸ್ಥೆ ಮೇಲೆ ಪರಿಣಾಮ ಬೀರಲಿದೆ.

ಹಣ ತೆಗೆಯುವ ಶುಲ್ಕವೂ ಜಾಸ್ತಿ: ಹಲವು ಬ್ಯಾಂಕ್‌ಗಳು ಎಟಿಎಮ್‌ನಿಂದ ಉಚಿತ ವಾಗಿ ಹಣ ತೆಗೆಯುವ ಮಿತಿಗೆ ಯುಪಿಐ ಮೂಲಕ ಎಟಿಎಮ್‌ನಿಂದ ಹಣ ತೆಗೆಯು ವುದನ್ನೂ ಸೇರಿಸಲಿವೆ. ಎಟಿಎಮ್‌ಗಳಲ್ಲಿ ನಡೆಯುವ ವ್ಯವಹಾರಗಳು ಐದು ಬಾರಿಯ ಮಿತಿ ಮೀರಿದರೆ, ಮುಂದಿನ ಪ್ರತಿಯೊಂದು ವ್ಯವಹಾರಕ್ಕೆ 23 ರೂ. ಶುಲ್ಕ ವಿಧಿಸಲಾಗುತ್ತದೆ. ಹಣದ ಕೊರತೆಯಿಂದ ವಿಫಲವಾದ ವ್ಯವಹಾರಗಳಿಗೆ 25 ರೂ. ಶುಲ್ಕ ವಿಧಿಸುವ ಸಾಧ್ಯತೆ ಇದೆ. ಭದ್ರತಾ ಕಾರಣಗಳಿಗಾಗಿ ಕೆಲ ಬ್ಯಾಂಕ್ ಎಟಿಎಮ್‌ನಿಂದ ಹಣ ತೆಗೆಯುವ ದೈನಂದಿನ ಮಿತಿಯನ್ನು ಆಯ್ದ ಕಾರ್ಡ್‌ಗಳಿಗೆ ರೂ.50,000–75,000ಕ್ಕೆ ಇಳಿಸಿವೆ. ಪ್ಲಾಟಿನಮ್, ಗೋಲ್ಡ್ ಮತ್ತು ಬಿಸಿನೆಸ್ ಕಾರ್ಡ್‌ಗಳ ಮಿತಿಯನ್ನು 50,000ಕ್ಕೆ ಇಳಿಸಲಾಗಿದೆ. ಮೊದಲು 1 ಲಕ್ಷ ರೂ. ಇದ್ದ ಮಿತಿ ಈಗ ರೂ.50,000ಕ್ಕೆ ಹಾಗೂ 1.5 ಲಕ್ಷ ಇದ್ದ ಮಿತಿ ಈಗ ರೂ. 75,000ಕ್ಕೆ ಇಳಿಯಲಿದೆ.

ರೈಲ್ವೆ ಟಿಕೆಟ್ ರದ್ದು ಕಠಿಣ: ಇನ್ನು ಭಾರತೀಯ ರೈಲ್ವೇಯು ನೂತನ ಆರ್ಥಿಕ ವರ್ಷದಿಂದ ರೈಲು ಟಿಕೆಟ್‌ಗಳನ್ನು ರದ್ದುಗೊಳಿಸುವ ನಿಯಮಗಳನ್ನು ಕಠಿಣಗೊಳಿಸಿದೆ. ನೂತನ ನಿಯಮಗಳ ಪ್ರಕಾರ, ರೈಲು ಹೊರಡುವುದಕ್ಕಿಂತ ಎಂಟು ಗಂಟೆಗಳ ಮೊದಲು ಮಾಡುವ ಟಿಕೆಟ್ ರದ್ದತಿಗೆ ಯಾವುದೇ ಹಣ ಮರುಪಾವತಿಯಾಗುವುದಿಲ್ಲ. ರೈಲು ಹೊರಡುವ ಮೊದಲು 8ರಿಂದ 24 ಗಂಟೆಗಳ ನಡುವಿನ ಅವಧಿಯಲ್ಲಿ ಟಿಕೆಟ್ ರದ್ದುಗೊಳಿಸಿದರೆ ಶೇ.50ರಷ್ಟು, 24ರಿಂದ 72 ಗಂಟೆಗಳ ನಡುವಿನ ಅವಧಿಯಲ್ಲಿ ಟಿಕೆಟ್ ರದ್ದುಗೊಳಿಸಿದರೆ ಶೇ.75ರಷ್ಟು ಹಾಗೂ 72 ಗಂಟೆಗಳ ಮೊದಲು ಟಿಕೆಟ್ ರದ್ದುಗೊಳಿಸಿದರೆ ಗರಿಷ್ಠ ಮರುಪಾವತಿಯಾಗಲಿದೆ.

ಫಾಸ್ಟ್ಯಾಗ್, ಯುಪಿಐಗೆ ಮಾತ್ರ ಅವಕಾಶ

ಟೋಲ್‌ನ ಸಿಬ್ಬಂದಿ ಸತೀಶ್, ಈಗಾಗಲೇ ರಾಷ್ಟ್ರಾದ್ಯಂತ ಎಲ್ಲಾ ಹೆದ್ದಾರಿಗಳಲ್ಲೂ ಏ.1ರಿಂದ ನಗದು ರಹಿತ ವಾಹನ ಸಂಚಾರ ಎಂದು ಘೋಷಿಸಿ, ಫಾಸ್ಟ್ಯಾಗ್ ಬಳಸಲು ಮನವಿ ಮಾಡಲಾಗಿದೆ. ಪ್ರಯಾಣಿಕರಿಗೂ ಈ ಮಾಹಿತಿ ತಿಳಿದಿದೆ ಎನ್ನಲಾಗಿದ್ದು, ದಯವಿಟ್ಟು ನಾಳೆಯಿಂದ ಟೋಲ್ ಸಿಬ್ಬಂದಿಗೆ ಸಹಕರಿಸಿ ಎಂದು ಮನವಿ ಮಾಡಿದ್ದಾರೆ.

ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್‌ವೇ ಜೊತೆಗೆ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಮೇಲೆ ಹಾದು ಹೋಗಲಿರುವ ಬೆಂಗಳೂರು– ಮಂಗಳೂರು ರಾಷ್ಟ್ರೀಯ ಹೆದ್ದಾರಿ ಮತ್ತು ಮಳವಳ್ಳಿ ತಾಲೂಕಿನ ಮೇಲೆ ಹಾದು ಹೋಗಲಿರುವ ಕುಣಿಗಲ್– ದಿಂಡಿಗಲ್ ರಾಷ್ಟ್ರೀಯ ಹೆದ್ದಾರಿಯ ಟೋಲ್‌ಗಳಲ್ಲೂ ನಗದು ರಹಿತ ಸಂಚಾರ ವಿರಲಿದ್ದು, ಫಾಸ್ಟ್ಯಾಗ್ ಬಳಸಬೇಕಿದೆ.

ಚಾಮರಾಜನಗರ: ಚಾಮರಾಜನಗರ ಮತ್ತು ಕೊಯಮತ್ತೂರು ಮಾರ್ಗ ಮಧ್ಯ ಸುವರ್ಣಾವತಿ ಜಲಾಶಯದ ಬಳಿ ಇರುವ ಟೋಲ್‌ನಲ್ಲೂ ನಾಳೆ(ಏ.1) ಯಿಂದ ಫಾಸ್ಟ್ಯಾಗ್, ಯುಪಿಐಯನ್ನು ರಾಷ್ಟ್ರೀಯ ಹೆದ್ದಾರಿ ನಿಯಮದಂತೆ ಕಡ್ಡಾಯಗೊಳಿಸಿದ್ದು, ನಗದು ಸ್ವೀಕಾರವನ್ನು ರದ್ದುಗೊಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ತಿ.ನರಸೀಪುರ: ದೇಶಾದ್ಯಂತ ಹೆದ್ದಾರಿಗಳಲ್ಲಿ ಸಂಚರಿಸುವ ಪ್ರಯಾಣಿಕರಿಗೆ ಟೋಲ್‌ನಲ್ಲಿ ಫಾಸ್ಟ್ಯಾಗ್, ಇಲ್ಲವೇ ಯುಪಿಐ ಕಡ್ಡಾಯಗೊಳಿಸಿರುವಂತೆ ತಿ.ನರಸೀಪುರ–ಮೈಸೂರು ಮುಖ್ಯರಸ್ತೆಯ ಯಡದೊರೆ ಬಳಿಯ ಟೋಲ್‌ನಲ್ಲೂ ನಾಳೆಯಿಂದ(ಏ.1) ಫಾಸ್ಟ್ಯಾಗ್ ಕಡ್ಡಾಯಗೊಳಿಸಲಾಗಿದೆ ಎಂದು ಟೋಲ್ ಮ್ಯಾನೇಜರ್ ಖಲೀಲ್ ತಿಳಿಸಿದ್ದಾರೆ.

ಹೆದ್ದಾರಿ ದುಬಾರಿ: ಟೋಲ್ ದರವು ಶೇ.3ರಿಂದ 5ರಷ್ಟು ಹೆಚ್ಚಳವಾಗಲಿರುವ ಹಿನ್ನೆಲೆಯಲ್ಲಿ ಎಲ್ಲಾ ಮಾದರಿ ವಾಹನಗಳಿಗೂ ಹೆಚ್ಚಿನ ದರದ ಹೊರೆ ಬೀಳಲಿದೆ. ಕಾರು, ಜೀಪು ಇನ್ನಿತರ ಲಘು ವಾಹನಗಳಿಗೆ 5–10 ರೂ. ಹಾಗೂ ವಾಣಿಜ್ಯ ವಾಹನಗಳಿಗೆ 15–40 ರೂ.ವರೆಗೆ ದರ ಏರಿಕೆಯಾಗಲಿದೆ. ಇನ್ನು ನಿಗಧಿತ ವ್ಯಾಪ್ತಿಯ ಮಾಸಿಕ ಪಾಸ್ ದರವೂ 3 ಸಾವಿರದಿಂದ 3075 ರೂಗೆ ಹೆಚ್ಚಳವಾಗಲಿದೆ

ಹುದ್ದೆ ನಿರ್ವಹಣೆ ತರಬೇತಿ ಕಡ್ಡಾಯ

ವರ್ಷ ಅಥವಾ ಅದಕ್ಕಿಂತ ಕಡಿಮೆ ಅವಧಿ ಬಾಕಿ ಇರುವ ನೌಕರರಿಗೆ ಈ ತರಬೇತಿಯಿಂದ ವಿನಾಯಿತಿ ಇರುತ್ತದೆ. ಈ ರಿಯಾಯಿತಿಗಳನ್ನು ಹೊರತುಪಡಿಸಿ ಗ್ರೂಪ್ 'ಎ' ನೌಕರರು ಹಿರಿಯ ಮಟ್ಟದ ಅಧಿಕಾರಿಗಳು ತಮ್ಮ ಆಡಳಿತಾತ್ಮಕ ಕೌಶಲಗಳನ್ನು ನವೀಕರಿಸಿಕೊಳ್ಳಲು ತರಬೇತಿ ಪಡೆಯುವುದು ಕಡ್ಡಾಯ. ಗ್ರೂಪ್ 'ಬಿ' ನೌಕರರು ಮತ್ತು ಮಧ್ಯಮ ಹಂತದ ಅಧಿಕಾರಿಗಳಿಗೆ ಕ್ಷೇತ್ರ ಕಾರ್ಯ ಮತ್ತು ಕಚೇರಿ ನಿರ್ವಹಣೆಯ ಕುರಿತು ವಿಶೇಷ ತರಬೇತಿ ಇರಲಿದೆ. ಗ್ರೂಪ್ 'ಸಿ' ನೌಕರರು ಹಾಗೂ ಕಚೇರಿ ಸಹಾಯಕರು ಮತ್ತು ಇತರ ತಾಂತ್ರಿಕೇತರ ಸಿಬ್ಬಂದಿಗೆ ಈ ನಿಯಮ ಅನ್ವಯವಾಗುತ್ತದೆ ಎಂದು ಹೊಸದಾಗಿ ಪ್ರಕಟಿಸಲಾಗಿರುವ ನಿಯಮಾವಳಿಗಳಲ್ಲಿ ತಿಳಿಸಲಾಗಿದೆ.

ಆನ್‌ಲೈನ್‌ನಲ್ಲಿ 'ಸ್ವಯಂ ಗಣತಿ'

ಮುಂದಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರ ಗಣತಿಗಾಗಿ ದತ್ತಾಂಶ, ಯೋಜನೆ ಮತ್ತು ನೀತಿಯನ್ನು ರೂಪಿಸಿವೆ. ಈ ಜನಗಣತಿ ಆಧಾರದ ಮೇಲೆ ಪರಿಣಾಮಕಾರಿ ಆಡಳಿತಕ್ಕೆ ಕ್ರಮ ಕೈಗೊಳ್ಳಲಾಗುವುದಲ್ಲದೆ, ವಿಧಾನಸಭೆ, ಲೋಕಸಭೆ, ಪಾಲಿಕೆ, ಜಿ.ಪಂ, ತಾ.ಪಂ ಸೇರಿದಂತೆ ಸ್ಥಳೀಯ ಸಂಸ್ಥೆಗಳ ಕ್ಷೇತ್ರ ಪುನರ್ ವಿಂಗಡಣೆ ಹಾಗೂ ಮೀಸಲಾತಿ ನಿಗದಿ ಮಾಡಲು ಜನಗಣತಿಯ ದತ್ತಾಂಶವನ್ನು ಪರಿಗಣಿಸಲಾಗುತ್ತದೆ.

ಸುಳ್ಳು ಮಾಹಿತಿ ನೀಡಿದರೆ, ಮಾಹಿತಿ ನೀಡಲು ನಿರಾಕರಿಸಿದರೆ ಕ್ರಮ: ಭಾರತದ ಜನಗಣತಿ ಕಾಯ್ದೆ 1948ರ ನಿಯಮದ ಪ್ರಕಾರ ನಡೆಸುತ್ತಿರುವ ಮನೆ, ಜನಗಣತಿಯಲ್ಲಿ ಸಾರ್ವಜನಿಕರು ಗಣತಿ ಪ್ರಕ್ರಿಯೆಯಲ್ಲಿ ನಿಖರ ಹಾಗೂ ಸ್ಪಷ್ಟ ಮಾಹಿತಿ ನೀಡಬೇಕು. ಒಂದು ವೇಳೆ ಗಣತಿದಾರರು ಕೇಳಿದ ಪ್ರಶ್ನೆಗೆ ಸುಳ್ಳು ಮಾಹಿತಿ ನೀಡಿದರೆ ಹಾಗೂ ಗಣತಿಗೆ ಅಸಹಕಾರ ಪ್ರದರ್ಶಿಸಿದರೆ ಕ್ರಮ ಕೈಗೊಳ್ಳಲಾಗುತ್ತದೆ.

ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ: ಮನೆ ಪಟ್ಟಿ, ಮನೆ ಗಣತಿ ಪ್ರಕ್ರಿಯೆಗೆ 2056 ಗಣತಿದಾರರು, ಹಾಗೂ 344 ಮೇಲ್ವಿಚಾರಕರನ್ನು ನೇಮಿಸಲಾಗಿದೆ. ಆರು ಜನ ಗಣತಿದಾರರಿಗೆ ಒಬ್ಬರು ಮೇಲ್ವಿಚಾರಕರಂತೆ 312 ಮೇಲ್ವಿಚಾರಕರು ಕಾರ್ಯ ನಿರ್ವಹಿಸಲಿದ್ದು, ಉಳಿದವರನ್ನು ಕಾಯ್ದಿರಿಸಲಾಗಿದೆ. 2056 ಗಣತಿದಾರರಲ್ಲಿ ಶೇ.10ರಷ್ಟು ಸಿಬ್ಬಂದಿಯನ್ನು ಕಾಯ್ದಿ ದಿರಿಸಲಾಗಿದೆ. ಕಳೆದ ಎರಡು ದಿನದಿಂದ 15 ಕೇಂದ್ರಗಳಲ್ಲಿ ಗಣತಿದಾರರಿಗೆ ತರಬೇತಿ ನೀಡಲಾಗಿದೆ. ಈಗಾಗಲೇ 15 ಬ್ಯಾಚ್‌ಗಳಲ್ಲಿ 750ಕ್ಕೂ ಹೆಚ್ಚು ಮಂದಿಗೆ ತರಬೇತಿ ನೀಡಲಾಗಿದೆ. ಪಾಲಿಕೆಯ 9 ವಲಯದಲ್ಲಿ ಗಣತಿ ಪ್ರಕ್ರಿಯೆಗೆ 1830 ಬ್ಲಾಕ್ಸ್ ಮಾಡಿಕೊಂಡು, ಮ್ಯಾಪಿಂಗ್ ಮಾಡಲಾಗಿದೆ. ಏ.3ರಿಂದ 8ವರೆಗೆ ಇನ್ನುಳಿದ ಸಿಬ್ಬಂದಿಗೆ ತರಬೇತಿ ನೀಡಲಾಗುತ್ತದೆ. ಮೈಸೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಅಂದಾಜು 14,62,400 ಜನಸಂಖ್ಯೆ ಇದೆ. ಈ ಬಾರಿ ಮೇಟಗಳ್ಳಿ, ಚಾಮುಂಡಿಬೆಟ್ಟ, ಅಜ್ಜಯ್ಯನ ಹುಂಡಿಯೂ ಪಾಲಿಕೆ ವ್ಯಾಪ್ತಿಗೆ ಒಳಪಡಲಿದ್ದು, ಆ ಭಾಗದಲ್ಲೂ ಪಾಲಿಕೆ ಗಣತಿ ಪ್ರಕ್ರಿಯೆ ನಡೆಸಲಿದೆ.

ಉಪಕರ ಸಂಗ್ರಹಕ್ಕೂ ಕೈ ಹಾಕಿದ ಪಾಲಿಕೆ

ಬಳಕೆಗೆ ಪ್ರತಿ ಸಾವಿರ ಲೀಟರ್‌ಗೆ 20 ರೂ. ಹಾಗೂ 1,00,001 ಲೀಟರ್‌ಕ್ಕಿಂತ ಮೇಲ್ಪಟ್ಟರೆ ಪ್ರತಿ ಸಾವಿರ ಲೀಟರ್‌ಗೆ 25 ರೂ.ನಂತೆ ಪಾವತಿ ಮಾಡಬೇಕಾಗುತ್ತದೆ. ಅಲ್ಲದೆ, ಒಳಚರಂಡಿ ಶುಲ್ಕಕ್ಕೆ ಸಂಬಂಧಿಸಿದಂತೆ ನೀರಿನ ಶುಲ್ಕದ ಒಟ್ಟು ಮೊತ್ತಕ್ಕೆ ಶೇ.40ರಂತೆ ಪರಿಷ್ಕರಿಸಲಾಗಿದೆ. ನೀರಿನ ಸಂಪರ್ಕ ಇಲ್ಲದೇ ಕೇವಲ ಒಳಚರಂಡಿ ಸಂಪರ್ಕ ಹೊಂದಿರುವ ಸ್ವತ್ತುಗಳಿಗೆ ಪ್ರತಿ ತಿಂಗಳಿಗೆ ಗೃಹಬಳಕೆಗೆ 100 ರೂ. (ಸ್ವತ್ತಿನಲ್ಲಿರುವ ಪ್ರತಿ ಪ್ರತ್ಯೇಕ ಘಟಕಕ್ಕೆ), ಗೃಹೇತರ ಬಳಕೆಗೆ 200 ರೂ. (ಸ್ವತ್ತಿನಲ್ಲಿರುವ ಪ್ರತಿ ಪ್ರತ್ಯೇಕ ಘಟಕಕ್ಕೆ) ಹಾಗೂ ವಾಣಿಜ್ಯ/ಕೈಗಾರಿಕೆಗೆ 300 ರೂ. ನಿಗದಿಪಡಿಸಿ ಪರಿಷ್ಕರಿಸಲಾಗಿದೆ.

ಸಾರ್ವಜನಿಕರು ನೀರನ್ನು ಮಿತವಾಗಿ ಬಳಸಲು ಮತ್ತು ನೀರಿನ ಶುಲ್ಕವನ್ನು ನಿಗದಿತ ಅವಧಿಯೊಳಗೆ ಪಾವತಿಸಲು ಪಾಲಿಕೆ ಕೋರಿದೆ. ಅಲ್ಲದೆ, ಮೀಟರ್ ದುರಸ್ತಿಯಲ್ಲಿರುವ ಅಥವಾ ಮೀಟರ್ ಇಲ್ಲದೇ ಇರುವ ಸಂಪರ್ಕಗಳು ತಕ್ಷಣವೇ ಪಾಲಿಕೆ ಗಮನಕ್ಕೆ ತಂದು ದುರಸ್ತಿಪಡಿಸಿಕೊಳ್ಳಲು ಅಥವಾ ಹೊಸ ಮೀಟರ್ ಅಳವಡಿಸಿಕೊಳ್ಳಲು ತಿಳಿಸಲಾಗಿದೆ.


ನೀರಿನ ಹಳೇ ಶುಲ್ಕದ ವಿವರ: 2012ರಿಂದ ಪಾಲಿಕೆ ವ್ಯಾಪ್ತಿಯಲ್ಲಿದ್ದ ನೀರಿನ ಶುಲ್ಕದ ವಿವರ ಇಂತಿದೆ. ಗೃಹಬಳಕೆಯ ನೀರಿನ ಪ್ರತಿ ತಿಂಗಳ ಕನಿಷ್ಠ ದರವು 125 ರೂ. ಇತ್ತು. ಇದೀಗ ಇದು 163 ರೂ.ಗೆ ಏರಿಕೆಯಾಗಿದೆ. 25 ಸಾವಿರ ಲೀಟರ್‌ವರೆಗಿನ ಬಳಕೆಗೆ ಪ್ರತಿ ಸಾವಿರ ಲೀಟರ್‌ಗೆ 5 ರೂ., 25,001ರಿಂದ 50,000 ಲೀಟರ್‌ವರೆಗಿನ ಬಳಕೆಗೆ ಪ್ರತಿ ಸಾವಿರ ಲೀಟರ್‌ಗೆ 8 ರೂ., 50,001ರಿಂದ 75,000 ಲೀಟರ್‌ವರೆಗೆ ಪ್ರತಿ ಸಾವಿರ ಲೀಟರ್‌ಗೆ 12 ರೂ., 75,001ರಿಂದ 1,00,000 ಲೀಟರ್‌ವರೆಗಿನ ಬಳಕೆಗೆ ಪ್ರತಿ ಸಾವಿರ ಲೀಟರ್‌ಗೆ 16 ರೂ. ಹಾಗೂ 1,00,000 ಲೀಟರ್ ಮೇಲ್ಪಟ್ಟರೆ ಪ್ರತಿ ಸಾವಿರ ಲೀಟರ್‌ಗೆ 20 ರೂ. ಶುಲ್ಕ ಪಾವತಿಸಬೇಕಿತ್ತು. ಅಂತೆಯೇ ನೀರಿನ ಶುಲ್ಕದ ಶೇ.30ರಷ್ಟು ಒಳಚರಂಡಿ ಶುಲ್ಕ ಪಾವತಿಸಬೇಕಿತ್ತು.

ಆಸ್ತಿ ತೆರಿಗೆ ಪರಿಷ್ಕರಣೆ; ತೆರಿಗೆ ವಿನಾಯಿತಿ: ಸಾಮಾನ್ಯ ಕೌನ್ಸಿಲ್ ಸಭೆಯಲ್ಲಿ (16–3–2026) ಅನುಮೋದನೆ ಪಡೆದು ಪಾಲಿಕೆ ವ್ಯಾಪ್ತಿಯ ಆಸ್ತಿಗಳಿಗೆ ಆಸ್ತಿ ತೆರಿಗೆ ದರಗಳ ಮೇಲೆ ಕನಿಷ್ಠ ಶೇ.3ರಷ್ಟು ದರ ಅಥವಾ ಮಾರುಕಟ್ಟೆ ಮಾರ್ಗಸೂಚಿ ದರ ಯಾವುದು ಹೆಚ್ಚು ಅದನ್ನು ಏ.1ರಿಂದ ಅನ್ವಯವಾಗುವಂತೆ ಹೆಚ್ಚಿಸಿ ಜಾರಿಗೆ ತರಲಾಗಿದೆ. ಪ್ರತಿ ಆರ್ಥಿಕ ಸಾಲಿನ ಪ್ರಾರಂಭದ ಮಾಹೆಯಲ್ಲಿ (ಏಪ್ರಿಲ್–2026 ಮಾತ್ರ) ಪಾವತಿ ಮಾಡಬೇಕಾದ ಆಸ್ತಿ ತೆರಿಗೆ ಮೇಲೆ ಶೇ.5ರಷ್ಟು ಆಸ್ತಿ ತೆರಿಗೆ ರಿಯಾಯಿತಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ಈ ವರ್ಷದಿಂದ ವಾಹನ ತೆರಿಗೆ ವಸೂಲಿ: ಪಾಲಿಕೆಯ ವ್ಯಾಪ್ತಿಯಲ್ಲಿರುವ ಪ್ರತಿಯೊಂದು ಮನೆಗಳಿಗೆ (ಪಿಐಡಿ) ಆಸ್ತಿಯ ಗುರುತಿನ ಸಂಖ್ಯೆಯ ಆಧಾರದ ಮೇಲೆ ದ್ವಿಚಕ್ರ ವಾಹನಕ್ಕೆ 100 ರೂ., ತ್ರಿಚಕ್ರ ವಾಹನಕ್ಕೆ 200 ರೂ. ಮತ್ತು ನಾಲ್ಕು ಚಕ್ರ ವಾಹನಕ್ಕೆ 500 ರೂ.ನಂತೆ ನಿಯಮಾನುಸಾರ ಮೋಟಾರ್ ವಾಹನ ಉಪಕರ ವಿಧಿಸಲು ಪಾಲಿಕೆ ಮುಂದಾಗಿದೆ. ಅದರಂತೆ 2026–27ರ ಆರ್ಥಿಕ ವರ್ಷದಿಂದ ಆಸ್ತಿ ತೆರಿಗೆ ವಸೂಲಾತಿಯಲ್ಲಿ ವಾಹನ ಉಪಕರಗಳನ್ನು ವಿಧಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಸಂಬಂಧ ಸಾರ್ವಜನಿಕರು ಆಸ್ತಿ ತೆರಿಗೆ ಪಾವತಿಸುವ ಸಂದರ್ಭದಲ್ಲಿ ತಮ್ಮ ವಾಹನಗಳ ಬಗ್ಗೆ ಮಾಹಿತಿ ನೀಡಬೇಕೆಂದು ಪಾಲಿಕೆ ತಿಳಿಸಿದೆ.

ರಾಜ್ಯ ಬಿಜೆಪಿಯಲ್ಲಿ ಬೂಟು ನೆಕ್ಕುವ ಸಂಸ್ಕೃತಿ ಇದೆಯಾ...!?

ಬಿ.ಎಸ್.ಯಡಿಯೂರಪ್ಪಗೆ ಬರೆದ ಪತ್ರದಲ್ಲಿ ಸಾಲು... ಸಾಲು... ಪ್ರಶ್ನೆ ಮುಂದಿಟ್ಟ ಬಿಜೆಪಿ ಉಚ್ಚಾಟಿತ ಶಾಸಕ ಎಸ್.ಟಿ.ಸೋಮಶೇಖರ್



ಯಡಿಯೂರಪ್ಪ



ಸೋಮಶೇಖರ್

ಬೆಂಗಳೂರು, ಮಾ.31(ಕೆಎಂಶಿ)– ರಾಜ್ಯ ಬಿಜೆಪಿಯಲ್ಲಿ ಬೂಟು ನೆಕ್ಕುವ ಸಂಸ್ಕೃತಿ ಇದೆಯಾ, ಬಿಜೆಪಿಗೆ ಬರಬೇಕೆಂದರೆ ಬೂಟು ನೆಕ್ಕಿ ಬರಬೇಕಾ! ಇಂತಹ ಪ್ರಶ್ನೆ ಕೇಳಿ ಶಾಸಕರೊಬ್ಬರು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದಾರೆ. ಈ ಪತ್ರ ಇದೀಗ ರಾಜ್ಯ ರಾಜಕಾರಣದಲ್ಲಿ ಸಂಚಲನ ಸೃಷ್ಟಿಸಿದೆ

ಈ ರೀತಿ ಪತ್ರ ಬರೆದಿರುವುದು ಬೇರ್‍ಯಾರೂ ಅಲ್ಲ, ಬಿಜೆಪಿಯ ಉಚ್ಚಾಟಿತ ಶಾಸಕ ಹಾಗೂ ಮಾಜಿ ಮಂತ್ರಿ ಎಸ್.ಟಿ. ಸೋಮಶೇಖರ್. ಯಡಿಯೂರಪ್ಪ ಅವರಿಗೆ ಇವರು ಬರೆದಿರುವ ಪತ್ರದಲ್ಲಿ ಇಂತಹ ಸಾಲು ಸಾಲು ಪ್ರಶ್ನೆಗಳನ್ನು ಕೇಳಿದ್ದಾರೆ.

ಬಿಜೆಪಿಯಲ್ಲಿ ಬೂಟು ನೆಕ್ಕುವ ಸಂಸ್ಕೃತಿ ಇದೆಯಾ, ಬೂಟು ನೆಕ್ಕುವವರಿಗೆ ಮಾತ್ರ ಅವಕಾಶವೇ, ಬೂಟು ನೆಕ್ಕದ ಕಾರಣಕ್ಕೆ ನನ್ನನ್ನು ಉಚ್ಚಾಟನೆ ಮಾಡಲಾಯಿತಾ! ಬಿಜೆಪಿಗೆ ಮರಳಬೇಕೆಂದರೆ ನಿಮ್ಮ ಬೂಟು ನೆಕ್ಕಬೇಕಾ ಅಥವಾ ನಿಮ್ಮಮಗ ವಿಜಯೇಂದ್ರ ಅವರ ಬೂಟು ನೆಕ್ಕಬೇಕಾ ಬಿಜೆಪಿಯಲ್ಲಿರುವವರು ಬೂಟ್ ನೆಕ್ಕಬೇಕು ಎಂದು ನೀವು ಮತ್ತು ವಿಜಯೇಂದ್ರ ಬಯಸುತ್ತಿದ್ದೀರಾ, ಕರ್ನಾಟಕದ ಯಾವುದೇ ವ್ಯಕ್ತಿ ಬಿಜೆಪಿಯಲ್ಲಿ ಬೆಳೆಯಬೇಕು ಎಂದರೆ ಯಾರ ಬೂಟ್ ನೆಕ್ಕಬೇಕು, ರುದ್ರೇಶ್ ಅವರು ನೈಸ್‌ನ ದತ್ತು ಪುತ್ರರಾಗಿದ್ದು, ಅವರಿಗೆ ಪಕ್ಷದ ಜವಾಬ್ದಾರಿ ನೀಡಿದ್ದೀರಾ? ಕರ್ನಾಟಕ ಬಿಜೆಪಿಯನ್ನು ವಿಜಯೇಂದ್ರ ಅಥವಾ ರುದ್ರೇಶ್ ನಡೆಸುತ್ತಿದ್ದಾರಾ? ನೈಸ್‌ ಇಂದ ಆದ ಸಮಸ್ಯೆ ಬಗ್ಗೆ ಪ್ರಶ್ನೆ ಮಾಡಬಾರದಾ? ಇಂತಹ ಕ್ಷುದ್ರಗ್ರಹನನ್ನು ನೀವು ಬೆನ್ನಿಗೆ ಕಟ್ಟಿಕೊಂಡು ಓಡಾಡುತ್ತೀರಾ?

ಹಾಗಾದರೆ ಆತನ ಹೇಳಿಕೆಗೆ ನಿಮ್ಮ ಸಹಮತ ಇದೆಯಾ ಎಂದು ಪ್ರಶ್ನಿಸಿದ್ದಾರೆ.

ಇದಕ್ಕೆ ಪ್ರಮುಖ ಕಾರಣ ಇತ್ತೀಚೆಗೆ ನಡೆದ ವಿಧಾನಸಭೆ ಕಲಾಪದಲ್ಲಿ ಎಸ್.ಟಿ ಸೋಮಶೇಖರ್ ಅವರು ನೈಸ್ ಹೆದ್ದಾರಿ ಯೋಜನೆಯ ಅಕ್ರಮಗಳ ಬಗ್ಗೆ ಪ್ರಶ್ನೆ ಮಾಡಿದ್ದರು. ಇದಕ್ಕೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದ ಬಿಜೆಪಿ ಮುಖಂಡ ರುದ್ರೇಶ್, ಶಾಸಕ ಸೋಮಶೇಖರ್ ವಿರುದ್ಧ ಹಲವು ಆರೋಪಗಳನ್ನು ಮಾಡಿದ್ದರು ಸೋಮಶೇಖರ್ ಮತ್ತೆ ಬಿಜೆಪಿಗೆ ಬರಲು ಸಿದ್ಧರಾಗಿದ್ದಾರೆ ಎಂದು ಹೇಳಿದ್ದ ಅವರು ಬಿಜೆಪಿಗೆ ಯಾರ ಬೂಟು ನೆಕ್ಕಲು ಬರುತ್ತೀಯಾ?' ಎಂದು ಪ್ರಶ್ನಿಸಿದ್ದರು

ಇದಕ್ಕೆ ಆಕ್ರೋಶ ವ್ಯಕ್ತಪಡಿಸಿ ಯಡಿಯೂರಪ್ಪ ಅವರಿಗೆ ಪತ್ರ ಬರೆದಿರುವ ಸೋಮಶೇಖರ್ ಈ ಹಿಂದೆ ನಾನು ಯಾವುದೇ ಆಮಿಷ ಅಥವಾ ಅಪೇಕ್ಷೆ ಇಲ್ಲದೆ ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ ನೀಡಿ ಬಿಜೆಪಿಗೆ ಬಂದಿದ್ದೆ. ನಮ್ಮ ಸಹಕಾರದಿಂದ ನೀವು ಮುಖ್ಯಮಂತ್ರಿ ಆದಿರಿ. ನನ್ನನ್ನು ಸಚಿವರನ್ನಾಗಿ ಮಾಡಿದ್ದಕ್ಕೆ ನಿಮ್ಮ ಮೇಲೆ ಗೌರವವಿದೆ. 2023ರಲ್ಲಿ ಬಿಜೆಪಿಯಿಂದಲೇ ಸ್ಪರ್ಧಿಸಿ ಗೆದ್ದಿದ್ದೇನೆ ಎಂದು ಹೇಳಿದ್ದಾರೆ.

ನನ್ನ ಕ್ಷೇತ್ರದಲ್ಲಿ ಸಮಸ್ಯೆ ಬಂದಾಗ ನನ್ನ ಮಗ ರಾಜ್ಯಾಧ್ಯಕ್ಷನಾಗುತ್ತಾನೆ, ಎಲ್ಲವನ್ನ ಸರಿಪಡಿಸುತ್ತಾನೆ, ಪಕ್ಷ ಬಿಡಬೇಡಿ ಎಂದು ನೀವೇ ಹೇಳಿದ್ದೀರಿ. ಆದರೆ ಪಕ್ಷದಿಂದ ಉಚ್ಚಾಟನೆ ಮಾಡಿದ್ದರೂ ವಾಪಸ್ ತೆಗೆದುಕೊಳ್ಳಲಿಲ್ಲ. ಇದರಿಂದ ತುಂಬಾ ನೋವಾಗಿದೆ ಎಂದರು.

ಹಾಲಿನ ಬೆಲೆ ಏರಿಕೆಯ ಸುಳಿವು

ಎಲೆಕ್ಟ್ರಿಕ್ ಹಾಗೂ ಸೋಲಾರ್‌ಶಕ್ತಿಯ ಬಾಯ್ಲರ್‌ಗಳನ್ನು ಬಳಸುತ್ತಿಲ್ಲ. ಒಂದು ವೇಳೆ ಪರ್ಯಾಯ ಬಾಯ್ಲರ್‌ಗಳನ್ನು ಉಪಯೋಗಿಸಬೇಕಾದರೆ ಬದಲಾವಣೆ ಮಾಡಿಕೊಳ್ಳಬೇಕು. ಅದಕ್ಕೆ ಟೆಂಡರ್ ಕರೆಯುವುದು ಸೇರಿದಂತೆ ಮತ್ತಿತರ ಕಾರಣಗಳಿಗಾಗಿ ವಿಳಂಬವಾಗಲಿದೆ. ಸೋಲಾರ್ ಬಳಸಲು ಸಾಧ್ಯವಿಲ್ಲ. ನಾವು ಬಾಯ್ಲರ್‌ಗಳ ಮೂಲಕ ಹಬೆ ಸೃಷ್ಟಿಸುತ್ತೇವೆ. ನಮ್ಮಲ್ಲಿ ಯಾರೂ ಎಲೆಕ್ಟ್ರಿಕ್ ಬಾಯ್ಲರ್ ಬಳಸುತ್ತಿಲ್ಲ. ಫರ್ನೆಸ್ ಆಯಿಲ್, ಸೌದೆ ಒಲೆ ಅಥವಾ ಗ್ಯಾಸ್ ಬಳಸಲಾಗುತ್ತಿದೆ. ನಾನು ಅಧಿಕಾರಕ್ಕೆ ಬಂದ ಬಳಿಕ ಡೈರಿಯ ಒಂದು ಭಾಗದಲ್ಲಿ ಸೌದೆ ಒಲೆ ಬಳಸುವ ಅವಕಾಶವಿದ್ದು, ಬಾಯ್ಲರ್ ಗಳನ್ನು ಅದಕ್ಕೆ ಪರಿವರ್ತಿಸಬೇಕು. ಇದು ಒಂದೆರಡು ದಿನಗಳಲ್ಲಿ ಆಗುವ ಪ್ರಕ್ರಿಯೆ ಅಲ್ಲ. ಈ ಮುನ್ನ ಫರ್ನೆಸ್ ಆಯಿಲ್, ಗ್ಯಾಸ್ ಬೆಲೆ ಕಡಿಮೆ ಇತ್ತು, ಈಗ ಬೆಲೆ ಹೆಚ್ಚಾಗಿರುವುದರಿಂದ ಸ್ಥಳೀಯವಾಗಿ ಸೌದೆ ಒಲೆಯನ್ನು ಒಂದು ಪ್ಲಾಂಟ್ ನಲ್ಲಿ ಅಳವಡಿಸಿಕೊಂಡಿದ್ದೇವೆ. ಉಳಿದ ಎರಡು ಮೂರು ಪ್ಲಾಂಟ್ ಗಳಲ್ಲಿ ಮಾಡಬೇಕು. ಬೆಂಗಳೂರಿನಲ್ಲಿ ಸೌದೆ ಒಲೆ ಬಳಸಲು ಆಗುವುದಿಲ್ಲ ಮಾಲೀನ್ಯ ಸಮಸ್ಯೆ ಬರುತ್ತದೆ ಎಂದರು. ನೀವು ಕೆಎಂಎಫ್ ಅಧ್ಯಕ್ಷ ಸ್ಥಾನದ ಪ್ರಬಲ ಆಕಾಂಕ್ಷಿಯಾಗಿದ್ದು, ಈ ಚುನಾವಣೆ ವಿಳಂಬವಾಗುತ್ತಿರುವ ಬಗ್ಗೆ ಕೇಳಿದಾಗ, ನನಗೆ ಈ ಬಾಗ್ಗೆ ಮಾಹಿತಿ ಇಲ್ಲ ನಾನು ಪ್ರಬಲ ಆಕಾಂಕ್ಷಿ ಎಂದು ಯಾವಾಗ ಹೇಳಿದ್ದೇನೆ? ನಾನು ಕೆಎಂಎಫ್ ಅಧ್ಯಕ್ಷನಾಗುತ್ತೇನೆ ಎಂದು ಹೇಳಿಲ್ಲವಲ್ಲ. ನನ್ನ ಪರವಾಗಿ ಬೇಡಿಕೆ ಇಡುತ್ತಿರುವವರು ನನಗೆ ಕಾಣಿಸುತ್ತಿಲ್ಲ ಎಂದರು.

ಹಾರ್ಮುಜ್ ತೆರೆಯದಿದ್ದರೂ ಯುದ್ಧ ಕೊನೆಗೊಳ್ಳಬೇಕು...!

ಅಧಿಕಾರಿಗಳು ಪತ್ರಿಕೆಗೆ ತಿಳಿಸಿದ್ದಾರೆ. ಒಂದು ವೇಳೆ ಟ್ರಂಪ್ ಈ ಕ್ರಮವನ್ನು ಕೈಗೊಂಡರೆ, ಇರಾನ್ ಜಲಮಾರ್ಗದ ಮೇಲೆ ಹಿಡಿತ ಬಿಗಿಗೊಳಿಸುವ ಸಾಧ್ಯತೆಯಿದೆ, ಏಕೆಂದರೆ ಅದರ ದಿಗ್ಬಂಧನವು ಜಾಗತಿಕ ಇಂಧನ ಬೆಲೆಗಳನ್ನು ಹೆಚ್ಚಿಸಿದೆ. ಅದಾಗ್ಯೂ, ಜಲಸಂಧಿಯನ್ನು ಮತ್ತೆ ತೆರೆಯಲು ಕಾರ್ಯಾಚರಣೆಯನ್ನು ಪ್ರಾರಂಭಿಸುವ ನಿರ್ಧಾರವನ್ನು ಟ್ರಂಪ್ ನಂತರ ತೆಗೆದುಕೊಳ್ಳಬಹುದು, ಆದರೆ ಅದು ಅವರಿಗೆ ತಕ್ಷಣದ ಆದ್ಯತೆಯಲ್ಲ ಎಂದು ವರದಿ ಹೇಳಿದೆ.

ಆದಾಗ್ಯೂ, ಯುದ್ಧವನ್ನು ತ್ವರಿತವಾಗಿ ಕೊನೆಗೊಳಿಸುವ ಟ್ರಂಪ್‌ರ ಒತ್ತಡವು ಮಧ್ಯಪ್ರಾಚ್ಯದಲ್ಲಿ ಅಮೆರಿಕದ ಪ್ರಮುಖ ಮಿಲಿಟರಿ ರಚನೆಗೆ ವಿರುದ್ಧವಾಗಿದೆ. ವಾರಾಂತ್ಯದಲ್ಲಿ, ಯುಎಸ್‌ಎಸ್ ಟ್ರಿಪೋಲಿ ಮತ್ತು 2,500 ಕ್ಕೂ ಹೆಚ್ಚು ನೌಕಾಪಡೆಗಳನ್ನು ಅಲ್ಲಿ ನಿಯೋಜಿಸಲಾಗಿತ್ತು. ಟ್ರಂಪ್ ಇನ್ನೂ 10,000 ನೆಲದ ಪಡೆಗಳನ್ನು ಕಳುಹಿಸುವುದರ ಜೊತೆಗೆ ಇರಾನ್‌ನ ಯುರೇನಿಯಂ ಅನ್ನು ವಶಪಡಿಸಿಕೊಳ್ಳಲು ಸಂಕೀರ್ಣ ಕಾರ್ಯಾಚರಣೆಯನ್ನು ಸಹ ಪರಿಗಣಿಸುತ್ತಿದ್ದಾರೆ ಎಂದು ವರದಿಯಾಗಿತ್ತು.

ಪ್ರಮುಖ ಉದ್ದೇಶಗಳ ಮೇಲೆ ಕೇಂದ್ರೀಕರಿಸಿ ಇತ್ತೀಚಿನ ದಿನಗಳಲ್ಲಿ, ಟ್ರಂಪ್ ಮತ್ತು ಅವರ ಸಹಾಯಕರು ಚೆಕ್‌ಪಾಯಿಂಟ್ ಅನ್ನು ತೆರೆಯುವುದರಿಂದ ಸಂಘರ್ಷವು ಅವರ ನಾಲ್ಕರಿಂದ ಆರು ವಾರಗಳ ಕಾಲಾವಧಿಯನ್ನು ಮೀರಿ ವಿಸ್ತರಿಸುತ್ತದೆ ಎಂದು ಅಂದಾಜಿಸಿದ್ದಾರೆ ಎಂದು ವರದಿ ತಿಳಿಸಿದೆ.

ಬದಲಾಗಿ, ಟ್ರಂಪ್ ಅಮೆರಿಕ ತನ್ನ ಅಂತಿಮ ಆಟದ ಮೇಲೆ ಗಮನಹರಿಸಬೇಕು ಎಂದು ನಿರ್ಧರಿಸಿದ್ದಾರೆ – ಇರಾನ್‌ನ ನೌಕಾಪಡೆ ಮತ್ತು ಕ್ಷಿಪಣಿ ದಾಸ್ತಾನುಗಳನ್ನು ದುರ್ಬಲಗೊಳಿಸುವುದು, ನಂತರ ವ್ಯಾಪಾರ ಹರಿವನ್ನು ಪುನಃಸ್ಥಾಪಿಸಲು ಟೆಹ್ರಾನ್ ಮೇಲೆ ರಾಜತಾಂತ್ರಿಕವಾಗಿ ಒತ್ತಡ ಹೇರುವಾಗ ಯುದ್ಧವನ್ನು ಕಡಿಮೆ ಮಾಡುವುದು. ಅದು ವಿಫಲವಾದರೆ, ಯುರೋಪ್ ಮತ್ತು ಕೊಲ್ಲಿಯಲ್ಲಿರುವ ಮಿತ್ರರಾಷ್ಟ್ರಗಳು ಜಲಸಂಧಿಯನ್ನು ಮತ್ತೆ ತೆರೆಯುವಲ್ಲಿ ಮುಂದಾಳತ್ವ ವಹಿಸುವಂತೆ ವಾಷಿಂಗ್ಟನ್ ಒತ್ತಾಯಿಸುತ್ತದೆ ಎಂದು ಅಧಿಕಾರಿಗಳು ತಿಳಿಸಿದರು.

ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಬಿರುಸಿನ ಪ್ರಚಾರ



ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್‌ದಾಸ್ ಕರಿಯಪ್ಪ ಪರ ವಿಜಯೇಂದ್ರ ಮತಯಾಚಿಸಿದರು.

ಮೈಸೂರು,ಮಾ.31–ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಕಣದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಬಿರುಸಿನ ಪ್ರಚಾರ ನಡೆಸಿದರು.

ಈ ವೇಳೆ ಶ್ರೀ ಅಂಬಾ ಭವಾನಿ ಕಲ್ಯಾಣ ಮಂಟಪದಲ್ಲಿ ನಡೆದ ಹಿಂದುಳಿದ ವರ್ಗ ಹಾಗೂ ವಿವಿಧ ಸಮುದಾಯಗಳ ಪ್ರಮುಖರ ಸಭೆಯಲ್ಲಿ ಭಾಗವಹಿಸಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಓಬಿಸಿ ಸಮುದಾಯಕ್ಕೆ ನೀಡಲಾಗಿರುವ ಸೌಲಭ್ಯಗಳು ಹಾಗೂ ರಾಜ್ಯದಲ್ಲಿ ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿಯವರು ಶೋಷಿತ ವರ್ಗಗಳಿಗೆ ನೀಡಿದ ಯೋಜನೆಗಳ ಬಗ್ಗೆ ತಿಳಿಸುವ ಮೂಲಕ ಪಕ್ಷದ ಅಭ್ಯರ್ಥಿ ಶ್ರೀನಿವಾಸ್‌ದಾಸ್ ಕರಿಯಪ್ಪ ಅವರಿಗೆ ಮತ ನೀಡುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಬಿಜೆಪಿ ಓಬಿಸಿ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಮಾತನಾಡಿ, ಅಹಿಂದ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಪಕ್ಷ ಹಿಂದುಳಿದ ವರ್ಗಗಳಿಗೆ, ದಲಿತರಿಗೆ ಮಾಡಿರುವ ಅನ್ಯಾಯವನ್ನು ಜನ ಮರೆಯುವುದಿಲ್ಲ. ಆಡಳಿತ ವೈಫಲ್ಯದಿಂದ ಜನ ರೋಸಿ ಹೋಗಿದ್ದಾರೆ. ಈ ಉಪಚುನಾವಣೆ ರಾಜ್ಯದಲ್ಲಿ ಹೊಸ ಬಿಜೆಪಿ ಸರ್ಕಾರಕ್ಕೆ ಮುನ್ನುಡಿ ಬರೆಯಲಿದೆ ಎಂಬ ಭರವಸೆ ವ್ಯಕ್ತಪಡಿಸಿದರು.

ಮತಯಾಚನೆ ಸಂದರ್ಭದಲ್ಲಿ ಮಾಜಿ ಸಂಸದ ಜಿ.ಎಂ.ಸಿದ್ದೇಶ್ವರ, ಬಿಜೆಪಿ ಓಬಿಸಿ ರಾಜ್ಯ ಕಾರ್ಯಕಾರಣಿ ಸದಸ್ಯ ಮೈ.ನಾ.ಲೋಕೇಶ್, ಮುಖಂಡರಾದ ಎರ್ರಿಸ್ವಾಮಿ, ಮಂಜುನಾಥ, ರವಿ ಶಂಕರ್, ಪಕ್ಷದ ನೂರಾರು ಕಾರ್ಯಕರ್ತರು, ಪದಾಧಿಕಾರಿಗಳು ಉಪಸ್ಥಿತರಿದ್ದರು.

ಹೂಡಿಕೆ ಜಾಹೀರಾತಿಗೆ ಮರುಳಾಗಿ 19.65 ಲಕ್ಷ ಕಳೆದುಕೊಂಡ ಹಿರಿಯ ನಾಗರಿಕ



ಮೈಸೂರು, ಮಾ.31(ಜಿಎ)– ಗೂಗಲ್‌ನಲ್ಲಿ ಹೂಡಿಕೆ ಜಾಹೀರಾತು ನಂಬಿ ನಿವೃತ್ತ ಹಿರಿಯ ನಾಗರಿಕರೊಬ್ಬರು 19.65 ಲಕ್ಷ ರೂ. ಕಳೆದುಕೊಂಡಿದ್ದು, ಈ ಸಂಬಂಧ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯಾದವಗಿರಿ ನಿವಾಸಿ ಹಿರಿಯ ನಾಗರಿಕರೊಬ್ಬರು ವಂಚನೆಗೆ ಒಳಗಾದವರು. 2025ರ ಡಿ.17ರಂದು ಗೂಗಲ್‌ನಲ್ಲಿ ಹೂಡಿಕೆ ಜಾಹೀರಾತು ನೋಡಿ ಅರ್ಜಿ ಭರ್ತಿ ಮಾಡಿದ ಬಳಿಕ ಅವರಿಗೆ ಜಸ್ಪ್ರೀತ್ ಎಂಬ ವ್ಯಕ್ತಿ ಕರೆ ಮಾಡಿ ಮನಿ ಪ್ರಾಕ್ಸಿ ಬಗ್ಗೆ ಕಂಪನಿ ಬಗ್ಗೆ ಮಾಹಿತಿ ನೀಡಿದ. ಅದೇ ದಿನ ಯುಪಿಐ ಮೂಲಕ 19,887.18 ರೂ. ಹಣ ಹೂಡಿಕೆ ಮಾಡಿಸಿಕೊಂಡು ಕಂಪನಿಯಿಂದ ಕರೆ ಮಾಡುತ್ತಾರೆ ಎಂದು ತಿಳಿಸಿದ್ದು, ನಂತರ ಕಂಪನಿಯ ಸಲಹೆಗಾರನೆಂದು ಸುಮನ್ ರೈ ಎಂಬ ವ್ಯಕ್ತಿ ವಾಟ್ಸಪ್ ಕರೆ ಮಾಡಿ ಚಿನ್ನ, ಬೆಳ್ಳಿ, ಕ್ರೂಡ್ ಆಯಿಲ್‌ನ ಇಂಟರ್ ನ್ಯಾಷನಲ್ ಮಾರುಕಟ್ಟೆಯಲ್ಲಿ ಕಂಪನಿ ಇನ್ವೆಸ್ಟ್ ಮಾಡಿದೆ ಎಂದು ತಿಳಿಸಿ, ಮನಿ ಪ್ರಾಕ್ಸಿ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳುವಂತೆ ಹೇಳಿ ಟ್ರೇಡಿಂಗ್ ಖಾತೆ ತೆರೆಸಿದ್ದಾರೆ.

ಚಿನ್ನದ ಬೆಲೆ ಏರಿಕೆ ಆಗುತ್ತಿರುವುದರಿಂದ ಕಂಪನಿಯೂ ಸಮ ಹಣವನ್ನು ಹೂಡಿಕೆ ಮಾಡುವುದಾಗಿ ತಿಳಿಸಿದ್ದು, ಹಿರಿಯ ನಾಗರಿಕರ ಮನವೊಲಿಸಿ ಕ್ರೆಡಿಟ್ ಕಾರ್ಡ್ ಮೂಲಕ 7,45,561.70 ರೂ. ಹಣವನ್ನು ಹೂಡಿಕೆ ಮಾಡಿಸಿದ್ದಾರೆ. ನಂತರ 2026ರ ಜ.14 ರಂದು ಪ್ರತ್ಯೇಕ ಬ್ಯಾಂಕ್ ಖಾತೆಗೆ ತಲಾ 5 ಲಕ್ಷ ರೂ ಹಣವನ್ನು ಹಾಕಿಸಿಕೊಂಡಿದ್ದಾರೆ. ಈ ವೇಳೆ ಹಿರಿಯ ನಾಗರಿಕರು ಲಾಭಾಂಶದ ಹಣವನ್ನು ಖಾತೆಗೆ ವರ್ಗಾವಣೆ ಮಾಡುವಂತೆ ತಿಳಿಸುತ್ತಿದ್ದಂತೆ ಒಂದು ಇ-ಮೇಲ್ ಐಡಿ ಕಳುಹಿಸಿ ಕೆವೈಸಿ ಅಪ್ ಡೇಟ್ ಮಾಡುವಂತೆ ಹೇಳಿದ್ದಾರೆ. ಆದರೆ, ಕೆವೈಸಿ ಆಗದ ಕಾರಣ ಟೆಲಿಗ್ರಾಂ ಮೂಲಕ ಕ್ಯೂಆರ್ ಕೋಡ್ ಕಳುಹಿಸಿ ಅದಕ್ಕೆ ಸೇರಿಸಿ, ಚಿನ್ನ, ಬೆಳ್ಳಿ, ಕ್ರೂಡ್ ಆಯಿಲ್ ಮಾರುಕಟ್ಟೆಯಲ್ಲಿ ಕುಸಿದಿದ್ದು, ಹೂಡಿಕೆ ಹಣ ಮತ್ತು ಲಾಭಾಂಶದ ಹಿಂತೆಗೆತವನ್ನು ನಿಲ್ಲಿಸಿದ್ದೇವೆ ಎಂದು ತಿಳಿಸಿದ್ದಾರೆ.

ಫೆ.9ರಂದು ಮತ್ತೊಂದು ನಂಬರ್‌ನಿಂದ ಕರೆ ಮಾಡಿ ನೀವು ಕಳೆದುಕೊಂಡಿರುವ ಲಾಭಾಂಶವನ್ನು ಮತ್ತೆ ಪಡೆಯಬಹುದು ಎಂದು ಹೇಳಿ ಮತ್ತೆ 2 ಲಕ್ಷ ಹಣವನ್ನು ಮತ್ತೊಂದು ಬ್ಯಾಂಕ್ ಖಾತೆಗೆ ಹಾಕಿಸಿದ್ದಾರೆ. ನಂತರ ಅವರು ತಮ್ಮ ಟ್ರೇಡಿಂಗ್ ಖಾತೆ ಪರಿಶೀಲಿಸಿದ್ದಾಗ ಹೂಡಿಕೆ ಹಣ ಮತ್ತು ಲಾಭಾಂಶ ಹಣವು ತೋರಿಸದ ಕಾರಣ ನಂತರ ಬಂದ ಯಾವುದೇ ಕರೆಗಳನ್ನು ಅವರು ಸ್ವೀಕರಿಸಲಿಲ್ಲ. ಮಾ.19ರಂದು ವಿಮಾ ವಿಭಾಗದಿಂದ ನೀರಜ್ ಮೆನನ್ ಎಂಬ ವ್ಯಕ್ತಿ ಕರೆ ಮಾಡಿ ನೀವು ವಿಮೆ ಕ್ಲೈಮ್ ಮಾಡಿದ್ದರೆ ಹೂಡಿಕೆ ಮತ್ತು ಲಾಭಾಂಶದ ಹಣ ಬರಲಿದೆ ಅದಕ್ಕೆ ನೀವು ಶೇ.23ರಷ್ಟು ಹಣ ಹೂಡಿಕೆ ಮಾಡಿ ಎಂದಾಗ ಹಿರಿಯ ನಾಗರಿಕರಿಗೆ ಅನುಮಾನ ಬಂದು ತಕ್ಷಣ ಸೈಬರ್ ಕ್ರೈಂ ಸಹಾಯವಾಣಿ 1930 ಕರೆ ಮಾಡಿ ದೂರು ಸಲ್ಲಿಸಿದ್ದಾರೆ. ಸೆನ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಅಚ್ಛೇದಿನ ನೀಡುತ್ತೇವೆಂದ ಎನ್‌ಡಿಎ ಸರ್ಕಾರ ಈಗ ಕಚ್ಚಾದಿನ ನೀಡಿದೆ!

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವ್ಯಂಗ್ಯ

"ಪ್ರಧಾನಿ ನರೇಂದ್ರ ಮೋದಿ ಸರ್ಕಾರ ಪ್ರತಿನಿತ್ಯ ಜನರ ಜೇಬಿನಿಂದ ಹಣ ಪಿಕ್‌ಪಾಕೆಟ್ ಮಾಡುತ್ತಿದೆ. ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ 900 ಕೋಟಿ ರೂ. ವಸೂಲಿ ಮಾಡಲಾಗಿದೆ. ಈ ಹಣ ರಾಜ್ಯಕ್ಕೆ ನೀಡಿದರೆ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಮಾಡಬಹುದಾಗಿದೆ. –ಡಿ.ಕೆ.ಶಿವಕುಮಾರ್



ಬೆಂಗಳೂರು, ಮಾ. 31(ಕೆಎಂಶಿ)– ಕೇಂದ್ರದಲ್ಲಿನ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಜನರಿಗೆ ಉಜ್ವಲ ಯೋಜನೆ ಬದಲಿಗೆ ಸೌದೆ ಒಲೆ ಯೋಜನೆ ನೀಡಿದೆ. ಅಚ್ಛೇದಿನ ಏನಾಯ್ತು. ಈಗ ಇರುವುದು ಕಚ್ಚಾದಿನವೇ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಟೀಕಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಂಚರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆ ನಡೆಯುತ್ತಿದೆ. ಜನತೆ, ಹೋಟೇಲ್‌ಗಳು ಅಡುಗೆ ಅನಿಲ ಇಲ್ಲದೆ ವಿದ್ಯುತ್, ಸೌದೆ ಒಲೆ ಬಳಸುವ ಅನಿವಾರ್ಯತೆಗೆ ಸಿಲುಕಿದ್ದಾರೆ ಎಂದರು.

ಕಳೆದ 15 ದಿನಗಳಿಂದ ಕರ್ನಾಟಕದಲ್ಲಿ ವಿದ್ಯುತ್ ಬಳಕೆ ಪ್ರಮಾಣ ಶೇಕಡ 10ರಷ್ಟು ಏರಿಕೆಯಾಗಿದೆ. ಕೇಂದ್ರ ಸರ್ಕಾರ ಜನರಿಗೆ ಸೌದೆ ಭಾಗ್ಯ ನೀಡಿದ್ದು, ಸೌದೆ ಎಲ್ಲಿಂದ ಒದಗಿಸುವುದು. ಹಳ್ಳಿಗಳಲ್ಲಿ ಸೌದೆ ಬಳಕೆ ಹೆಚ್ಚಾದರೆ ಅಭಾವ ಎದುರಾಗಲಿದೆ. ಅಡುಗೆ ಅನಿಲ ಸಿಲಿಂಡರ್‌ಗಳ ಕಾಳಸಂತೆ ಮಾರಾಟ ನಡೆಯುತ್ತಿದ್ದು ಗೃಹಬಳಕೆ ಅಡುಗೆ ಅನಿಲ ಸಿಲಿಂಡರ್ 2,000 ರೂ.ವರೆಗೆ, ಕಮರ್ಷಿಯಲ್ ಸಿಲಿಂಡರ್ 4,000 ರೂ.ವರೆಗೆ ಹೆಚ್ಚಿದೆ. ಯುದ್ಧಗಳ ನೆಪ, ಕೇಂದ್ರ ಸರ್ಕಾರದ ತಪ್ಪು ನಿರ್ಧಾರ– ನೀತಿಯಿಂದಾಗಿ ದೇಶದ ಜನ ಬೆಲೆ ಏರಿಕೆಯಿಂದ ನರಳುತ್ತಿದ್ದಾರೆ. ಅಡುಗೆ ಅನಿಲ ಸಿಲಿಂಡರ್ ಬೆಲೆ ಏರಿಕೆ ಮಾತ್ರವಲ್ಲ, ಟೋಲ್ ಶುಲ್ಕ, ರೈಲ್ವೆ ಟಿಕೆಟ್ ದರ ಎಲ್ಲವೂ ಹೆಚ್ಚಾಗಿದೆ.

ಜಿಎಸ್‌ಟಿ ಶೇಕಡ 12ರಷ್ಟು ವಿಧಿಸಲಾಗಿದೆ. 900 ಔಷಧಗಳ ದರ, ಸಿಮೆಂಟ್, ಕಬ್ಬಿಣ, ಪ್ಲಾಸ್ಟಿಕ್ ಪೈಪ್ ಸೇರಿದಂತೆ ಹಲವು ವಸ್ತುಗಳ ಬೆಲೆ ಹೆಚ್ಚಳವಾಗಿದೆ. ಅಲ್ಲದೆ, ವಿಮಾನ ಪ್ರಯಾಣ ದರ ಶೇ.18 ರಷ್ಟು ಏರಿಕೆ ಮಾಡಲಾಗಿದೆ. ಪೋಸ್ಟಲ್ ಹಾಗೂ ಪಾರ್ಸಲ್ ದರ ಶೇ.34 ಹೆಚ್ಚಳ ಮಾಡಲಾಗಿದೆ. ಅಚ್ಛೇದಿನ ಏನಾಯಿತು. ನಮ್ಮ ಗ್ಯಾರಂಟಿಯಿಂದ ಜನತೆ ಸ್ವಲ್ಪ ಉಸಿರಾಡುತ್ತಿದ್ದಾರೆ. ಗ್ಯಾರಂಟಿಯಂತೆ ಕೇಂದ್ರ ಸರ್ಕಾರ ಪರ್ಯಾಯ ವ್ಯವಸ್ಥೆ ಮಾಡಬೇಕು. ಜನರಿಗೆ ಕೇಂದ್ರ ಸರ್ಕಾರ ನೆರವಾಗಬೇಕು ಎಂದು ಆಗ್ರಹಿಸುತ್ತೇವೆ.

ಕೆಲವು ಅನಿವಾರ್ಯ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಸರ್ಕಾರ ಬೆಲೆ ಏರಿಕೆ ತೀರ್ಮಾನ ಮಾಡಿದಾಗ ಟೀಕೆ–ಟಿಪ್ಪಣಿ ಬಂದಿವೆ. ಈಗ ಸಾಮಾನ್ಯ ಜನರ ಮೇಲೆ ಕೇಂದ್ರ ಸರ್ಕಾರ ಬೆಲೆ ಏರಿಕೆ ಯುದ್ಧ ಮಾಡುತ್ತಿದೆ.

ಕೇಂದ್ರ ಸರ್ಕಾರ ಜನರನ್ನ ಮೂರ್ಖರನ್ನಾಗಿಸುತ್ತಿದೆ. ಬೆಲೆ ಏರಿಕೆಯಿಂದ ಎದುರಾದ ಆರ್ಥಿಕ ದುಃಸ್ಥಿತಿ ಸುಧಾರಿಸಲು ರಾಜ್ಯ ಸರ್ಕಾರದ 5 ಗ್ಯಾರಂಟಿ ಯೋಜನೆ ಶಕ್ತಿ ತುಂಬಿದೆ. ಆರ್ಥಿಕ ರಕ್ಷಣೆ ನೀಡಿವೆ ಎಂದರು.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಶಿಬಿರ



ಶ್ರೀರೂಪ



ಬಿ.ಎನ್.ವೀಣಾ

ಮೈಸೂರು,ಮಾ.31–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಐ.ಎ.ಎಸ್ ಮತ್ತು ಕೆ.ಎ.ಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 50 ದಿನಗಳ ತರಬೇತಿ ಶಿಬಿರದ ಸಮಾರೋಪ ಸಮಾರಂಭವನ್ನು ಏಪ್ರಿಲ್ 2 ರಂದು ಬೆಳಗ್ಗೆ 11 ಗಂಟೆಗೆ ಕರಾಮುವಿಯ ಕಾವೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ರಾಜ್ಯದ ವಿವಿಧ ಜಿಲ್ಲೆಗಳಿಂದ 233 ಅಭ್ಯರ್ಥಿಗಳು ತರಬೇತಿ ಪಡೆಯುತ್ತಿದ್ದಾರೆ. ಈ ತರಬೇತಿ ಶಿಬಿರಾರ್ಥಿಗಳಿಗೆ ಶುಭಹಾರೈಕೆಯನ್ನು ಚಾಮರಾಜನಗರ ಜಿಲ್ಲಾಧಿಕಾರಿ ಶ್ರೀರೂಪ ನೆರವೇರಿಸುವರು. 'ಮುಕ್ತಭಂಡಾರ' ಅಧ್ಯಯನ ಪುಸ್ತಕವನ್ನು ಮೈಸೂರು ಮಹಾನಗರ ಪಾಲಿಕೆಯ ಹೆಚ್ಚುವರಿ ಆಯುಕ್ತೆ ಬಿ.ಎನ್. ವೀಣಾ ಅವರು ಬಿಡುಗಡೆ ಮಾಡಿ ಶುಭ ಹಾರೈಸುವರು. ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ಅಧ್ಯಕ್ಷತೆ ವಹಿಸುವರು. ಕುಲಸಚಿವ ಪ್ರೊ.ಎಸ್.ಕೆ ನವೀನ್ ಕುಮಾರ್ ಉಪಸ್ಥಿತರಿರುವರು ಎಂದು ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ ತಿಳಿಸಿದ್ದಾರೆ.

ನಂಜುಂಡೇಶ್ವರ ರಥೋತ್ಸವ: ಮಜ್ಜಿಗೆ, ಪಾನಕ ವಿತರಣೆ



ಮೈಸೂರಿನ ವಿದ್ಯಾರಣ್ಯಪುರಂನ ಕಂಸಾಳೆ ಮಹದೇವಯ್ಯ ವೃತ್ತದಲ್ಲಿ ನಂಜನಗೂಡು ನಂಜುಂಡೇಶ್ವರ ಮಹಾ ರಥೋತ್ಸವದ ಹಿನ್ನೆಲೆಯಲ್ಲಿ ವಿದ್ಯಾರಣ್ಯ ಸೇವಾ ಸಮಿತಿ ವತಿಯಿಂದ ಸಾರ್ವಜನಿಕರಿಗೆ ಮಜ್ಜಿಗೆ ಪಾನಕ ವಿತರಿಸಲಾಯಿತು. ಈ ವೇಳೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ವಿನಯ್ ಕುಮಾರ್, ಪ್ರತಾಪ್‌ರಾವ್, ಗೃಹಶೋಭೆ ಕೃಷ್ಣ, ನವೀನ್ ಮತ್ತಿತರರು ಉಪಸ್ಥಿತರಿದ್ದರು.

ಶಾಸಕರಿಂದ ಹೊಲಿಗೆ ಯಂತ್ರ ವಿತರಣೆ...



ಮೈಸೂರು ವಲಯ ಕಚೇರಿ 2ರಲ್ಲಿ ಮೈಸೂರು ಮಹಾನಗರಪಾಲಿಕೆಯಿಂದ ನೀಡುವ ಹೊಲಿಗೆ ಯಂತ್ರಗಳನ್ನು ಸುಮಾರು 132 ಮಂದಿ ಮಹಿಳಾ ಫಲಾನುಭವಿಗಳಿಗೆ ಶಾಸಕ ಟಿ.ಎಸ್.ಶ್ರೀವತ್ಸ ವಿತರಿಸಿದರು. ಈ ಸಂದರ್ಭದಲ್ಲಿ ನಗರಪಾಲಿಕೆ ವಲಯ ಕಚೇರಿ–2ರ ಉಪ ಆಯುಕ್ತ ಗಿರೀಶ್, ಮುಖಂಡ ವಿಶ್ವೇಶ್ವರಯ್ಯ, ಪಾಲಿಕೆ ಅಧಿಕಾರಿಗಳು ಉಪಸ್ಥಿತರಿದ್ದರು.

ಎಸ್‌ಸಿ–ಎಸ್‌ಟಿ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

ಮೈಸೂರು, ಮಾ.31–ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಕಾರ್ಯಕ್ರಮದ ಅಂಗವಾಗಿ ಮೈಸೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಡುವ ವಿಭಾಗಗಳು ಮತ್ತು ಕಾಲೇಜುಗಳಲ್ಲಿ 2025–2026ನೇ ಸಾಲಿನಲ್ಲಿ ಪಿಹೆಚ್.ಡಿ, ಸ್ನಾತಕ–ಸ್ನಾತಕೋತ್ತರ ಪದವಿಗಳಲ್ಲಿ ಪ್ರಥಮ ರ್‍ಯಾಂಕ್ ಪಡೆದ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳನ್ನು ಸನ್ಮಾನಿಸಲು ಏ.14ರಂದು ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ. 2025–2026ನೇ ಸಾಲಿನಲ್ಲಿ ಪಿಹೆಚ್.ಡಿ, ಸ್ನಾತಕೋತ್ತರ ಪದವಿ, ಸ್ನಾತಕ ಪದವಿಗಳಲ್ಲಿ ಪ್ರಥಮ ರ್‍ಯಾಂಕ್ ಪಡೆದ ಪರಿಶಿಷ್ಟ ಜಾತಿ, ಪಂಗಡದ ವಿದ್ಯಾರ್ಥಿಗಳು ಪಿಹೆಚ್.ಡಿ ಅಧಿಸೂಚನೆ, ಸ್ನಾತಕ ಅಥವಾ ಸ್ನಾತಕೋತ್ತರ ಪದವಿಯ ರ್‍ಯಾಂಕ್ ಪ್ರಮಾಣಪತ್ರ ಹಾಗೂ ಜಾತಿ ಪ್ರಮಾಣವನ್ನು ಏ.13ರೊಳಗೆ ಮೈಸೂರು ವಿವಿ ಉಪಕುಲ ಸಚಿವರ ಕಚೇರಿ, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ವಿಶೇಷ ಘಟಕ, ಮಹಾರಾಜ ಕಾಲೇಜು ಶತಮಾನೋತ್ಸವ ಭವನ ಇಲ್ಲಿಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು ಎಂದು ಮೈಸೂರು ವಿಶ್ವ ವಿದ್ಯಾನಿಲಯದ ಉಪಕುಲ ಸಚಿವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏ.10ರಿಂದ ಬೇಸಿಗೆ ಮೇಳ

ಮೈಸೂರು: ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ವತಿಯಿಂದ ಏ. 10ರಿಂದ ಮೇ 31ರವರೆಗೆ (52 ದಿನಗಳ ಕಾಲ) ಬೇಸಿಗೆ ಮೇಳವನ್ನು ಆಯೋಜಿಸಲಾಗುತ್ತಿದೆ. ಮೇಳದಲ್ಲಿ ಸಣ್ಣ ಮನೋರಂಜನೆ, ತಿಂಡಿ–ತಿನಿಸುಗಳ ಅಂಗಡಿಗಳು, ಕರಕುಶಲಗಳ ಮಾರಾಟಕ್ಕೆ ಮಳಿಗೆಗಳು ಬಾಡಿಗೆಗೆ ಲಭ್ಯವಿರುತ್ತದೆ. ಆಸಕ್ತರು ಅರ್ಜಿಯನ್ನು ಪಡೆದು ಏ.6ರೊಳಗೆ ಪ್ರಾಧಿಕಾರದ ಕಚೇರಿಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಪ್ರಾಧಿಕಾರದ ಕಚೇರಿಯನ್ನು ಅಥವಾ ಕಚೇರಿ ಸಿಬ್ಬಂದಿ ಮೊ: 8892855236 ಹಾಗೂ ಇಮೇಲ್: exhibitionauthority@gmail.com ಸಂಪರ್ಕಿಸುವುದು.

ಇಂದು ಹಲವೆಡೆ ವಿದ್ಯುತ್ ವ್ಯತ್ಯಯ



ಮೈಸೂರು: ರಾಮಕೃಷ್ಣನಗರ ಉಪ ವಿಭಾಗದ 66/11 ಕೆ.ವಿ.ಆರ್.ಕೆ ನಗರ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಹೊಮ್ಮುವ 11 ಕೆ.ವಿ ಪರಮಹಂಸ ವಿದ್ಯುತ್ ಮಾರ್ಗದ ನಿರ್ವಹಣಾ ಕೆಲಸದ ನಿಮಿತ್ತ ಏ.1ರಂದು ಬೆಳಗ್ಗೆ 10:00 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ವಾಸು ಲೇಔಟ್, ಚರ್ಚ್ ಸುತ್ತಮುತ್ತ, ಕೆ ಬ್ಲಾಕ್, ಮಹದೇವ ಪಾರ್ಕ್ ಸುತ್ತಮುತ್ತ, ಜಯಲಕ್ಷ್ಮೀಕಾಲೇಜು ಸುತ್ತಮುತ್ತ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಏ.5, ಹೊಯ್ಸಳ ಪ್ರಶಸ್ತಿ ಪ್ರದಾನ, ಕೃತಿ ಬಿಡುಗಡೆ

ಮೈಸೂರು,ಮಾ.31–ಹೊಯ್ಸಳ ಕನ್ನಡ ಸಂಘ ಮತ್ತು ಸವಿಗನ್ನಡ ಪತ್ರಿಕಾ ಬಳಗದ ವತಿಯಿಂದ ಏ.5ರಂದು ಬೆಳಗ್ಗೆ 10.30ಕ್ಕೆ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಹಯೋಗದೊಂದಿಗೆ 2025ನೇ ಸಾಲಿನ ಹೊಯ್ಸಳ ಪ್ರಶಸ್ತಿ ಪ್ರದಾನ ಹಾಗೂ ಹಿರಿಯ ಅಂಕಣಕಾರ ಜಯಪ್ರಕಾಶ್ ಪುತ್ತೂರು ಅವರ 'ವ್ಯಕ್ತಿತ್ವ ವಿಕಸನ ವಿಚಾರಧಾರೆ' ಕೃತಿ ಲೋಕಾರ್ಪಣೆ ಸಮಾರಂಭ ಆಯೋಜಿಸಿದೆ.

ಮೇಲುಕೋಟೆ ವಂಗೀಪುರ ನಂಬೀ ಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರು, ಹಿರಿಯ ಪುಸ್ತಕ ಸಂಗ್ರಹಕಾರ ಅಂಕೇಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದು, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಕೃತಿ ಬಿಡುಗಡೆ ಮಾಡುವರು.

ಸವಿಗನ್ನಡ ಪತ್ರಿಕೆಯ 26ನೇ ವಾರ್ಷಿಕ ವಿಶೇಷಾಂಕವನ್ನು ಮಹಾಕವಿ ಡಾ. ಲತಾ ರಾಜಶೇಖರ್ ಲೋಕಾರ್ಪಣೆ ಮಾಡಲಿದ್ದು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಲಿದ್ದಾರೆ. ಡಾ.ವಿ.ಲಕ್ಷ್ಮೀನಾರಾಯಣ್, ಸಂಸ್ಕೃತಿ ವಿದುಷಿ ಡಾ.ಕೆ. ಲೀಲಾಪ್ರಕಾಶ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಇದೇ ವೇಳೆ ನಾಡು ನುಡಿಗೆ ದುಡಿದ 15 ಮಂದಿ ಸಾಧಕರಿಗೆ ರಾಜ್ಯ ಮಟ್ಟದ ಹೊಯ್ಸಳ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಅಪರ ಜಿಲ್ಲಾಧಿಕಾರಿ ಡಾ.ಪಿ. ಶಿವರಾಜು, ಸಮಾಜ ಸೇವಕ ಡಾ.ರಘುರಾಂ ರಾಜಪೇಯಿ, ಹಿರಿಯ ವೀಣಾ ವಿದ್ವಾಂಸ ಡಾ.ವಿ.ನಂಜುಂಡಸ್ವಾಮಿ, ಹಿರಿಯ ವಿಜ್ಞಾನ ಲೇಖಕ ಎಸ್. ರಾಮಪ್ರಸಾದ್, ರಂಗನಾಥ್ ಉಪಸ್ಥಿತರಿರುವರು.

ಏ.6ರಿಂದ ಬೇಸಿಗೆ ಕ್ರಿಕೆಟ್ ತರಬೇತಿ ಶಿಬಿರ

ಮೈಸೂರು, ಮಾ.31– ಮೈಸೂರಿನ ವಿವಿ ಮೊಹಲ್ಲಾ, ಕಾಳಿದಾಸ ರಸ್ತೆಯಲ್ಲಿರುವ ಮೈಸೂರು ಜಿಮ್ಖಾನಾ ಕ್ರಿಕೆಟ್ ತರಬೇತಿ ಸಂಸ್ಥೆ ವತಿಯಿಂದ 19 ವರ್ಷದೊಳಗಿನ ಯುವಕ–ಯುವತಿಯರಿಗಾಗಿ 43ನೇ ವಾರ್ಷಿಕ ಬೇಸಿಗೆ ಕ್ರಿಕೆಟ್ ತರಬೇತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ತರಬೇತಿ ಶಿಬಿರವು ಏ.6ರಿಂದ ಆರು ವಾರಗಳ ಕಾಲ, ಕೆಆರ್‌ಎಸ್ ರಸ್ತೆಯಲ್ಲಿರುವ ರೈಲ್ವೆ ಮೈದಾನ, ಮಹಾರಾಜ ಕಾಲೇಜು ಮೈದಾನ ಹಾಗೂ ಮಾನಸ ಗಂಗೋತ್ರಿಯ ಮೈದಾನಗಳಲ್ಲಿ ನಡೆಯಲಿದೆ. ಶಿಬಿರದ ಉದ್ಘಾಟನಾ ಕಾರ್ಯಕ್ರಮವು ಏ.5 ರಂದು ಬೆಳಗ್ಗೆ 8.30ಕ್ಕೆ ರೈಲ್ವೆ ಮೈದಾನದಲ್ಲಿ ನಡೆಯಲಿದೆ. ಶಿಬಿರದ ದಾಖಲಾತಿಯ ಅರ್ಜಿ ನಮೂನೆಗಳು ತರಬೇತಿ ನಡೆಯುವ ಮೈದಾನದಲ್ಲಿ ಬೆಳಗ್ಗೆ 6.30 ರಿಂದ 8.30ರವರೆಗೆ ಹಾಗೂ ಸಂಜೆ 4ರಿಂದ 6ರವರೆಗೆ ಲಭ್ಯವಿರಲಿದೆ. ಮಾಹಿತಿಗೆ ಮೊ: 9845294527, 9980107110, 9380172355 ಸಂಪರ್ಕಿಸಬಹುದು.

ಮಹಿಳೆಯರ ಸಾಧನೆ ಸಂತಸ ತರುವ ವಿಚಾರ

ಕನ್ನಡ–ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಡಾ.ಮಲ್ಲಿಕಾರ್ಜುನಸ್ವಾಮಿ ಪ್ರಶಂಸೆ



ಸಾಹಿತಿ ಮ.ನ.ಲತಾಮೋಹನ್, ಬರಹಗಾರ್ತಿ ಇಂದಿರಮ್ಮ ನಟರಾಜ್ ಅವರಿಗೆ ಆದರ್ಶ ಮಹಿಳಾ ರತ್ನ ಪ್ರಶಸ್ತಿ ನೀಡಲಾಯಿತು.

ಮೈಸೂರು,ಮಾ.31–ಇಂದು ಮಹಿಳೆಯರ ಕಾರ್ಯಕ್ಷೇತ್ರ ವಿಸ್ತರಿಸಿದ್ದು, ತಮ್ಮ ಶಕ್ತಿಗೂ ಮೀರಿ ಸಮಾಜಮುಖಿಯಾಗಿ ಬಿಂಬಿಸಿಕೊಳ್ಳುವ ನಿಟ್ಟಿನಲ್ಲಿ ದಾಪುಗಾಲ ನ್ನಿಟ್ಟು ಸಾಗುತ್ತಿದ್ದಾರೆ ಎಂದು ಕನ್ನಡ– ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಡಾ.ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಅಭಿಪ್ರಾಯಪಟ್ಟರು.

ಮಹಾರತ್ನ ಟ್ರಸ್ಟ್‌ನ ನಾಲ್ಕನೇ ವರ್ಷದ ವಾರ್ಷಿಕೋತ್ಸವ ಹಾಗೂ ಮಹಿಳಾ ದಿನಾಚರಣೆ ಪ್ರಯುಕ್ತ ಆಯೋಜಿಸಿದ್ದ ರಾಜ್ಯ ಮಟ್ಟದ ಭಜನಾ ಸ್ಪರ್ಧೆ ಸಮಾರೋಪ ಭಾಷಣದಲ್ಲಿ ಮಾತನಾಡಿದ ಅವರು, ಮಹಿಳೆಯರು ಪ್ರತಿಯೊಂದು ಕ್ಷೇತ್ರದಲ್ಲೂ ಛಾಪನ್ನು ಮೂಡಿಸುತ್ತಿದ್ದು ಸಾಧನೆಯ ಮೆಟ್ಟಿಲನ್ನು ಹಂತಹಂತವಾಗಿ ಏರುವುದರಲ್ಲಿ ಯಶಸ್ವಿಯಾಗಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಪತ್ರಕರ್ತೆ, ಸಾಹಿತಿ, 'ಮನಸ್ಸಿದ್ದರೆ ಮಾರ್ಗ' ಮಕ್ಕಳ ಚಲನಚಿತ್ರದ ನಿರ್ದೇಶಕಿ ಮ.ನ.ಲತಾ ಮೋಹನ್ ಹಾಗೂ ಸಮಾಜ ಸೇವಕರು, ಬರಹಗಾರರೂ ಆದ ಇಂದಿರಮ್ಮ ನಟರಾಜ್ ಅವರಿಗೆ ಆದರ್ಶ ಮಹಿಳಾ ರತ್ನ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಪ್ರಶಸ್ತಿಯನ್ನು ಸ್ವೀಕರಿಸಿ ಮಾತನಾಡಿದ ಲತಾಮೋಹನ್, ಪ್ರಶಸ್ತಿಗಳು ಜವಾಬ್ದಾರಿಯನ್ನು ಹೆಚ್ಚಿಸುವುದಲ್ಲದೆ ಮುಂದಿನ ಭವಿಷ್ಯಕ್ಕೂ ಬುನಾದಿಯಾಗುತ್ತದೆ ಎಂದರು.

ಮಹಾರತ್ನ ಟ್ರಸ್ಟ್‌ನ ಅಧ್ಯಕ್ಷ ಮಹಾಲಿಂಗು ಮಾತನಾಡಿ, ಮಹಿಳೆಯರು ಎಲ್ಲಾ ರಂಗದಲ್ಲೂ ಅತ್ಯುನ್ನತವಾದ ಸಾಧನೆ ಮಾಡಲು ಸಮಾಜದ ಸರ್ವರೂ ಸದಾ ಕಾಲವೂ ಸನ್ನದ್ಧರಾಗಿರಬೇಕೆಂದರು.

ಮುಖ್ಯ ಅತಿಥಿಗಳಾಗಿದ್ದ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ವಾಣಿಜ್ಯ ವಿಭಾಗದ ಮುಖ್ಯಸ್ಥೆ ಡಾ.ನಳಿನಿ ಮಾತನಾಡಿ, ಇಂದು ಮಹಿಳೆಯರು ತಮ್ಮ ಸ್ವಪ್ರಯತ್ನದಿಂದ ಹಂತ ಹಂತವಾಗಿ ಮೇಲ್ಮುಖವಾಗಿ ಸಾಗುತ್ತಿರುವುದು ಪ್ರಗತಿಯ ಲಕ್ಷಣ ಎಂದರು.

ಭಜನಾ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ನಗದು ಬಹುಮಾನ ವಿತರಿಸಲಾಯಿತು. ವೇದಿಕೆಯಲ್ಲಿ ಟ್ರಸ್ಟ್‌ನ ಗೌರವ ಅಧ್ಯಕ್ಷ ಸಿ.ವಿ.ಪಾರ್ಥಸಾರಥಿ, ಖಜಾಂಚಿ ನಾಗರತ್ನ, ಕಾರ್ಯದರ್ಶಿ ರೂಪ ಪ್ರೇಮ್‌ಕುಮಾರ್, ಸಹ ಕಾರ್ಯದರ್ಶಿ ನಾಗಶ್ರೀ ಮತ್ತಿತರರು ಉಪಸ್ಥಿತರಿದ್ದರು.

ಬಾಲಕ ನಾಪತ್ತೆ



ಮೈಸೂರು: ಜೀವನ್ ಎಂಬ ಬಾಲಕ ಕಾಣೆಯಾಗಿದ್ದು ಎನ್.ಆರ್. ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವಯಸ್ಸು 13, 104 ಸೆಂ.ಮೀ ಎತ್ತರ, ಕಪ್ಪು ಬಣ್ಣದ ಕೂದಲು, ಫೇರ್ ಮೈಬಣ್ಣ, ಕೆಂಪು ಬಣ್ಣದ ತುಂಬು ತೋಳಿನ ಶರ್ಟ್, ಕ್ರೀಂ ಕಲರ್ ಪ್ಯಾಂಟ್, ಕಪ್ಪು ಬಣ್ಣದ ಸ್ಕೂಲ್ ಬ್ಯಾಗ್, ಕನ್ನಡ ಹಿಂದಿ ಮಾತನಾಡುತ್ತಾರೆ. ಕಾಣೆಯಾಗಿರುವ ಬಾಲಕನ ಬಗ್ಗೆ ಮಾಹಿತಿ ಕಂಡುಬಂದಲ್ಲಿ ಎನ್.ಆರ್.ಪೊಲೀಸ್ ಠಾಣೆಯ ದೂ.: ಪಿ.ಎಸ್–241812 ಎ.ಸಿ.ಪಿ 2418311 email-acpnrmyc@ksp.gov.in control room: 0821–2418100, email-compolmyc @ksp.gov.in Chief Off: 2212108, email-ff@mail.com ಅನ್ನು ಸಂಪರ್ಕಿಸುವುದು ಎಂದು ಎನ್.ಆರ್. ಪೊಲೀಸ್ ಠಾಣೆಯ ಸ್ಟೇಷನ್ ಹೌಸ್ ಆಫೀಸರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇಶ - ವಿದೇಶ

ನಳಂದ ಶೀತ್ಲಾ ದೇವಸ್ಥಾನದಲ್ಲಿ ಕಾಲ್ತುಳಿತ; 8 ಮಹಿಳೆಯರ ಸಾವು




ನಳಂದ: ಬಿಹಾರದ ಶೀತ್ಲಾ ದೇವಸ್ಥಾನದಲ್ಲಿ ಕಾಲ್ತುಳಿತ ಉಂಟಾಗಿ 8 ಮಹಿಳೆಯರು ಮೃತಪಟ್ಟು, ಹಲವರು ಗಂಭೀರವಾಗಿ ಗಾಯಗೊಂಡಿರುವ ದಾರುಣ ಘಟನೆ ನಡೆದಿದೆ.

ಚೈತ್ರ ಮಾಸದ ಕೊನೆ ದಿನವಾದ ಕಾರಣ, ಬಿಹಾರದ ನಳಂದ ಜಿಲ್ಲೆಯ ಶೀತಲಾ ದೇವಸ್ಥಾನದಲ್ಲಿ ಧಾರ್ಮಿಕ ಕಾರ್ಯಕ್ರಮ ನಡೆಯುತ್ತಿತ್ತು. ಈ ವೇಳೆ ದೇವರ ಪೂಜೆಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಜಮಾಯಿಸಿದ್ದರು. ಬ್ಯಾರಿಕೇಡ್ ಭೇದಿಸಿ ನುಗ್ಗುವ ವೇಳೆ ತೀವ್ರ ಜನದಟ್ಟಣೆಯಿಂದ ಕಾಲ್ತುಳಿತ ಉಂಟಾಗಿ ಹಲವರು ಗಾಯಗೊಂಡರು. ಅವರಲ್ಲಿ ಎಂಟು ಮಹಿಳೆಯರು ಮೃತಪಟ್ಟಿದ್ದಾರೆ. ವಿಷಯ ತಿಳಿಯುತ್ತಿದ್ದಂತೆ ಸ್ಥಳೀಯ ಪೊಲೀಸರು ದೇಗುಲಕ್ಕೆ ಧಾವಿಸಿ, ರಕ್ಷಣಾ ಕಾರ್ಯಾಚರಣೆ ನಡೆಸಿದ್ದಾರೆ. ಮುಖ್ಯಮಂತ್ರಿ ನಿತೀಶ್ ಕುಮಾರ್ ದುರಂತದ ಬಗ್ಗೆ ವಿಷಾಧ ವ್ಯಕ್ತಪಡಿಸಿ, ಮೃತರ ಕುಟುಂಬಗಳಿಗೆ 6 ಲಕ್ಷ ರೂ. ಪರಿಹಾರ ಘೋಷಿಸಿದ್ದಾರೆ.


ಡಿಸಿಎಂ ಸಾಮ್ರಾಟ್ ಚೌಧರಿ, ಸಂತ್ರಸ್ತರಿಗೆ ಬೇಕಾಗುವ ಎಲ್ಲ ಸಹಾಯ ಹಾಗೂ ಪರಿಹಾರವನ್ನು ನೀಡಲಾಗುತ್ತದೆ. ಗಾಯಾಳುಗಳಿಗೆ ಸೂಕ್ತ ಚಿಕಿತ್ಸೆ ನೀಡುವಂತೆ ಸೂಚಿಸಲಾಗಿದೆ ಎಂದಿದ್ದಾರೆ. ಕಳೆದ ವರ್ಷ ಶ್ರೀಕಾಕುಳಂ ಜಿಲ್ಲೆಯ ಶ್ರೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನಡೆದ ಕಾಲ್ತುಳಿತದಲ್ಲಿ ಮಹಿಳೆಯರು, ಮಕ್ಕಳು ಸೇರಿದಂತೆ 9 ಭಕ್ತರು ಸಾವನ್ನಪ್ಪಿದ್ದರು.

ಉಗ್ರ ಮಸೂದ್ ಸಹೋದರ ತಾಹಿರ್ ಅನ್ವರ್ ನಿಗೂಢ ಸಾವು



ಇಸ್ಲಾಮಾಬಾದ್: ಭಾರತದ 'ಆಪರೇಷನ್ ಸಿಂಧೂರ' ಸೇನಾ ಕಾರ್ಯಾಚರಣೆಯಲ್ಲಿ ಕುಟುಂಬದ 14 ಸದಸ್ಯರನ್ನು ಕಳೆದುಕೊಂಡ ಜೈಶ್–ಎ–ಮೊಹಮ್ಮದ್ ಉಗ್ರ ಸಂಘಟನೆ ಮುಖ್ಯಸ್ಥ ಮೌಲಾನಾ ಮಸೂದ್ ಅಜರ್‌ನ ಸಹೋದರ ಮೊಹಮ್ಮದ್ ತಾಹಿರ್ ಅನ್ವರ್, ಪಾಕಿಸ್ತಾನದ ಬಹವಾಲ್‌ಪುರ್‌ದಲ್ಲಿ ನಿಗೂಢವಾಗಿ ಸಾವನ್ನಪ್ಪಿದ್ದಾನೆ ಜೈಶ್–ಎ–ಮೊಹಮ್ಮದ್ ಉಗ್ರರ ಹೆಡ್ ಕ್ವಾರ್ಟರ್ಸ್‌ನಲ್ಲೇ ಈ ಘಟನೆ ನಡೆದಿದ್ದು, ಸಂಘಟನೆಯ ಅಧಿಕೃತ ಟೆಲಿಗ್ರಾಮ್ ಚಾನೆಲ್‌ಗಳಲ್ಲಿ ಪ್ರಕಟಿಸಲಾಗಿದೆ. ಸೋಮವಾರ ತಡರಾತ್ರಿ ಆತನ ಅಂತ್ಯಕ್ರಿಯೆ ನೆರವೇರಿಸಿದ್ದು, ಮಸೂದ್ ಅಜರ್ ಭಾಗವಹಿಸಿಲ್ಲ ಎನ್ನಲಾಗಿದೆ. ಮೊಹಮ್ಮದ್ ತಾಹಿರ್ ಅನ್ವರ್ ಯಾವುದೇ ದೀರ್ಘಕಾಲದ ಅನಾರೋಗ್ಯದಿಂದ ಬಳಲುತ್ತಿರಲಿಲ್ಲ. ಆದಾಗ್ಯೂ ಅವನ ಸಾವು ಹೇಗೆ ಸಂಭವಿಸಿದೆ ಎಂಬುದು ಇನ್ನೂ ನಿಗೂಢವಾಗಿದೆ. ಅನ್ವರ್ ದಿಢೀರ್ ಸಾವು ಮತ್ತು ಅಂತ್ಯಕ್ರಿಯೆಯಲ್ಲಿ ಮಸೂದ್ ಅಜರ್ ಭಾಗವಹಿಸದಿರುವುದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ. ಮೊಹಮ್ಮದ್ ತಾಹಿರ್ ಅನ್ವರ್ ಕೇವಲ ಜಗತ್ತಿನ ಮೋಸ್ಟ್ ವಾಂಟೆಡ್ ಉಗ್ರ ಮಸೂದ್ ಅಜರ್‌ನ ಸಹೋದರನಷ್ಟೇ ಅಲ್ಲ. ಆತ ಜೈಶ್–ಎ–ಮೊಹಮ್ಮದ್ ಸಂಘಟನೆಯ ಬಹುಮುಖ್ಯ ಕೊಂಡಿಯಾಗಿದ್ದ. ಜೈಶ್‌ನ ಸಶಸ್ತ್ರ ಪಡೆಗಳ ಕಮಾಂಡರ್, ಉಗ್ರರ ತರಬೇತಿ ಕೇಂದ್ರ ಮರ್ಕಝ್ ಉಸ್ಮಾನ್–ಒ–ಅಲಿಯ ಮುಖ್ಯಸ್ಥನಾಗಿದ್ದನಲ್ಲದೇ ಉಗ್ರರಿಗೆ ಬೇಕಾದ ಶಸ್ತ್ರಾಸ್ತ್ರಗಳನ್ನು ಪೂರೈಸುವ ಲಾಜಿಸ್ಟಿಕ್ಸ್ ಕೆಲಸ ಮಾಡುತ್ತಿದ್ದ.

ನಕಲಿ ದೇವಮಾನವ ಅಶೋಕ್ ಖರತ್‌ನಿಂದ 150ಕ್ಕೂ ಹೆಚ್ಚು ಮಹಿಳೆಯರ ಶೋಷಣೆ!



ಮುಂಬೈ: ನಕಲಿ ದೇವಮಾನವ ಮತ್ತು ಜ್ಯೋತಿಷಿ ಅಶೋಕ್ ಖರತ್‌ನಿಂದ 150ಕ್ಕೂ ಹೆಚ್ಚು ಮಹಿಳೆಯರು ಶೋಷಣೆಗೆ ಒಳಗಾಗಿದ್ದಾರೆ ಎಂಬುದು ಎಸ್‌ಐಟಿ ತನಿಖೆಯಿಂದ ಬಹಿರಂಗವಾಗಿದೆ.

ಎಸ್‌ಐಟಿ ತಂಡವು ನಾಸಿಕ್‌ನಲ್ಲಿರುವ ಆರೋಪಿ ಖರತ್ ಕಚೇರಿಯಲ್ಲಿ ವಶಪಡಿಸಿಕೊಂಡ ಎರಡು ಲ್ಯಾಪ್‌ಟಾಪ್ ಮತ್ತು ಮೊಬೈಲ್ ಪರಿಶೀಲಿಸಿದಾಗ ಈ ಮಾಹಿತಿ ಲಭ್ಯವಾಗಿದೆ. ಜೀವನವನ್ನು ಸುಧಾರಿಸುವ, ವೈಯಕ್ತಿಕ ಮತ್ತು ವೃತ್ತಿ ಸಮಸ್ಯೆಗಳನ್ನು ಪರಿಹರಿಸುವ ನೆಪದಲ್ಲಿ ಮಹಿಳೆಯರಿಗೆ ಲೈಂಗಿಕ ಶೋಷಣೆ ಮಾಡಿದ್ದಾನೆ. ಮಹಿಳೆಯರು ಸೇರಿದಂತೆ ಉನ್ನತ ವ್ಯಕ್ತಿಗಳನ್ನು ಸಂಪರ್ಕಿಸಲು ವಿಭಿನ್ನ ಮೊಬೈಲ್‌ಗಳನ್ನು ಬಳಸುತ್ತಿದ್ದ. ಇನ್ನೂ ಮಹಿಳೆಯರಿಗೆ ನೀಡಲಾಗುವ ಪಾನೀಯಗಳು ಮತ್ತು ಸಿಹಿತಿಂಡಿಗಳಲ್ಲಿ ಸ್ಪೈಕ್ ಮಾಡಿದ ನಂತರ ಅವರನ್ನು ಕೆಲವೊಮ್ಮೆ ಸಂಮೋಹನಗೊಳಿಸಿ, ಶೋಷಿಸುತ್ತಿದ್ದನು ಎಂದು ತಿಳಿದುಬಂದಿದೆ.

ಸದ್ಯ ಖರತ್ ಕಚೇರಿ, ಆಸ್ತಿಗಳನ್ನು ಸೀಲ್ ಮಾಡಿ, ಅವರ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಲಾಗಿದೆ. ಈ ಪ್ರಕರಣ ಮಹಾರಾಷ್ಟ್ರ ರಾಜಕೀಯದಲ್ಲೂ ಬಿರುಗಾಳಿ ಎಬ್ಬಿಸಿದೆ. ಆರೋಪಿ ಖರತ್ ಜೊತೆ ಸಂಪರ್ಕವಿದ್ದ ಎನ್‌ಸಿಪಿ ಶಾಸಕಿ ರೂಪಾಲಿ ಚಕಂಕರ್, ಮಹಾರಾಷ್ಟ್ರ ಮಹಿಳಾ ಆಯೋಗ ಮತ್ತು ಎನ್‌ಸಿಪಿ ಮಹಿಳಾ ಘಟಕದ ರಾಜ್ಯಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.


ಫ್ಲೋರಿಡಾ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಟ್ರಂಪ್ ಹೆಸರು



ಫ್ಲೋರಿಡಾ: ಅಮೆರಿಕದ ಪ್ರತಿಷ್ಠಿತ ಸ್ಥಳಗಳಲ್ಲಿ ಒಂದಾಗಿರುವ ಫ್ಲೋರಿಡಾದ ಸುಪ್ರಸಿದ್ಧ 'ಪಾಮ್ ಬೀಚ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ' ಇನ್ನು ಮುಂದೆ 'ಪ್ರೆಸಿಡೆಂಟ್ ಡೊನಾಲ್ಡ್ ಜೆ.ಟ್ರಂಪ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ' ಎಂದು ಕರೆಸಿಕೊಳ್ಳಲಿದೆ. ಈ ವಿಮಾನ ನಿಲ್ದಾಣಕ್ಕೆ ಡೊನಾಲ್ಡ್ ಟ್ರಂಪ್ ಅವರ ಹೆಸರಿಡುವ ಮಸೂದೆಗೆ ಫ್ಲೋರಿಡಾ ಗವರ್ನರ್ ಸಹಿ ಹಾಕಿದ ಬಳಿಕ ಈ ನಿರ್ಧಾರವನ್ನು ಅಧಿಕೃತವಾಗಿ ಘೋಷಣೆ ಮಾಡಲಾಗಿದೆ. ಮುಂಬರುವ ಜುಲೈ 1ರಿಂದ ವಿಮಾನ ನಿಲ್ದಾಣದ ಹೆಸರು ಅಧಿಕೃತವಾಗಿ ಬದಲಾಗಲಿದೆ. ಫ್ಲೋರಿಡಾದೊಂದಿಗೆ ಡೊನಾಲ್ಡ್ ಟ್ರಂಪ್ ಹೊಂದಿರುವ ಭಾವನಾತ್ಮಕ ಬೆಸುಗೆಯನ್ನು ಗೌರವಿಸಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಮೂಲಗಳು ಖಚಿತಪಡಿಸಿವೆ.

ಅಮೆರಿಕದ ಇತಿಹಾಸದಲ್ಲಿ ಅಧ್ಯಕ್ಷರೊಬ್ಬರ ಹೆಸರನ್ನು ಸಾರ್ವಜನಿಕ ಮೂಲಸೌಕರ್ಯಗಳಿಗೆ, ಅದರಲ್ಲೂ ಪ್ರಮುಖ ವಿಮಾನ ನಿಲ್ದಾಣವೊಂದಕ್ಕೆ ಇಡುವುದು ಗೌರವದ ಸಂಕೇತ. ಇದೀಗ ಅಂತಹದ್ದೇ ಗೌರವಕ್ಕೆ ಡೊನಾಲ್ಡ್ ಟ್ರಂಪ್ ಕೂಡ ಪಾತ್ರರಾಗಿದ್ದಾರೆ. ಈ ಸಂತಸದ ವಿಚಾರವನ್ನು ಸ್ವತಃ ಟ್ರಂಪ್ ಅವರ ಪುತ್ರ ಎರಿಕ್ ಟ್ರಂಪ್ ಹೆಮ್ಮೆಯಿಂದ ತಮ್ಮ ಅಧಿಕೃತ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

ತನ್ನ ತಿಥಿ ಕಾರ್ಯ ತಾನೇ ಮಾಡಿಕೊಂಡ ಅವಿವಾಹಿತ ವೃದ್ಧ!



ಲಖನೌ: ಅವಿವಾಯಿತ ವ್ಯಕ್ತಿಯೊಬ್ಬ ಬದುಕಿರುವಾಗಲೇ ತನ್ನ ತಿಥಿಶಾಸ್ತ್ರ ಮಾಡಿಕೊಂಡಿರುವ ವಿಚಿತ್ರ ಘಟನೆ ಉತ್ತರ ಪ್ರದೇಶದಲ್ಲಿ ನಡೆದಿದೆ.

ಇಲ್ಲಿನ ಔರೈಯಾ ಜಿಲ್ಲೆಯ ಲಕ್ಷ್ಮಣಪುರ ಗ್ರಾಮದ ರಾಕೇಶ್ ಯಾದವ್(65), ತಾನು ಸತ್ತ ಮೇಲೆ ನನಗಾಗಿ ಈ ಕಾರ್ಯ ಮಾಡಲು ಯಾರೂ ಇಲ್ಲ ಎಂಬ ನೋವಿನಿಂದ ತಾನೇ ತನ್ನ 'ಜಿಂದಾ ಭಂಡಾರ(ಬದುಕಿರುವಾಗಲೇ ಮಾಡುವ ತಿಥಿ)' ನೆರವೇರಿಸಿದ್ದಾರೆ. ತಮ್ಮ ಜೀವನದ ಅಂತ್ಯಕಾಲದಲ್ಲಿ ತನಗಾಗಿ ಯಾರೂ ಇಲ್ಲ ಎಂಬ ಅನಾಥ ಪ್ರಜ್ಞೆ ಕಾಡಿ, ಸುಮಾರು 2 ಸಾವಿರ ಅತಿಥಿಗಳಿಗೆ ಊಟದ ವ್ಯವಸ್ಥೆ ಮಾಡಿದ್ದರು. ಅಲ್ಲದೆ, ತಮ್ಮ ಭಾವಚಿತ್ರವಿರುವ ಆಮಂತ್ರಣ ಪತ್ರಿಕೆ ಮುದ್ರಿಸಿ, ತಮ್ಮ ಗ್ರಾಮ ಹಾಗೂ ಸುತ್ತಮುತ್ತಲಿನ ಹಳ್ಳಿಗಳಿಗೂ ಹಂಚಿ, 'ಜಿಂದಾ ಭಂಡಾರ' ಕಾರ್ಯಕ್ಕೆ ಆಗಮಿಸುವಂತೆ ಮನವಿ ಮಾಡಿದ್ದರು. ಸದ್ಯ ರಾಕೇಶ್ ಯಾದವ್ ಅವರ ಆಮಂತ್ರಣ ಪತ್ರಿಕೆ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿದೆ. ರಾಕೇಶ್ ಸೇರಿದಂತೆ ಮೂವರು ಸಹೋದರರು, ಓರ್ವ ಸಹೋದರಿ ಒಡಹುಟ್ಟಿದವರು. ತಂಗಿ ವಿವಾಹ ವಾಗಿದ್ದು, ಸಹೋದರು ಅವಿವಾಹಿತರಾಗಿದ್ದರು. ವಿಧಿಯಾಟ ಎಂಬಂತೆ ಇಬ್ಬರು ಸಹೋದರರು ಮೃತಪಟ್ಟ ಬಳಿಕ ರಾಕೇಶ್ ಒಂಟಿಯಾಗಿದ್ದಾರೆ. ನನ್ನ ವೃದ್ಧಾಪ್ಯದಲ್ಲಿ ನನಗೆ ಸಹಾಯ ಮಾಡಲು ಯಾರೂ ಇಲ್ಲ. ಸತ್ತ ಮೇಲೆ ನನ್ನ ಅಂತ್ಯಕ್ರಿಯೆ ಮಾಡುವವರು ಹಾಗೂ 13ನೇ ದಿನದ ಕಾರ್ಯ ಮಾಡುವವರು ಯಾರೂ ಇಲ್ಲ ಎಂಬ ಆತಂಕದಿಂದ ಹೀಗೆ ಮಾಡಿದ್ದಾಗಿ ತಿಳಿಸಿದ್ದಾರೆ.

ಆಶ್ರಮ, ವೃದ್ಧಾಶ್ರಮದಲ್ಲಿ ಜನರಲ್ ತಿಮ್ಮಯ್ಯ ಹುಟ್ಟುಹಬ್ಬ ಆಚರಣೆ

ಅಸಹಾಯಕರು, ವೃದ್ಧರು, ಶೋಷಿತರು, ನಿರ್ಗತಿಕರಿಗೆ ಕೈಲಾದ ಸಹಾಯ ಮಾಡಿ



ಜನರಲ್ ತಿಮ್ಮಯ್ಯ ಅವರ ಭಾವಚಿತ್ರಕ್ಕೆ ಶಾಸಕ ಎ.ಎಸ್.ಪೊನ್ನಣ್ಣ ಪುಷ್ಪ ನಮನ ಸಲ್ಲಿಸುತ್ತಿರುವುದು. ವೃದ್ಧಾಶ್ರಮದಲ್ಲಿ ವೃದ್ಧರಿಗೆ ಶಾಸಕರು ಮಧ್ಯಾಹ್ನದ ಭೋಜನ ಬಡಿಸುತ್ತಿರುವುದನ್ನು ಬಲಚಿತ್ರದಲ್ಲಿ ಕಾಣಬಹುದು.

ಮಡಿಕೇರಿ ಮಾ.31– ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಮತ್ತು ಜನರಲ್ ತಿಮ್ಮಯ್ಯ ಫೌಂಡೇಶನ್ ವತಿಯಿಂದ ಮಂಗಳವಾರ ತನಲ್ ಕೂರ್ಗ್ ಆಶ್ರಮ, ವಿಕಾಸ ಆಶ್ರಮ ಮತ್ತು ಶಕ್ತಿ ವೃದ್ಧಾಶ್ರಮದಲ್ಲಿ ಜನರಲ್ ತಿಮ್ಮಯ್ಯ ಅವರ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಈ ವೃದ್ಧಾಶ್ರಮದಲ್ಲಿನ ಆಶ್ರಯದಾತರಿಗೆ ಮಧ್ಯಾಹ್ನದ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ತನಲ್ ಕೂರ್ಗ್ ವೃದ್ಧಾಶ್ರಮಕ್ಕೆ ಶಾಸಕರು ಹಾಗೂ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಮತ್ತು ಜನರಲ್ ತಿಮ್ಮಯ್ಯ ಫೌಂಡೇಶನ್‌ನ ಗೌರವ ಅಧ್ಯಕ್ಷರಾದ ಎ.ಎಸ್.ಪೊನ್ನಣ್ಣ ಅವರು ಭೇಟಿ ನೀಡಿ ಹೂ ಗುಚ್ಛ ನೀಡಿ ಗೌರವಿಸಿದರು.

ಬಳಿಕ ಮಾತನಾಡಿದ ಶಾಸಕರು ಎಫ್‌ಎಂಸಿ ಮತ್ತು ಜಿಟಿ ಫೌಂಡೇಶನ್ ವತಿಯಿಂದ ಅಸಹಾಯಕರು, ವೃದ್ಧರು, ಶೋಷಿತರು, ನಿರ್ಗತಿಕರಿಗೆ ಕೈಲಾದಷ್ಟು ಸಹಾಯ ಮಾಡುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದರಲ್ಲದೆ ಜನರಲ್ ತಿಮ್ಮಯ್ಯ ಅವರ ಜನ್ಮ ದಿನಾಚರಣೆ ಪ್ರಯುಕ್ತ ನಗರದ ವೃದ್ಧಾಶ್ರಮಗಳಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ಶ್ಲಾಘನೀಯವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇಂದಿನ ಸಮಾಜ ಹಿರಿಯರನ್ನು ಗೌರವಿಸಬೇಕು. ಅವರನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಇದರಿಂದ ಮಕ್ಕಳಿಗೂ ತಂದೆ ತಾಯಿಯನ್ನು ಗೌರವಿಸುವ ಭಾವನೆ ಬರುತ್ತದೆ. ಆದ್ದರಿಂದ ಯಾರನ್ನು ಸಹ ಉದಾಸೀನ ಮಾಡದೆ ಪ್ರತಿಯೊಬ್ಬರೂ ಹಿರಿಯರನ್ನು ಗೌರವಿಸಬೇಕು ಎಂದು ಎ.ಎಸ್. ಪೊನ್ನಣ್ಣ ಅವರು ಸಲಹೆ ಮಾಡಿದರು.

ತನಲ್ ಕೂರ್ಗ್ ಆಶ್ರಮ ಸಂಸ್ಥೆಯ ಅಧ್ಯಕ್ಷರಾದ ಮಹಮ್ಮದ್ ಮುಸ್ತಾಫಾ ಅವರು ಮಾತನಾಡಿ ನಿರಾಶ್ರಿತರಿಗೆ ಆಶ್ರಯ ಕಲ್ಪಿಸುವಲ್ಲಿ ತನಲ್ ಸಂಸ್ಥೆ ಮುಂದಾಗಿದೆ. ಆ ನಿಟ್ಟಿನಲ್ಲಿ ಹಲವು ವೃದ್ಧರು ಹಾಗೂ ಇತರರಿಗೆ ಕುಟುಂಬದವರನ್ನು ಹುಡುಕಿ ಮನೆ ಸೇರ್ಪಡೆಗೆ ಪ್ರಯತ್ನಿಸಲಾಗಿದೆ. ಹಾಗೆಯೇ ಸಮಾಜಮುಖಿ ಕೆಲಸಗಳನ್ನು ಕೈಗೊಂಡು ಪುಣ್ಯ ಕೆಲಸ ಮಾಡಲಾಗುತ್ತಿದೆ ಎಂದು ಹೇಳಿದರು.

ಎಫ್‌ಎಂಸಿ ಮತ್ತು ಜಿಟಿ ಫೌಂಡೇಶನ್‌ನ ಗೌರವ ಸಂಚಾಲಕರಾದ ತಮ್ಮು ಪೂವಯ್ಯ, ಪ್ರಮುಖರಾದ ಕುಕ್ಕೇರ ಜಯ ಚಿಣ್ಣಪ್ಪ ಅವರು ಮಾತನಾಡಿದರು.

ಕುಕ್ಕೇರ ಜಯ ಚಿಣ್ಣಪ್ಪ, ಗೌಡಂಡ ತಿಮ್ಮಯ್ಯ, ಅಬ್ದುಲ್ ಕರೀಂ, ಡೇವಿಡ್ ವೇಗಸ್ ಅವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಎಫ್‌ಎಂಸಿ ಮತ್ತು ಜಿಟಿ ಫೌಂಡೇಶನ್‌ನ ಪಪ್ಪು ತಿಮ್ಮಯ್ಯ, ಸಂಜು ಕಾವೇರಪ್ಪ, ಟ್ರಾವೆಲ್ ಕೂರ್ಗ್ ಅಸೋಷಿಯೇಷನ್‌ನ ವಸಂತ್, ಇತರರು ಇದ್ದರು.

ಬಳಿಕ ಆಶ್ರಮದಲ್ಲಿನ ಹಿರಿಯರಿಗೆ ಮಧ್ಯಾಹ್ನದ ಭೋಜನವನ್ನು ಶಾಸಕರು ಬಡಿಸಿದರು. ಚೆಯ್ಯಂಡ ಸತ್ಯ ಸ್ವಾಗತಿಸಿದರು. ದಿನು ಕುಶಾಲಪ್ಪ ಪ್ರಾರ್ಥಿಸಿದರು.

20 ಕೋಟಿ ಅನುದಾನ ಮೂಲಸೌಲಭ್ಯಗಳಿಗೆ ಬಳಕೆ



ಭಗವಾನ್ ಮಹಾವೀರರ ಜಯಂತಿ ಕಾರ್ಯಕ್ರಮವನ್ನುದ್ದೇಶಿಸಿ ಗಣ್ಯರು ಮತನಾಡಿದರು.

ವಿರಾಜಪೇಟೆ, ಮಾ.31– ಪುರಸಭೆ ವ್ಯಾಪ್ತಿಯ ಅಭಿವೃದ್ಧಿ ಕಾರ್ಯಗಳಿಗೆ ನೀಡಿದ್ದ 20 ಕೋಟಿ ಅನುದಾನದಲ್ಲಿ ವಿವಿಧ ವಾರ್ಡ್‌ಗಳಲ್ಲಿ ರಸ್ತೆ, ಕುಡಿಯುವ ನೀರು ಸೇರಿದಂತೆ ಇತರ ಮೂಲಸೌಲಭ್ಯಗಳನ್ನು ಒದಗಿಸಿ ಕೊಡಲಾಗುವುದು ಎಂದು ಶಾಸಕ ಎ.ಎಸ್.ಪೊನ್ನಣ್ಣ ಹೇಳಿದ್ದಾರೆ.

ಪುರಸಭೆಯ ವಿಶೇಷ ಅನುದಾನದಲ್ಲಿ 9ನೇ ವಾರ್ಡ್ ಸುಭಾಷ ನಗರ, ಸಿಲ್ವನಗರ, ವಿದ್ಯಾನಗರಗಳಲ್ಲಿ 60 ಲಕ್ಷ ಅನುದಾನದಲ್ಲಿ 10 ಕಡೆಗಳಲ್ಲಿ ಕಾಂಕ್ರೀಟ್ ರಸ್ತೆಯನ್ನು ರಿಬ್ಬನ್ ಕತ್ತರಿಸಿ ಉದ್ಘಾಟಿಸಿ, ರಸ್ತೆಗಳ ಬದಿ ಚರಂಡಿಯ ಅವಶ್ಯಕತೆ ಇರುವುದರಿಂದ 5 ಲಕ್ಷದಲ್ಲಿ ಚರಂಡಿ ನಿರ್ಮಾಣ, ಸೇರಿದಂತೆ ಒಟ್ಟು 65 ಲಕ್ಷ ರೂ. ಕಾಮಗಾರಿ ನಡೆಸಲಾಗಿದೆ. ಮುಂದಿನ ದಿನದಲ್ಲಿ ಉಳಿದಿರುವ ಎಲ್ಲ ರಸ್ತೆಗಳ ಅಭಿವೃದ್ಧಿ ಕಾಮಗಾರಿ ನಡೆಸಲಾಗುವುದು ಎಂದರು.

ಸ್ಥಳಿಯ ವಾರ್ಡ್ ಮಾಜಿ ಸದಸ್ಯ ಮಹ್ಮದ್ ರಾಫಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಟ್ಟಡ ರಂಜಿ ಪೂಣಚ್ಚ, ಅಲ್ಪಸಂಖ್ಯಾತರ ಘಟಕದ ಜಿಲ್ಲಾ ಅಧ್ಯಕ್ಷ ಪಿ.ಎ. ಹನೀಫ್, ಬ್ಲಾಕ್ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಕೊಳುಮಂಡ ರಫೀಕ್, ಪುರಸಭೆ ಮುಖ್ಯಾಧಿಕಾರಿ ಪಿ.ಕೆ.ನಾಚಪ್ಪ ಅಭಿಯಂತರ ಎನ್.ಪಿ. ಹೇಮಕುಮಾರ್, ಪುರಸಭೆ ಮಾಜಿ ಅಧ್ಯಕ್ಷೆ ಎಂ.ದೇಚಮ್ಮ ಕಾಳಪ್ಪ, ಮಾಜಿ ಸದಸ್ಯರಾದ ಶಹುಲ್ ಹಮೀದ್, ರಜನಿಕಾಂತ್, ಡಿ.ಪಿ. ರಾಜೇಶ್, ಆತಿಫ್ ಮನ್ನ, ಜಲೀಲ್, ಸಬಸ್ಟಿನ್ ಬೆನ್ನಿ, ಪ್ರಮುಖರಾದ ಅಬ್ದುಲ್ ಸಲಾಂ, ಕಾಳತಂಡ ಜಗತ್, ಎ.ವಿ.ಮಂಜುನಾಥ್, ಮಂಜು ಮತ್ತಿತರರು ಹಾಜರಿದ್ದರು.

ನಾಳೆ ಮಡಿಕೇರಿಯಲ್ಲಿ ಕೊಡವ ಸತ್ಯಾಗ್ರಹ

ಸಿಕ್ಕಿಂ ಮಾದರಿ ಕೊಡವ ಸಮುದಾಯಕ್ಕೆ ಸಂಸತ್ತು, ವಿಧಾನಸಭೆಯಲ್ಲಿ ಪ್ರತ್ಯೇಕ ಪ್ರಾತಿನಿಧ್ಯ ನೀಡಲು ಆಗ್ರಹ



ಮಡಿಕೇರಿ,ಮಾ.31– ಸಿಕ್ಕಿಂನ ಬೌದ್ಧ ಸನ್ಯಾಸಿ ಸಮುದಾಂಉಂದ ಸಂಘ ಕ್ಷೇತ್ರದ ಮಾದರಿಯಲ್ಲೇ ಕೊಡವ ಸಮುದಾಯಕ್ಕೆ ಭಾರತದ ಸಂಸತ್ತು ಮತ್ತು ಕರ್ನಾಟಕ ವಿಧಾನಸಭೆ ಎರಡರಲ್ಲೂ ಪ್ರತ್ಯೇಕ ಪ್ರಾತಿನಿಧ್ಯವನ್ನು ನೀಡಬೇಕೆಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ವತಿಯಿಂದ ಏ.2ರಂದು ಮಡಿಕೇರಿಯಲ್ಲಿ ಕೊಡವ ಸತ್ಯಾಗ್ರಹ ನಡೆಯಲಿದೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು ಗುರುವಾರ ಬೆಳಿಗ್ಗೆ 10.30 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಸತ್ಯಾಗ್ರಹ ನಡೆಸಿ ಭಾರತದ ರಾಷ್ಟ್ರಪತಿ, ಪ್ರಧಾನಮಂತ್ರಿ, ಕೇಂದ್ರ ಕಾನೂನು ಮಂತ್ರಿ ಹಾಗೂ ಭಾರತದ ಚುನಾವಣಾ ಆಯೋಗಕ್ಕೆ ವಿವಿಧ ಬೇಡಿಕೆಗಳ ಮನವಿ ಪತ್ರವನ್ನು ಜಿಲ್ಲಾಡಳಿತದ ಮೂಲಕ ನೀಡಲಾಗುವುದು ಎಂದು ಹೇಳಿದ್ದಾರೆ.

ಕೊಡವರು ಪ್ರಕೃತಿಯ ಆರಾಧಕರು, ಅತಿ ಕಡಿಮೆ ಜನಸಂಖ್ಯೆ ಹೊಂದಿರುವ ಇವರು ಕೊಡಗಿನ ಮೂಲ ಸಮುದಾಯದವರಾಗಿದ್ದು, ಭಾರತದ ಪ್ರಜಾಪ್ರಭುತ್ವ ರಚನೆಯಲ್ಲಿ ತಮ್ಮ ಅಸ್ಮಿತೆಯನ್ನು ಉಳಿಸಿಕೊಳ್ಳಲು ವಿಶೇಷ ಪ್ರಾತಿನಿಧ್ಯದ ಅಗತ್ಯವಿದೆ. ಈ ಕ್ಷೇತ್ರವು ಯಾವುದೇ ನಿರ್ದಿಷ್ಟ ಭೌಗೋಳಿಕ ಗಡಿಗಳನ್ನು ಹೊಂದಿಲ್ಲ. 1958ರಲ್ಲಿ ರಚಿಸಲಾದ ಸಿಕ್ಕಿಂ ಸಂಘದ ಮಾದರಿಯಲ್ಲಿ, ಕೊಡಗು ಜಿಲ್ಲೆಯ ಎಲ್ಲೇ ವಾಸವಿದ್ದರೂ, ಕೊಡವ ಸಮುದಾಯದ ಸದಸ್ಯರು ಮಾತ್ರ ಸ್ಪರ್ಧಿಸಲು ಮತ್ತು ಮತ ಚಲಾಯಿಸಲು ಇದು ಅವಕಾಶ ನೀಡುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಒಂದು ನಿರ್ದಿಷ್ಟ ಪ್ರದೇಶದ ವ್ಯಾಪ್ತಿಯಲ್ಲಿ ವಾಸಿಸುವ ಕೊಡವ ಸಮುದಾಯದ ನೋಂದಾಯಿತ ಸದಸ್ಯರು ಮಾತ್ರ ಮತ ಚಲಾಯಿಸುವ ಮತ್ತು ಸ್ಪರ್ಧಿಸುವ ಶಾಸನಸಭೆಯ ಸ್ಥಾನವನ್ನು ಸೃಷ್ಟಿಸುವುದು ಅಗತ್ಯವಾಗಿದೆ ಎಂದು ಎನ್.ಯು.ನಾಚಪ್ಪ ತಿಳಿಸಿದ್ದಾರೆ.

ಭಾರತೀಯ ಸಂವಿಧಾನದಡಿಯಲ್ಲಿ ಕೊಡವರಿಗೆ ಬುಡಕಟ್ಟು ಮಾನ್ಯತೆ ನೀಡಬೇಕು. 8ನೇ ಶೆಡ್ಯೂಲ್ ಅಡಿಯಲ್ಲಿ ಕೊಡವ ತಕ್‌ಗೆ ಸಾಂವಿಧಾನಿಕ ರಕ್ಷಣೆ ನೀಡಬೇಕು. 6ನೇ ಶೆಡ್ಯೂಲ್ ಅಡಿಯಲ್ಲಿ ಸ್ವಾಯತ್ತ ಕೊಡವ ಭೂಮಿ ನಿರ್ಮಾಣಕ್ಕೆ ಅವಕಾಶ ನೀಡಬೇಕು. ಅಗತ್ಯ ಧಾರ್ಮಿಕ ಚಟುವಟಿಕೆಗಳ ಕಾಯಿದೆಯಡಿ ಕೊಡವ ಸಾಂಪ್ರದಾಯಿಕ ಬಂದೂಕುಗಾಗಿ ಇರುವ ಸಾಂವಿಧಾನಿಕ ಭದ್ರತೆಯನ್ನು ಖಾತ್ರಿ ಪಡಿಸಬೇಕು ಸೇರಿದಂತೆ ವಿವಿಧ ಬೇಡಿಕೆಗಳನ್ನು ಸತ್ಯಾಗ್ರಹದ ಸಂದರ್ಭ ಮಂಡಿಸುವುದಾಗಿ ಹೇಳಿದ್ದಾರೆ.

ವೇಷ ಹಾಕಿ ಅತಿರೇಕದ ವರ್ತನೆ: ದೂರು ದಾಖಲು



ನಾಪೋಕ್ಲು ಠಾಣೆಯಲ್ಲಿ ಹಿಂದೂ ಪರ ಸಂಘಟನೆಯ ಪ್ರಮುಖರು ದೂರು ದಾಖಲಿಸಿದರು.

ನಾಪೋಕ್ಲು: ಸಮೀಪದ ಎಮ್ಮೆಮಾಡು ಗ್ರಾಮದಲ್ಲಿ ನಡೆದ ಮದುವೆ ಸಮಾರಂಭವೊಂದರಲ್ಲಿ ತುಳುನಾಡಿನ ಪವಿತ್ರ ದೈವವನ್ನು ಹೋಲುವ ರೀತಿಯಲ್ಲಿ ಮದುಮಗನಿಗೆ ವೇಷ ಹಾಕಿ ಅತಿರೇಕದ ವರ್ತನೆ ತೋರಿದ ಬಗ್ಗೆ ವ್ಯಾಪಕ ಖಂಡನೆ ವ್ಯಕ್ತವಾಗಿದೆ. ಮದುಮಗ ಮತ್ತು ಆತನ ಬೆಂಬಲಿಗರು ದೈವಕ್ಕೆ ಅವಮಾನ ಮಾಡಿದ ಘಟನೆಯ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು ಆಕ್ರೋಶಕ್ಕೆ ಕಾರಣವಾಗಿದೆ.

ನಾಪೋಕ್ಲು ಪೊಲೀಸ್ ಠಾಣಾ ವ್ಯಾಪ್ತಿಯ ಎಮ್ಮೆಮಾಡು ಗ್ರಾಮದಲ್ಲಿ ಗ್ರಾಮದ ಯುವಕರು ಎರಡು ದಿನಗಳ ಹಿಂದೆ ಮದುಮಗನೊಬ್ಬನಿಗೆ ದೈವದ ವೇಷ ಧರಿಸಿ ಉಳಿದವರು ದೇವರನ್ನು ಹೀಯಾಳಿಸಿ ಮೆರವಣಿಗೆ ನಡೆಸಿರುವುದರ ವಿರುದ್ಧ ಇಲ್ಲಿನ ಪೊಲೀಸ್ ಠಾಣೆಯಲ್ಲಿ ಹಿಂದೂ ಪರ ಸಂಘಟನೆಯ ಪ್ರಮುಖರು. ಪೂರ್ವಜರ ನಂಬಿಕೆ ಹಾಗೂ ಸಂಸ್ಕೃತಿ ಧರ್ಮವನ್ನು ಅಪಹಾಸ್ಯ ಮಾಡಿರುವ ಬಗ್ಗೆ ದೂರು ಸಲ್ಲಿಸಿದ್ದು ಎಮ್ಮೆಮಾಡು ಗ್ರಾಮದ ಯುವಕರಾದ ಅಬ್ದುಲ್ ರಾಶಿದ್, ಹನೀಫ್, ಲತೀಫ್, ಮೊಹಮ್ಮದ್ ಪೈಸಲ್, ಶಕೀರ್ ಹಾಗೂ ಬಶೀರ್ ಎಂಬವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

ಮಡಿಕೇರಿಯಲ್ಲಿ ಬಾಲಗೋಕುಲ ಬೇಸಿಗೆ ಶಿಬಿರ

ಮಡಿಕೇರಿ: ನಗರದ ಬಾಲಗೋಕುಲದ ವತಿಯಿಂದ ವಿದ್ಯಾರ್ಥಿಗಳಿಗಾಗಿ ಸಂಸ್ಕಾರಯುತ ಬಾಲ ಗೋಕುಲ ಬೇಸಿಗೆ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಈ ಶಿಬಿರವು ಏ.4 ರಿಂದ 12ರವರೆಗೆ ನಗರದ ಓಂಕಾರೇಶ್ವರ ದೇವಾಲಯದ ಬಳಿ ಇರುವ ಮಧುಕೃಪದಲ್ಲಿ ನಡೆಯಲಿದೆ. 5ನೇ ತರಗತಿಯಿಂದ 10ನೇ ತರಗತಿಯವರೆಗಿನ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಈ ಶಿಬಿರದಲ್ಲಿ ಭಾಗವಹಿಸಲು ಅವಕಾಶವಿದ್ದು, ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಪೂರಕವಾದ ಹಲವು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ 9448541328 ಮೊ. 9141678047 ಸಂಪರ್ಕಿಸಲು ಕೋರಲಾಗಿದೆ.

ಕಾಲೇಜಿನಲ್ಲಿ 12 ದಿನಗಳ ಸಂಚೇತನಾ ಶಿಬಿರ



12 ದಿನಗಳ ಸಂಚೇತನಾ ಶಿಬಿರದಲ್ಲಿ ಪಾಲ್ಗೊಂಡಿರುವ ಗಣ್ಯರು

ಮಡಿಕೇರಿ, ಮಾ.31– ನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜ್‌ನಲ್ಲಿ ಹಿಂದಿ ವಿಭಾಗ ಮತ್ತು ಕೇಂದ್ರೀಯ ಹಿಂದಿ ಸಂಸ್ಥಾನ, ಆಗ್ರಾದ ಪ್ರಾದೇಶಿಕ ಕೇಂದ್ರ ಮೈಸೂರು ಇವರ ಸಹ ಭಾಗಿತ್ವದಲ್ಲಿ 12 ದಿನಗಳ ಸಂಚೇತನಾ ಶಿಬಿರ ನಡೆಯಿತು.

ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಕೊಡಗು ವಿಶ್ವ ವಿದ್ಯಾನಿಲಯದ ಕುಲಪತಿ ಪ್ರೊ.ಅಶೋಕ ಸಂಗಪ್ಪ ಆಲೂರ ವಿದ್ಯಾರ್ಥಿಗಳ ಪ್ರತಿಭೆ ಅನಾವರಣ, ಭಾಷೆಯ ಕಲಿಕೆ ಮತ್ತು ವಿವಿಧ ಅವಕಾಶಗಳ ಕುರಿತು ಮಾಹಿತಿ ಪಡೆಯಲು 12 ದಿನಗಳ ಈ ಶಿಬಿರ ಹೆಚ್ಚು ಸಹಕಾರಿಯಾಗಿದೆ ಎಂದರು. ಕೇಂದ್ರೀಯ ಹಿಂದಿ ಸಂಸ್ಥಾನದ ಪ್ರಾದೇಶಿಕ ಕೇಂದ್ರ ಮೈಸೂರಿನ ನಿರ್ದೇಶಕ ಪ್ರೊ.ಯೋಗೇಂದ್ರ ಮಿಶ್ರ ಅವರು ಕಾರ್ಯಕ್ರಮದ ಧ್ಯೇಯೋದ್ದೇಶ ಹಾಗೂ ವಿದ್ಯಾರ್ಥಿಗಳು ಕಲಿಯಬೇಕಾದ ವಿಷಯಗಳನ್ನು ವಿವರಿಸಿದರು.

ಕೇಂದ್ರೀಯ ಹಿಂದಿ ಸಂಸ್ಥಾನ ಆಗ್ರಾ ನಿರ್ದೇಶಕ ಪ್ರೊ.ವಿನಯ ಬಾಬುರಾವ್ ಕುಲಕರ್ಣಿ ಆನ್ ಲೈನ್ ಮೂಲಕ ಮಾತನಾಡಿ ಶುಭ ಹಾರೈಸಿದರು. ಫೀ.ಮಾ.ಕಾರ್ಯಪ್ಪ ಕಾಲೇಜ್‌ನ ಪ್ರಾಂಶುಪಾಲ ಪ್ರೊ.ಮೇಜರ್ ಡಾ.ರಾಘವ ಬಿ. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಕಾರ್ಯಕ್ರಮದ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿ ಸದುಪಯೋಗ ಪಡಿಸಿಕೊಳ್ಳುವಂತೆ ಕರೆ ನೀಡಿದರು.

ಏ.21ಕ್ಕೆ ಗುಂಡ್ಲುಪೇಟೆಗೆ ಸಿಎಂ ಭೇಟಿ

ಅಧಿಕಾರಿಗಳ ಸಭೆ ನಡೆಸಿದ ಶಾಸಕ ಗಣೇಶ್ ಪ್ರಸಾದ್



ಗುಂಡ್ಲುಪೇಟೆ ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ಗುಂಡ್ಲುಪೇಟೆ, ಮಾ.31– ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ತಾಲೂಕಿನಲ್ಲಿ ಸಾಕಷ್ಟು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿದ್ದು 110 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಏ.21 ರಂದು ಚಾಲನೆ ನೀಡಲಿದ್ದಾರೆ ಎಂದು ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಹೇಳಿದರು.

ಏ.21ರಂದು ತಾಲೂಕಿನಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆಗೆ ಮುಖ್ಯಮಂತ್ರಿಗಳು ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಪಟ್ಟಣದ ತಾಲೂಕು ಕಚೇರಿಯ ಸಭಾಂಗಣದಲ್ಲಿ ಆಯೋಜಿಸಿದ್ದ ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು. 110 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಕಾಮಗಾರಿಗೆ ಚಾಲನೆ ನೀಡಲಾಗುವುದು. ಪಟ್ಟಣಕ್ಕೆ ಕುಡಿಯುವ ನೀರು ಪೂರೈಸುವ ಅಮೃತ ಯೋಜನೆಯ ಎಕ್ಸ್‌ಪ್ರೆಸ್ ಲೈನ್, ತಾಲೂಕಿನ ಬೇಗೂರಿನಲ್ಲಿ ಹತ್ತಿಮಾರುಕಟ್ಟೆ ಅರೇಪುರದಲ್ಲಿ ವಿದ್ಯುತ್ ಉಪಕೇಂದ್ರ, ಬೊಮ್ಮನಹಳ್ಳಿ ಸಮೀಪ ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ ನಿರ್ಮಾಣ ಸೇರಿದಂತೆ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದ್ದು ಇದರ ಉದ್ಘಾಟನೆಗೆ ಖುದ್ದಾಗಿ ಮುಖ್ಯಮಂತ್ರಿಗಳೇ ಬರುತ್ತಿದ್ದಾರೆ. ಅಲ್ಲದೆ ಉಪಮುಖ್ಯಮಂತ್ರಿಗಳು ಹಾಗೂ ಸಂಬಂಧಪಟ್ಟ ಇಲಾಖೆಗಳ ಸಚಿವರೂ ಆಗಮಿಸುತ್ತಿದ್ದಾರೆ. ಆದ್ದರಿಂದ ತಾಲೂಕು ಮಟ್ಟದ ಅಧಿಕಾರಿಗಳು ಡಿ.ದೇವರಾಜ ಅರಸು ಕ್ರೀಡಾಂಗಣದಲ್ಲಿ ಹೆಲಿಪ್ಯಾಡ್ ನಿರ್ಮಿಸಬೇಕಾಗುತ್ತದೆ. ಕಾರ್ಯಕ್ರಮಕ್ಕೆ ಬರುವ ಸಾರ್ವಜನಿಕರ ಹಾಗೂ ವಾಹನಗಳ ನಿಯಂತ್ರಣ ಹಾಗೂ ಪಾರ್ಕಿಂಗ್‌ಗೆ ಸೂಕ್ತ ವ್ಯವಸ್ಥೆ ಮಾಡಬೇಕು. ಜಿಲ್ಲಾಧಿಕಾರಿಗಳಿಗೆ ಸೂಕ್ತ ಸಹಕಾರ ನೀಡಬೇಕು ಎಂದು ಸೂಚನೆ ನೀಡಿದರು. ಮುಂದಿನ ವಾರ ಮತ್ತೊಮ್ಮೆ ಸಭೆ ನಡೆಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ತಹಸೀಲ್ದಾರ್ ಎಂ.ಎಸ್. ತನ್ಮಯ್ ತಾಪಂ ಇಒ ಷಣ್ಮುಖ, ಶಿಶು ಅಭಿವೃದ್ಧಿ ಅಧಿಕಾರಿ ಹೇಮಾವತಿ, ಲೋಕೋಪಯೋಗಿ ಇಲಾಖೆಯ ಎಇಇ ರವಿಕುಮಾರ್, ಬಿಇಒ ಸ್ವಾಮಿ, ಸಮಾಜಕಲ್ಯಾಣ ಇಲಾಖೆಯ ಮೋಹನ್ ಕುಮಾರ್, ಸರ್ಕಲ್ ಇನ್ಸ್‌ಪೆಕ್ಟರ್ ಜಯಕುಮಾರ್, ಪಶು ಸಂಗೋಪನ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಮಾದೇಶ್ ಕುಮಾರ್ ಸೇರಿದಂತೆ ಹಲವಾರು ಇಲಾಖೆಯ ಅಧಿಕಾರಿಗಳು ಇದ್ದರು.

ಚಾ.ನಗರದಲ್ಲಿ ಮಹಾವೀರ ಜಯಂತಿ ಸಂಭ್ರಮ

ಜೈನ ಬಸದಿಯಲ್ಲಿ ವಿಶೇಷ ಪೂಜೆ ● ಎಳನೀರು, ಹಾಲು, ಪಂಚಾಮೃತ ಅಭಿಷೇಕ ● ನಗರ ಬೀದಿಗಳಲ್ಲಿ ವಿಜೃಂಭಣೆಯ ಭವ್ಯ ಮೂರ್ತಿ ಮೆರವಣಿಗೆ



ಜೈನ ಸಮುದಾಯದ ಭಕ್ತರು, ಸ್ಥಳೀಯರು ಮೆರವಣಿಗೆಯಲ್ಲಿ ಭಾಗವಹಿಸಿ ಉತ್ಸವಕ್ಕೆ ಮೆರುಗು ನೀಡಿದರು.

ಚಾಮರಾಜನಗರ, ಮಾ.31– ನಗರದಲ್ಲಿ ಮಹಾವೀರ ಜಯಂತಿ ಅಂಗವಾಗಿ ಜೈನ ಸಮುದಾಯದಿಂದ ಭವ್ಯವಾಗಿ ಮೂರ್ತಿ ಮೆರವಣಿಗೆ ಹಾಗೂ ಪೂಜಾ ಕಾರ್ಯಕ್ರಮಗಳು ವಿಜೃಂಭಣೆಯಿಂದ ನೆರವೇರಿದವು. ನಗರದ ಜೈನ ಬಸದಿಯಲ್ಲಿ ಮಹಾವೀರರ ಜಯಂತಿಯನ್ನು ವಿಶೇಷ ರೀತಿಯಲ್ಲಿ ಆಚರಿಸಲಾಯಿತು.

ಬೆಳಿಗ್ಗೆಯಿಂದಲೇ ದೇವಸ್ಥಾನದಲ್ಲಿ ಭಕ್ತರ ಸಂಚಾರ ಹೆಚ್ಚಾಗಿದ್ದು, ಮಹಾವೀರರಿಗೆ ಎಳನೀರು, ಹಾಲು ಹಾಗೂ ಪಂಚಾಮೃತಗಳಿಂದ ಅಭಿಷೇಕ ನೆರವೇರಿಸಲಾಯಿತು. ನಂತರ ಮಹಾವೀರರ ಮೂರ್ತಿಯನ್ನು ವೈಭವವಾಗಿ ಅಲಂಕರಿಸಿ ಪೂಜೆ ಸಲ್ಲಿಸಲಾಯಿತು. ದೇವಸ್ಥಾನವು ಹೂವಿನ ಅಲಂಕಾರಗಳಿಂದ ಕಂಗೊಳಿಸಿತು.

ಸಂಜೆ ಸುಮಾರು 7.30 ಗಂಟೆಗೆ ಮಹಾವೀರ ಭವನದ ಸಮೀಪವಿರುವ ಜೈನ ಬಸದಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಮೂರ್ತಿಯ ಮೆರವಣಿಗೆಗೆ ಚಾಲನೆ ನೀಡಲಾಯಿತು. ಮೆರವಣಿಗೆ ನಗರದಲ್ಲಿನ ಪ್ರಮುಖ ಬೀದಿಗಳಾದ ಕೊಳದ ಗಣಪತಿ ಬೀದಿ, ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದ ಮುಂಭಾಗದ ರಸ್ತೆ, ಮಹಾಲಕ್ಷ್ಮಿ ಸ್ವೀಟ್ಸ್ ಮುಂಭಾಗ, ಅಗ್ರಹಾರ ಬೀದಿ, ಚಾಮರಾಜೇಶ್ವರ ದೇವಸ್ಥಾನದ ರಸ್ತೆ ಹಾಗೂ ರಥದ ಬೀದಿ ಮೂಲಕ ಸಾಗಿತು.

ಮೆರವಣಿಗೆಯ ವೇಳೆ ಭಕ್ತರು ಭಜನೆ, ಜಯಘೋಷಗಳ ಮೂಲಕ ಧಾರ್ಮಿಕ ಉತ್ಸಾಹ ವ್ಯಕ್ತಪಡಿಸಿದರು. ವಿವಿಧ ಅಲಂಕಾರಗಳೊಂದಿಗೆ ಸಾಗಿದ ಮೂರ್ತಿ ನಗರವಾಸಿಗಳ ಗಮನ ಸೆಳೆಯಿತು. ಈ ಸಂದರ್ಭದಲ್ಲಿ ಜೈನ ಸಮುದಾಯದ ಭಕ್ತರು, ಸ್ಥಳೀಯರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿ ಉತ್ಸವಕ್ಕೆ ಮೆರುಗು ನೀಡಿದರು. ಮೆರವಣಿಗೆ ಬಳಿಕ ಪ್ರಸಾದ ವಿತರಣೆ ಕಾರ್ಯಕ್ರಮವೂ ನೆರವೇರಿತು.

ಒಟ್ಟಾರೆ, ಚಾಮರಾಜನಗರದಲ್ಲಿ ಮಹಾವೀರ ಜಯಂತಿ ಭಕ್ತಿ, ಸಂಭ್ರಮ ಮತ್ತು ಸಾಂಸ್ಕೃತಿಕ ವೈಭವದೊಂದಿಗೆ ಆಚರಿಸಲ್ಪಟ್ಟಿತು.

ಜನಗಣತಿಯಲ್ಲಿ ನಿಖರ ಮಾಹಿತಿ ನಮೂದಿಸುವಂತೆ ಮನವಿ

ಚಾಮರಾಜನಗರ, ಮಾ.31– ಭಾರತದ ಜನಗಣತಿ 2027 ಅನ್ನು ಎರಡು ಹಂತಗಳಲ್ಲಿ ನಡೆಸಲಾಗುತ್ತಿದ್ದು, ಮೊದಲನೇ ಹಂತ ಕರ್ನಾಟಕದಲ್ಲಿ ಏ.16 ರಿಂದ ಮೇ 15 ರವರೆಗೆ ಮನೆಪಟ್ಟಿ, ಮನೆಗಣತಿ ಹಾಗೂ 2027ರ ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಜನಸಂಖ್ಯಾ ಗಣತಿ ನಡೆಸಲಾಗುತ್ತಿದ್ದು, ಸಾರ್ವಜನಿಕರು ಸ್ವಯಂ ಗಣತಿಗೆ ನಿಖರ ಮಾಹಿತಿ ನಮೂದಿಸುವಂತೆ ಜಿಲ್ಲಾಧಿಕಾರಿ ಶ್ರೀರೂಪ ತಿಳಿಸಿದ್ದಾರೆ.

ಮನೆಪಟ್ಟಿ ಮತ್ತು ಮನೆಗಣತಿ ಹಂತದಲ್ಲಿ ಕಟ್ಟಡಗಳು, ಜನಗಣತಿ ಮನೆಗಳು ಮತ್ತು ಕುಟುಂಬಗಳನ್ನು ಗುರುತಿಸಲಾಗುವುದು, ಮಾನವ ವಸಾಹತುಗಳ ಸ್ಥಿತಿ, ವಸತಿ ಕೊರತೆ ಇತ್ಯಾದಿಗಳನ್ನು ನಿರ್ಣಯಿಸಲು ಕುಟುಂಬಗಳಿಗೆ ಲಭ್ಯವಿರುವ ಸೌಲಭ್ಯಗಳ ಬಗ್ಗೆ ಕೆಲವು ಉಪಯುಕ್ತ ಮಾಹಿತಿಗಳನ್ನು ಸಹ ಸಂಗ್ರಹಿಸಲಾಗುತ್ತದೆ.

ಇದೇ ಮೊದಲ ಬಾರಿಗೆ ಸ್ವಯಂ ಗಣತಿಗಾಗಿ ಸರ್ಕಾರ ಅಭಿವೃದ್ಧಿಪಡಿಸಿರುವ ವೆಬ್ ಪೋರ್ಟಲ್ (http://se.census.gov.in) ಮೂಲಕ ಯಾವುದೇ ಒಂದು ಮನೆಯ ಸದಸ್ಯರು ಸುಮಾರು 20 ನಿಮಿಷಗಳಲ್ಲಿ ತಮ್ಮ ಮನೆಯ ಸಂಪೂರ್ಣ ವಿವರಗಳನ್ನು ಭರ್ತಿ ಮಾಡಬಹುದಾಗಿದೆ. ಏ.1 ರಿಂದ 15 ರವರೆಗೆ ಎಲ್ಲಾ ನಾಗರಿಕರು ಅಧಿಕೃತ ವೆಬ್‌ಸೈಟ್ ನಲ್ಲಿ ತಮ್ಮ ಹಾಗೂ ಕುಟುಂಬದ ವಿವರಗಳನ್ನು ಸರಳ ಮತ್ತು ಸುರಕ್ಷಿತವಾಗಿ ಭರ್ತಿ ಮಾಡಬಹುದು.

ಶಾಲೆಯಲ್ಲಿ ಗುರುವಂದನಾ, ಸ್ನೇಹ ಸಮ್ಮಿಲನ

ನಿಮ್ಮ ಮತ್ತು ನಿಮ್ಮ ಕುಟುಂಬದ ಭವಿಷ್ಯ ಉಜ್ವಲವಾಗಲಿ; ಜೋಸೆಫ್ ರಾಜು



ಗುರುಗಳಿಗೆ ನಮನ, ಸಿಆರ್‌ಬಿಪಿಗೆ ವಂದನಾ ಮತ್ತು ಸ್ನೇಹ ಸಮ್ಮಿಲನ ಕಾರ್ಯಕ್ರಮ.

ಚಾಮರಾಜನಗರ: ನಗರದ ರಾಮಸಮುದ್ರ ಕ್ರಿಸ್ತರಾಜ ಬಾಲರಪಟ್ಟಣ ವಿದ್ಯಾಸಂಸ್ಥೆಯ ಹಳೆಯ ವಿದ್ಯಾರ್ಥಿಗಳಿಂದ ಗುರುಗಳಿಗೆ ನಮನ, ಸಿಆರ್‌ಬಿಪಿಗೆ ವಂದನಾ ಮತ್ತು ಸ್ನೇಹ ಸಮ್ಮಿಲನ ಕಾರ್ಯಕ್ರಮ ಅರ್ಥಪೂರ್ಣವಾಗಿ ನಡೆಯಿತು.

23 ವರ್ಷಗಳ ಬಳಿಕ ವಿದ್ಯಾರ್ಥಿಗಳ ಸಮಾಗಮ, ಹಳೇ ದಿನಗಳ ಮೆಲುಕು, ಶಾಲಾ ಕ್ಷಣಗಳ ಸ್ಮರಣೆಯು ಭಾವ ಸ್ಪರ್ಶಿ ಕ್ಷಣಗಳಿಗೆ ಸಾಕ್ಷಿಯಾಯಿತು. 2003–2004 ನೇ ಸಾಲಿನ ಹತ್ತನೇ ತರಗತಿಯ ಹಳೆಯ ವಿದ್ಯಾರ್ಥಿಗಳು ಒಂದೆಡೆ ಸೇರಿ ಸಂಭ್ರಮದಲ್ಲಿ ಮಿಂದೆದ್ದರು.

ಶಾಲೆಗಳಲ್ಲಿ ವಿದ್ಯಾಭ್ಯಾಸ ಕಲಿತ ಅಂದಿನ ವಿದ್ಯಾರ್ಥಿಗಳು ಇದೀಗ ವಿವಿಧ ವೃತ್ತಿಯಲ್ಲಿ ಜೀವನವನ್ನು ಕಟ್ಟಿಕೊಂಡಿದ್ದಾರೆ ಇಂತಹ ಸಂದರ್ಭದಲ್ಲಿ ತಮಗೆ ಅಕ್ಷರ ಕಲಿಸಿದ ಗುರುಗಳಿಗೆ ಗೌರವ ಸಲ್ಲಿಸಲು ಇಂದು ಸಮ್ಮಿಲನಗೊಂಡಿದ್ದರು. ವಿವಿಧ ವಿಷಯಗಳ ಶಿಕ್ಷಕರಿಗೆ ಸನ್ಮಾನಿಸಿ ಕಲಿಕಾ ಋಣ ತೀರಿಸುವ ಕೆಲಸ ಮಾಡಿದರು. ಜತೆಗೆ, ಹಳೇ ಸಹಪಾಠಿಗಳೊಂದಿಗೆ ಹರಟೆ ಹೊಡೆದು ಶಾಲಾ ಜೀವನದ ಚಟುವಟಿಕೆಗಳನ್ನು ಸ್ಮರಿಸಿಕೊಂಡರು.

ನಿವೃತ್ತ ಮುಖ್ಯ ಶಿಕ್ಷಕರಾದ ಸುಜಯ್ ಕುಮಾರ್, ಸಹ ಶಿಕ್ಷಕರಾದ ಎನ್.ಎಸ್. ಪುಟ್ಟೀರಪ್ಪ, ಆರ್.ಪಿ.ನಿರಂಜನ್, ನಿರ್ಮಲ ಮೇರಿ, ಸರ್ವಮಂಗಳ, ಎಲೆಜಬಲ್ ಮರ್ಸಿ, ಸವಿತ, ನಾಗರಾಜು, ಪ್ರಾನ್ಸಿಸ್ ಬಾಬು, ನರಸಿಂಹಯ್ಯ, ಫಿಲೋಮಿನ, ಚಿನ್ನಯ್ಯ, ಲೂರ್ದ್ ಮೇರಿ, ನಟರಾಜು, ಯೋಸೆಫ್, ಜೋಸೆಫ್, ಸಿಂದಿಯಾ, ಶಿವನಂಜಯ್ಯ, ಮೂರ್ತಿ, ಲಕ್ಷ್ಮಯ್ಯ, ಸೆಲ್ವಮೇರಿ, ತೆರೆಸಾ ಪುಷ್ಪ, ಶಾಂತಿ, ಮೇರಿ, ಸಿಬ್ಬಂದಿ ಗಳಾದ. ಡ್ಯಾನಿಯಲ್, ನಾಗರಾಜು, ದೊರೆ ಅವರಿಗೆ ಗುರುವಂದನೆ ಸಲ್ಲಿಸಲಾಯಿತು.

ಬ್ರದರ್ ಜಾನ್ ಪೀಟರ್, ಬ್ರದರ್ ಚಾರ್ಲ್ಸ್ ಅವರು ಕಾರ್ಯಕ್ರಮ ಉದ್ಘಾಟಿಸಿ ಎಲ್ಲಾ ವಿದ್ಯಾರ್ಥಿಗಳು ಶುಭ ಕೋರಿದರು. ನಿವೃತ್ತ ಮುಖ್ಯಶಿಕ್ಷಕ ಜೋಸೆಫ್‌ರಾಜು, ನಿವೃತ್ತ ಮುಖ್ಯ ಶಿಕ್ಷಕ ಸುಜಯ್ ಕುಮಾರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಹಳೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ನಾಳೆ ನಗರದಲ್ಲಿ ಜಿಲ್ಲಾಮಟ್ಟದ K-GIS V 2.0 ಕಾರ್ಯಾಗಾರ

ಚಾಮರಾಜನಗರ, ಮಾ.31 – ಕರ್ನಾಟಕ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಇ–ಆಡಳಿತ) ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರವು (KSRSAC), ಕರ್ನಾಟಕ ಭೌಗೋಳಿಕ ಮಾಹಿತಿ ವ್ಯವಸ್ಥೆ ಆವೃತ್ತಿ 2.0 (K-GIS V 2.0) ಅನ್ನು ಅನುಷ್ಠಾನಗೊಳಿಸುವ ಸಂಬಂಧ ಏ.2ರಂದು ಬೆಳಿಗ್ಗೆ 10 ಗಂಟೆಗೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ಹಳೆ ಕೆ.ಡಿ.ಪಿ ಸಭಾಂಗಣದಲ್ಲಿ ಜಿಲ್ಲಾಮಟ್ಟದ K-GIS V 2.0 ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ವಾಹನ ಡಿಕ್ಕಿ: ವೃದ್ಧ ಸಾವು

ಕೊಳ್ಳೇಗಾಲ: ತಾಲೂಕಿನ ಹಂಪಾಪುರ ಗ್ರಾಮದ ಬೈಪಾಸ್ ರಸ್ತೆಯಲ್ಲಿ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ನಡೆದುಕೊಂಡು ಹೋಗುತ್ತಿದ್ದ ವೃದ್ಧ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಮಧುವನಹಳ್ಳಿ ಗ್ರಾಮದ ಗುರುಸಿದ್ಧಶೆಟ್ಟಿ(70) ಎಂಬಾತ ಮೃತಪಟ್ಟವರು ಎನ್ನಲಾಗಿದೆ.

ಇವರು ತಮ್ಮ ನಾದಿನಿ ಮನೆ ಬಸವನಪುರಕ್ಕೆ ಹೋಗುತ್ತಿದ್ದಾಗ ಯಾವುದೋ ವಾಹನವೊಂದು ಹಂಪಾಪುರ ರಸ್ತೆಯಲ್ಲಿ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಂಡ್ಯ ಜಿಲ್ಲೆಯ ವ್ಯಕ್ತಿ ಆತ್ಮಹತ್ಯೆ



ಚಾಮರಾಜನಗರ: ಜೀವನದಲ್ಲಿ ಜಿಗುಪ್ಸೆಗೊಂಡು ವ್ಯಕ್ತಿಯೊಬ್ಬರು ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಬೆಂಡರವಾಡಿ ತಾವರೆ ಕೆರೆಯಲ್ಲಿ ಮಂಗಳವಾರ ನಡೆದಿದೆ.

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಮಾಗನೂರು ಗ್ರಾಮದ ಮಲ್ಲಿಕಾರ್ಜುನ (39) ಮೃತಪಟ್ಟವರು. ಬೆಳಗ್ಗೆ 8 ಗಂಟೆಯಲ್ಲಿ ಬೈಕು, ಚಪ್ಪಲಿಯನ್ನು ದಡದಲ್ಲಿ ಬಿಟ್ಟು ಕೆರೆಗೆ ಹಾರಿದ್ದು ಈ ವಿಚಾರ ಪೊಲೀಸರಿಗೆ ಗೊತ್ತಾಗಿ ಸ್ಥಳಕ್ಕೆ ಭೇಟಿ ನೀಡಿ ತನಿಖೆ ಮುಂದುವರೆಸಿದ್ದಾರೆ.

ನಗರಸಭೆ ಹಳೇ ಕಟ್ಟಡದ ಮೇಲ್ಭಾಗಕ್ಕೆ ಬೆಂಕಿ



ಕೊಳ್ಳೇಗಾಲ, ಮಾ.31– ಪಟ್ಟಣದ ಹಳೇ ನಗರಸಭೆ ಕಟ್ಟಡದ ಮೇಲ್ಭಾಗದಲ್ಲಿ ಬೆಂಕಿ ಕಾಣಿಸಿಕೊಂಡ ಘಟನೆ ಸೋಮವಾರ ಸಂಜೆ ಜರುಗಿದೆ. ಕಟ್ಟಡದ ಮೇಲ್ಭಾಗದಲ್ಲಿ ಬಿದ್ದಿದ್ದ ಮರದ ಎಲೆಗಳು ಹಾಗೂ ಪುಂಡರು ಬಿಸಾಡಿದ್ದ ತ್ಯಾಜ್ಯಗಳಿಗೆ ಯಾರೋ ಕಿಡಿಗೇಡಿ ಬೆಂಕಿ ಹಾಕಿದ್ದರಿಂದ ಬೆಂಕಿ ಹೊತ್ತಿ ಉರಿದಿದ್ದು ಕೆಲ ಕಾಲ ಆತಂಕ ಸಹಾ ಸೃಷ್ಟಿಯಾಗಿತ್ತು.

ಮಾಹಿತಿ ತಿಳಿದು ಆಗಮಿಸಿದ್ದ ನಗರಸಭೆ ವಾಹನ ಚಾಲಕ ಸಂದೀಪ್ ಕುಮಾರ್, ಯುಜಿಡಿ ರಾಜು, ಪ್ರಶಾಂತ್ ಸೇರಿದಂತೆ ಇನ್ನಿತರರು ಬೆಂಕಿ ನಂದಿಸಲು ಮುಂದಾದರು ಬೆಂಕಿ ಹೆಚ್ಚಾದ್ದರಿಂದ ತಕ್ಷಣ ಸ್ಥಳಕ್ಕೆ ಅಗ್ನಿಶಾಮಕ ದಳದವರಿಗೆ ಕರೆ ಮಾಡಿದ ಹಿನ್ನೆಲೆ ಠಾಣಾಧಿಕಾರಿ ಸಿದ್ದಾರ್ಥ, ಸಿಬ್ಬಂದಿಗಳು ಕಂದಸ್ವಾಮಿ, ಮಹೇಶ್ ಕುಮಾರ್, ಪ್ರದೀಪ್, ಅಮರೇಶ್ ಇನ್ನಿತರರು ಆಗಮಿಸಿ ಬೆಂಕಿ ನಂದಿಸಿ ಮುಂದಾಗಬಹುದಾದ ಭಾರೀ ಅನಾಹುತ ತಪ್ಪಿಸಿದರು.

ಸ್ಥಳಕ್ಕೆ ಸಿಬ್ಬಂದಿಗಳ ಜೊತೆ ಆಗಮಿಸಿದ್ದ ಪೌರಾಯುಕ್ತರು ರುದ್ರಮ್ಮ ಶರಣಯ್ಯ ಆಗಮಿಸಿ ಯಾರೋ ಕಿಡಿಗೇಡಿಗಳು ಬೆಂಕಿ ಹಾಕಿದ್ದರಿಂದ ಈ ಘಟನೆ ನಡೆದಿದ್ದು ತಕ್ಷಣ ಅಗ್ನಿ ಶಾಮಕ ದಳದವರು ಆಗಮಿಸಿದ್ದರಿಂದ ಯಾವುದೆ ಅಪಾಯ ಹಾನಿಯಾಗಿಲ್ಲ ಎಂದು ಸ್ಪಷ್ಟಪಡಿಸಿದರು

ಜೂಜಾಟದ ಮೇಲೆ ದಾಳಿ: 12 ಸಾವಿರ ಹಣ ವಶ

ಕೊಳ್ಳೇಗಾಲ, ಮಾ.31– ತಾಲೂಕಿನ ತೇರಂಬಳ್ಳಿ ಗ್ರಾಮದಲ್ಲಿ ಅಕ್ರಮ ಜೂಜಾಡುತ್ತಿದ್ದ ಹತ್ತು ಮಂದಿ ಮೇಲೆ ಪ್ರಕರಣ ದಾಖಲಿಸಿರುವ ಅಗರ ಮಾಂಬಳ್ಳಿ ಪೊಲೀಸರು ಆರೋಪಿಗಳನ್ನು ಬಂಧಿಸಿ, ಪಣಕ್ಕಿಟ್ಟಿದ್ದ 12.360 ರೂ.ನ್ನು ಜಪ್ತಿ ಮಾಡಿದ್ದಾರೆ.

ಬಂಧಿತರು ತೇರಂಬಳ್ಳಿ ಗ್ರಾಮದ ಸಂಜಯ್, ಲೋಕೇಶ್, ಮಧು, ಗಿರಿಧರ್, ನಾಗರಾಜು, ಸೋಮಶೇಖರ್, ರವಿ, ಮಧು, ಬಸಪ್ಪ, ನಾಗೇಶ್ ಎನ್ನಲಾಗಿದೆ.

ಈ ಸಂಬಂಧ ಅಗರ ಮಾಂಬಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು, ನೋಟೀಸ್ ನೀಡಿ ಜಾಮೀನಿನ ಮೇಲೆ ಬಿಡುಗಡೆ ಮಾಡಿದರು. ದಾಳಿಯಲ್ಲಿ ಅಗರ ಮಾಂಬಳ್ಳಿ ಪೊಲೀಸ್ ಠಾಣೆಯ ಪಿಎಸ್‌ಐ ಕರಿಬಸಪ್ಪ, ಹೆಡ್ ಕಾನ್ಸಟೇಬಲ್ ಪರಶಿವ, ಮಾದೇಶ್, ಕಾನ್ಸಟೇಬಲ್ ಶ್ರೀಶೈಲ, ಪರಮೇಶ್, ಹಂಪಸಾಗರ್ ಇದ್ದರು.

ಸೆಸ್ಕ್ ಎಂಡಿ ಕೆ.ಎಂ.ಮುನಿಗೋಪಾಲ ರಾಜು ನಿವೃತ್ತಿ; ಅಭಿನಂದನೆ ಮೂಲಕ ಬೀಳ್ಕೊಟ್ಟ ಸಿಬ್ಬಂದಿ ವರ್ಗ



ಮೈಸೂರಿನ ವಿಜಯನಗರದಲ್ಲಿರುವ ಸೆಸ್ಕ್ ಕಚೇರಿಯಲ್ಲಿ ಮಂಗಳವಾರ ನಿವೃತ್ತರಾದ ಸೆಸ್ಕ್ ಎಂಡಿ ಕೆ.ಎಂ.ಮುನಿಗೋಪಾಲ ರಾಜು ಅವರನ್ನು ಆತ್ಮೀಯವಾಗಿ ಸನ್ಮಾನಿಸಿ, ಬೀಳ್ಕೊಡಲಾಯಿತು.

ಮೈಸೂರು, ಮಾ.31(ಎಂಟಿವೈ)– ಸೇವೆಯಿಂದ ನಿವೃತ್ತಿ ಹೊಂದಿದ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್) ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ ರಾಜು ಅವರಿಗೆ ಮಂಗಳವಾರ ಆತ್ಮೀಯವಾಗಿ ಬೀಳ್ಕೊಡಲಾಯಿತು.

ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಸೆಸ್ಕ್ ಪ್ರಧಾನ ಕಚೇರಿಯಲ್ಲಿ ನಡೆದ ಬೀಳ್ಕೊಡುಗೆ ಸಮಾರಂಭದಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಹಿರಿಯ ಹಾಗೂ ಕಿರಿಯ ಅಧಿಕಾರಿಗಳು ಮತ್ತು ಸಿಬ್ಬಂದಿ, ಕೆ.ಎಂ. ಮುನಿಗೋಪಾಲ ರಾಜು ಅವರನ್ನು ಆತ್ಮೀಯವಾಗಿ ಅಭಿನಂದಿಸಿ ಬೀಳ್ಕೊಟ್ಟರು.

ಈ ವೇಳೆ ನಿಗಮದ ಅಧಿಕಾರಿಗಳು ಮಾತನಾಡಿ, ಎಂಡಿಯಾಗಿದ್ದ ಕೆ.ಎಂ.ಮುನಿಗೋಪಾಲ ರಾಜು ಅವರ ನಾಯಕತ್ವ, ಕಾರ್ಯವೈಖರಿ ಮತ್ತು ಸ್ನೇಹಪರ ವ್ಯಕ್ತಿತ್ವವನ್ನು ಸ್ಮರಿಸಿ, ಅವರ ನಿವೃತ್ತಿ ಜೀವನ ಸುಖಕರವಾಗಿರಲಿ ಎಂದು ಶುಭ ಕೋರಿದರು.

ಇದೇ ಸಂದರ್ಭದಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಅಧ್ಯಕ್ಷರೂ ಆಗಿರುವ ಶಾಸಕ ಎ.ಬಿ.ರಮೇಶ್ ಬಂಡಿಸಿದ್ದೇಗೌಡ ಮಾತನಾಡಿ, ಕೆ.ಎಂ. ಮುನಿಗೋಪಾಲ ರಾಜು ಅವರದ್ದು ಬಂಡೆಯಂತಹ ವ್ಯಕ್ತಿತ್ವ, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು, ಯಾರನ್ನೂ ನೋಯಿಸದೆ, ಅಗೌರವದಿಂದ ಕಾಣದೆ ಕಾರ್ಯ ನಿರ್ವಹಿಸುವ ಗುಣ ಹೊಂದಿದ್ದರು. ಯಾವುದೇ ಯೋಜನೆಗಳ ಅನುಷ್ಠಾನ ಮತ್ತು ನಿರ್ಧಾರಗಳಲ್ಲಿ ದೃಢ ನಿಲುವು ತಾಳುತ್ತಿದ್ದರು. ಜವಾಬ್ದಾರಿಯುತ ವ್ಯಕ್ತಿಯಾಗಿ ಮಾರ್ಗದರ್ಶನ ನೀಡಿದವರು ಎಂದರು. ಅವರ ನಿವೃತ್ತಿ ಜೀವನ ಸುಖಕರವಾಗಿರಲಿ ಎಂದು ಹಾರೈಸಿದರು.

ಕಾರ್ಯಕ್ರಮದಲ್ಲಿ ತಾಂತ್ರಿಕ ನಿರ್ದೇಶಕ ಡಿ.ಜೆ. ದಿವಾಕರ್, ಅಧಿಕಾರಿಗಳಾದ ಎಲ್.ಲೋಕೇಶ್, ಜಿ. ರೇಣುಕಾ, ಶರಣಮ್ಮ ಜಂಗಿನ್, ಲಿಂಗರಾಜಮ್ಮ, ಬಿ.ಆರ್. ರೂಪ, ಸುನೀಲ್ ಕುಮಾರ್, ಸೋಮಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ಎಲ್ಲರ ಸಹಕಾರದಿಂದ ಯಶಸ್ಸು ಸಿಕ್ಕಿದೆ

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಕೆ.ಎಂ. ಮುನಿಗೋಪಾಲ ರಾಜು, ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕರಾಗಿ ಕೆಲಸ ಮಾಡಲು ಎಲ್ಲರಿಂದಲೂ ಉತ್ತಮ ಸಹಕಾರ ಲಭಿಸಿದೆ. ನಿಗಮದ ಅಧ್ಯಕ್ಷರು ಎಲ್ಲಾ ಹಂತದಲ್ಲೂ ಕೈಜೋಡಿಸಿದರು. ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ನಿಗಮದ ಕಚೇರಿಯಲ್ಲಿ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿ ಅತ್ಯುತ್ತಮವಾಗಿ ಕೆಲಸ ಮಾಡಿದ್ದಾರೆ. ತಮ್ಮ ವೃತ್ತಿ ಜೀವನದ ಯಶಸ್ಸಿನಲ್ಲಿ ಹಲವರ ಸಹಕಾರವಿದ್ದು, ಎಲ್ಲರೂ ಒಗ್ಗೂಡಿ ಕೆಲಸ ಮಾಡಿದ ಪರಿಣಾಮ ದೊಡ್ಡಮಟ್ಟದ ಯಶಸ್ಸು ದೊರೆತಿದೆ ಎಂದು ಹೇಳಿ, ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು.

ಎಂ.ಎಸ್.ಅರ್ಚನ ಸೆಸ್ಕ್ ನೂತನ ಎಂಡಿ



ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್) ವ್ಯವಸ್ಥಾಪಕ ನಿರ್ದೇಶಕರಾಗಿ ಐಎಎಸ್ ಅಧಿಕಾರಿ ಎಂ.ಎಸ್. ಅರ್ಚನಾ ಅವರನ್ನು ಸರ್ಕಾರ ನೇಮಕ ಮಾಡಿದೆ. ಕೆ.ಎಂ.ಮುನಿಗೋಪಾಲರಾಜು ಅವರು ಇಂದು ನಿವೃತ್ತರಾದ ಹಿನ್ನೆಲೆಯಲ್ಲಿ, ರಾಜ್ಯ ಸರ್ಕಾರ ಬೆಂಗಳೂರು ನಗರ ಜಿಲ್ಲೆ(ಉತ್ತರ) ವಿಶೇಷ ಉಪ ಆಯುಕ್ತರಾಗಿ ಕಾರ್ಯನಿರ್ವಹಿಸುತ್ತಿದ್ದ ಎಂ.ಎಸ್.ಅರ್ಚನಾ ಅವರನ್ನು ಸೆಸ್ಕ್ ಎಂಡಿಯಾಗಿ ನೇಮಿಸಿದೆ.

ನಿವೃತ್ತ ಸೆಸ್ಕ್ ಎಂಡಿ ಮುನಿಗೋಪಾಲ ರಾಜುಗೆ ಆತ್ಮೀಯ ಬೀಳ್ಕೊಡುಗೆ



ಸೆಸ್ಕ್ ವತಿಯಿಂದ ನಿವೃತ್ತ ಎಂಡಿ ಕೆ.ಎಂ.ಮುನಿಗೋಪಾಲ ರಾಜು ಅವರನ್ನು, ಅವರ ಪತ್ನಿ ಹೇಮಲತಾ ಅವರೊಂದಿಗೆ ಅಭಿನಂದಿಸಲಾಯಿತು. ಈ ವೇಳೆ ಶಾಸಕ ರಮೇಶ್ ಬಂಡಿಸಿದ್ದೇಗೌಡ, ಡಿಸಿಪಿ ಸುಂದರ್ ರಾಜ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಮೈಸೂರು, ಮಾ.31(ವಿವಿಹೆಚ್)– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್)ದ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎಂ. ಮುನಿಗೋಪಾಲ ರಾಜು ಸೇವೆಯಿಂದ ನಿವೃತ್ತಿ ಹೊಂದಿದ್ದು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಮಂಗಳವಾರ ನಡೆದ ಬೀಳ್ಕೊಡುಗೆ ಸಮಾರಂಭದಲ್ಲಿ ನಿಗಮದ ವತಿಯಿಂದ ಅವರನ್ನು ಆತ್ಮೀಯವಾಗಿ ಬೀಳ್ಕೊಡಲಾಯಿತು.

ಈ ವೇಳೆ ಶ್ರೀರಂಗಪಟ್ಟಣ ಶಾಸಕರೂ ಆದ ಸೆಸ್ಕ್ ಅಧ್ಯಕ್ಷ ಎ.ಬಿ.ರಮೇಶ್ ಬಂಡಿಸಿದ್ದೇಗೌಡ ಮಾತನಾಡಿ, ಸ್ಥಾನ ಮಾನ ಮುಖ್ಯವಲ್ಲ. ಮಾಡಿದ ಕೆಲಸ, ಉಳಿದ ನೆನಪುಗಳಷ್ಟೇ ಶಾಶ್ವತವಾಗಿದ್ದು ಇದಕ್ಕೆ ಮುನಿಗೋಪಾಲ ರಾಜು ಸಾಕ್ಷಿ ಎಂದು ಶ್ಲಾಘನೆ ವ್ಯಕ್ತಪಡಿಸಿದರು.

ರಾಜು ಅವರು ಬಂಡೆಯಂತಹ ವ್ಯಕ್ತಿತ್ವ ಹೊಂದಿದ್ದು, ಕೆಲಸದ ವಿಚಾರದಲ್ಲಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು, ಕಾರ್ಯನಿರ್ವಹಿಸುವ ಗುಣ ಹೊಂದಿದ್ದರು. ಯಾವುದೇ ಯೋಜನೆಗಳ ಅನುಷ್ಠಾನ ಮತ್ತು ನಿರ್ಧಾರಗಳಲ್ಲಿ ದೃಢ ನಿಲುವು ತಾಳುತ್ತಿದ್ದ ಜವಾಬ್ದಾರಿಯುತ ವ್ಯಕ್ತಿ. ಸೆಸ್ಕ್ ಎಲ್ಲಾ ವಿಭಾಗದಲ್ಲಿಯೂ ಉತ್ತಮ ಕಾರ್ಯಸಾಧನೆ ಮಾಡಲು ರಾಜು ಅವರ ಪಾಲು ಬಹುಮುಖ್ಯವಾಗಿದೆ ಎಂದರು.

ಬದುಕು ಕಟ್ಟಿಕೊಳ್ಳಲು ಕೆಲಸ ಅರಸುವವರ ಮಧ್ಯೆ, ಸಮಾಜಮುಖಿ ಕೆಲಸಗಳನ್ನು ಮಾಡಲು, ಜೀವನದಲ್ಲಿ ಧ್ಯೇಯೋದ್ದೇಶ ಇಟ್ಟುಕೊಂಡು ಅದರ ಕಾರ್ಯಸಾಧನೆಗಾಗಿ ದುಡಿದ ಕೆಲವರಲ್ಲಿ ಇವರೂ ಒಬ್ಬರು. ನಿವೃತ್ತಿ ಬಳಿಕ ಸೆಸ್ಕ್ ಕುಟುಂಬದಿಂದ ವೈಯಕ್ತಿಕ ಕುಟುಂಬಕ್ಕೆ ಕಾಲಿಡುತ್ತಿದ್ದಾರೆ. ಅವರಿಗೆ ಶುಭವಾಗಲಿ ಎಂದರು.

ಕೆ.ಎಂ. ಮುನಿಗೋಪಾಲ ರಾಜು ಮಾತನಾಡಿ, ಮನೆ, ಕಚೇರಿ ಎರಡೂ ಕಡೆಗಳಿಂದಲೂ ಉತ್ತಮ ಬೆಂಬಲ ದೊರೆತ ಕಾರಣ ಇಲಾಖೆಯಲ್ಲಿ ಉತ್ತಮ ಕೆಲಸಗಳನ್ನು ಮಾಡಲು ನೆರವಾಯಿತು. ಇಂದಿನ ಎಲ್ಲಾ ಪ್ರಗತಿಗೆ ಈ ಎರಡೂ ಕಡೆಯ ಸಹಕಾರವೇ ಪ್ರಮುಖ ಕಾರಣ ಎಂದು ತಿಳಿಸಿದರು.

ಬಂಡಿಸಿದ್ದೇಗೌಡರು ಈ ಅವಧಿಯಲ್ಲಿ 100 ಕೋಟಿಗೂ ಅಧಿಕ ಹಣವನ್ನು ಇಲಾಖೆಗೆ ತಂದಿದ್ದರ ಪರಿಣಾಮ ಇಲಾಖೆಯಲ್ಲಿ ಹಲವು ಪ್ರಗತಿ ಕಾರ್ಯಗಳು ನಡೆದಿವೆ. ಚಾಮರಾಜನಗರದ ಹಾಡಿಗಳಿಗೆ ಕಂಬಗಳ ಮೂಲಕ ವಿದ್ಯುತ್ ನೀಡಲು ಮೂಲ ಕಾರಣ ಇವರು ಎಂದರು.

ನಾನು ಹಾಗೂ ಬಂಡಿಸಿದ್ದೇಗೌಡರು ಕಾಲೇಜು ಹಂತದಲ್ಲಿ ಕ್ಲಾಸ್‌ಮೇಟ್‌ಗಳು. ನಾವು ಮುಂದಿನ ಬೆಂಚಿನಲ್ಲಿ ಕುಳಿತು ಅಧಿಕಾರಿಗಳಾದೆವು. ಅವರು ಬ್ಯಾಕ್ ಬೆಂಚ್‌ನಲ್ಲಿ ಕುಳಿತಿದ್ದಕ್ಕಾಗಿಯೇನೋ ಅವರು ಶಾಸಕರಾದರು ಎಂದು ನಗೆ ಚಟಾಕಿ ಹಾರಿಸಿದರು.

ಕಾರ್ಯಕ್ರಮದಲ್ಲಿ ನೌಕರರ ಸಂಘದ ಅಧ್ಯಕ್ಷ ಸಂದೀಪ್, ಗುತ್ತಿಗೆದಾರ ಸಂಘದ ಅಧ್ಯಕ್ಷ ರಮೇಶ್, ಉಪಾಧ್ಯಕ್ಷ ರಘು, ನಿಕಟಪೂರ್ವ ವ್ಯವಸ್ಥಾಪಕ ನಿರ್ದೇಶಕರಾದ ಶೀಲಾ, ಡಿಸಿಪಿ (ಅಪರಾಧ ವಿಭಾಗ) ಸುಂದರ್ ರಾಜ್, ರೈತ ಸಂಘದ ಭಾಗ್ಯರಾಜ್, ಹಿರಿಯ ಪತ್ರಕರ್ತ ಟಿ.ಗುರುರಾಜ್, ಮುನಿಗೋಪಾಲ ರಾಜು ತಾಯಿ ಮುನಿ ವೆಂಕಟಮ್ಮ, ಪತ್ನಿ ಹೇಮಲತಾ, ಮಕ್ಕಳಾದ ಸುಪ್ರಿತ್ ಹಾಗೂ ರೋಹಿತ್ ಮತ್ತಿತರು ಉಪಸ್ಥಿತರಿದ್ದರು.

ಪವರ್ ಸ್ಟಾರ್ ಪುನೀತ್ ರಾಜಕುಮಾರ್ ಪ್ರಶಸ್ತಿ ಪ್ರದಾನ...



ಕರುನಾಡ ಕಲಾ ಸಾಮ್ರಾಜ್ಯ ಸೇವಾ ಸಂಘದ ವತಿಯಿಂದ ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಆಯೋಜಿಸಿದ್ದ ಡಾ.ಪವರ್ ಸ್ಟಾರ್ ಪುನೀತ್ ರಾಜಕುಮಾರ್ ಪ್ರಶಸ್ತಿ ಪ್ರದಾನ ಸಮಾರಂಭ–2026 ಹಾಗೂ ಬಣ್ಣದ ಗುಡಿಯಲ್ಲಿ ಬೆಳಕಿನ ಸಂಜೆ ಕಾರ್ಯಕ್ರಮವನ್ನು ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಭಾಗವಹಿಸಿ ಜ್ಯೋತಿ ಬೆಳಗುವ ಮೂಲಕ ಉದ್ಘಾಟಿಸಿದರು. ಈ ವೇಳೆ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಚಲನಚಿತ್ರ ಹಿನ್ನೆಲೆ ಗಾಯಕ ಶಶಿ ಆರಕ್ಷಕ್, ಅಧ್ಯಕ್ಷ ಸಿ.ಸುರೇಶ್, ಸಿ.ವಿಷ್ಣು ಪ್ರಸಾದ್, ನವೀನ್, ಪಿ.ಸಿದ್ದರಾಜು, ರೇಣುಕಾ ಆರಾಧ್ಯ, ವೈಗೋಪಾಲ್, ಕುಮಾರ್, ಶಿಲ್ಪಾ ಮತ್ತಿತರರು ಉಪಸ್ಥಿತರಿದ್ದರು.

ಮಹಿಳೆಯರಿಗೆ ಸಮಾನ ಅವಕಾಶ ಸಿಕ್ಕಾಗ ಸಮ ಸಮಾಜ ನಿರ್ಮಾಣವಾಗುತ್ತದೆ

ಕಾವಾ ಆಡಳಿತಧಿಕಾರಿ ನಿರ್ಮಲ ಮಠಪತಿ ಅಭಿಮತ



ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಾಲಾದೇವಿ ಹಾಗೂ ಡಾ. ಸಬಿಕೆ ನೂಬಿಯಾ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಮಾ.31(ವಿವಿಹೆಚ್)– ಮಹಿಳೆಯರಿಗೆ ಗುಣಮಟ್ಟದ ಶಿಕ್ಷಣ, ಸಮಾನ ಅವಕಾಶ ನೀಡಿದಾಗ ಮಾತ್ರ ಸಮ ಸಮಾಜ ನಿರ್ಮಾಣವಾಗುತ್ತದೆ ಎಂದು ಕಾವಾ ಕಾಲೇಜಿನ ಆಡಳಿತಾಧಿಕಾರಿ ನಿರ್ಮಲ ಮಠಪತಿ ಹೇಳಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಷನ್ಸ್ ಆಫ್ ಇಂಜಿನಿಯರ್ಸ್ ಸಂಭಾಗಣದಲ್ಲಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್, ಮೈಸೂರು ಲೋಕಲ್ ಸೆಂಟರ್, ಶ್ರೀ ಸೂತ್ರ ಆಯುರ್ಧಾಮ ಹಾಗೂ ಮೈಸೂರಿನ ಇನ್ನರ್ ವ್ಹೀಲ್ ಕ್ಲಬ್ ಸಹಯೋಗದಲ್ಲಿ ಮಂಗಳವಾರ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಯರನ್ನು ಶಕ್ತಿ ಸ್ವರೂಪಿಣಿಯಾಗಿ ಕಾಣಲಾಗುತ್ತದೆ. ಮಹಿಳೆಯರ ಶಕ್ತಿ ಸಮಾಜ ಮತ್ತು ದೇಶದ ಅಭಿವೃದ್ಧಿಗೆ ಮೂಲ ಸ್ತಂಭವಾಗಿದೆ ಎಂದು ಅಭಿಪ್ರಾಯಿಸಿದರು.

ಮಹಿಳೆಯನ್ನು ಕೇವಲ ಮನೆ ಕೆಲಸ, ಕುಟುಂಬ ನಿರ್ವಹಣೆಗಾಗಿ ಮಾತ್ರವೇ ಸೀಮಿತ ಎಂದು ನೋಡುವ ದೃಷ್ಟಿಕೋನ ಬದಲಾಗಬೇಕಿದೆ. ಆಕೆ ಒಬ್ಬ ತಾಯಿಯಾಗಿ, ಶಿಕ್ಷಕಿ, ವೈದ್ಯೆ, ಉದ್ಯಮಿ ಸೇರಿದಂತೆ ಎಲ್ಲಾ ರಂಗವನ್ನೂ ಸಮರ್ಥವಾಗಿ ನಿಭಾಯಿಸಬಲ್ಲ ಸಾಮರ್ಥ್ಯವನ್ನು ಹೊಂದಿದ್ದಾಳೆ. ಆಕೆ ಸಮಾಜದಲ್ಲಿ ಮತ್ತಷ್ಟು ಕೆಲಸಗಳನ್ನು ಮಾಡಲು ಸಮಾಜದಿಂದ ಅವಕಾಶ ಮತ್ತು ಪ್ರೋತ್ಸಾಹ ಸಿಗಬೇಕಾಗಿದೆ ಎಂದು ತಿಳಿಸಿದರು.

ಮಹಿಳಾ ದಿನವನ್ನು ಕೇವಲ ಆಚರಣೆಗಷ್ಟೇ ಸೀಮಿತವಾಗಿರಿಸದೇ, ಆಕೆಯ ಹಕ್ಕುಗಳು, ಗೌರವ ಮತ್ತು ಸಮಾಜದಲ್ಲಿನ ಸಮಾನತೆಗಾಗಿ ಹೋರಾಡುವ ಸಂಕಲ್ಪ ಮಾಡುವ ದಿನವಾಗಿ ಇದನ್ನು ಪ್ರೇರೇಪಿಸಬೇಕು ಎಂದು ತಿಳಿಸಿದರು.

ಈ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಾಲಾದೇವಿ ಹಾಗೂ ಡಾ. ಸಬಿಕೆ ನೂಬಿಯಾ ಅವರನ್ನು ಸನ್ಮಾನಿಸಲಾಯಿತು.

ಡಾ.ಜೆ.ವಿ.ಆದಿತ್ಯ, ಐಇಐ ಅಧ್ಯಕ್ಷ ಎಚ್.ಎಸ್.ಸುರೇಶ್ ಬಾಬು, ಇನ್ನರ್ ವ್ಹೀಲ್ ಕ್ಲಬ್ ಸಂಚಾಲಕಿ ಶೈಲಜಾ, ಕೆ.ಎ.ಅನಿತಾ ವೆಂಕಟೇಶ್, ಐಇಐ ಕಾರ್ಯದರ್ಶಿ ಎಂ.ಕೆ. ನಂಜಯ್ಯ ಇತರರು ಉಪಸ್ಥಿತರಿದ್ದರು.

ಗೆಲುವು ಸುಲಭವಾಗಿ ಸಿಗದು; ಸೋಲಿನ ಕಹಿ, ಗೆಲುವಿನ ಸಿಹಿ ಹೇಗಿರಲಿದೆ ಎಂಬುದ ಆರ್‌ಸಿಬಿ ಅಭಿಮಾನಿಗಳಿಂದ ತಿಳಿಯಿರಿ

ಕ್ರೀಡಾಪಟುಗಳಿಗೆ ಅಂತಾರಾಷ್ಟ್ರೀಯ ಮಾಜಿ ಕ್ರಿಕೆಟಿಗ ದಿನೇಶ್ ಕಾರ್ತಿಕ್ ಕಿವಿಮಾತು



ಚೆನ್ನೈಸ್ ಅಮಿತಾರ್ ಗ್ರೂಪ್‌ನ ಏಳನೇ ವರ್ಷದ ಕ್ರೀಡಾಕೂಟದ ಕಬಡ್ಡಿ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಪಡೆದ ಬೆಂಗಳೂರು ವಿಭಾಗದ ಮಹಿಳಾ ತಂಡಕ್ಕೆ ದಿನೇಶ್ ಕಾರ್ತಿಕ್ ಟ್ರೋಫಿ ವಿತರಿಸಿದರು.

ಬೆಂಗಳೂರು,ಮಾ.31–ಸತತ 17 ವರ್ಷಗಳ ಹೋರಾಟದಿಂದ ಆರ್‌ಸಿಬಿ ತಂಡ ಐಪಿಎಲ್ ಟ್ರೋಫಿ ಮುಡಿಗೇರಿಸಿಕೊಂಡಿದ್ದನ್ನು ಉದಾಹರಿಸುವ ಮೂಲಕ ಗೆಲುವು ಸುಲಭವಾಗಿ ದಕ್ಕುವುದಿಲ್ಲ ಎಂಬುದನ್ನು ಕ್ರಿಕೆಟ್ ತರಬೇತುದಾರ, ಭಾರತ ತಂಡದ ಮಾಜಿ ಬ್ಯಾಟರ್ ದಿನೇಶ್ ಕಾರ್ತಿಕ್ ಕಿವಿಮಾತು ಹೇಳಿದರು.

ನೆಹರೂ ಸ್ಟೇಡಿಯಂನಲ್ಲಿ ನಡೆದ ಚೆನ್ನೈಸ್ ಅಮಿತಾರ್ ಗ್ರೂಪ್‌ನ ಏಳನೇ ವರ್ಷದ ಕ್ರೀಡಾಕೂಟದ ವಿಜೇತರಿಗೆ ಬಹುಮಾನ ವಿತರಿಸಿ ಮಾತನಾಡಿದ ಅವರು, ನಿರಂತರ ಪರಿಶ್ರಮವಿದ್ದರೆ ಮಾತ್ರ ಗೆಲುವು ಸಾಧ್ಯ ಎಂದರು.

ಗೆಲುವು ಅನ್ನೋದು ಅಷ್ಟು ಸುಲಭವಾಗಿ ಸಿಗುವಂಥದ್ದಲ್ಲ, ಅದನ್ನು ಪಡೆಯಲು ಸತತ ಹೋರಾಟ, ಪರಿಶ್ರಮ ಬೇಕು. ಸೋಲಿನ ನೋವು ಹಾಗೂ ಗೆಲುವಿನ ಖುಷಿ ಹೇಗಿರುತ್ತದೆ ಎಂಬುದನ್ನು ಆರ್‌ಸಿಬಿ ಅಭಿಮಾನಿಗಳ ಬಳಿ ಕೇಳಿ ತಿಳಿದುಕೊಳ್ಳಿ. ಸತತ 17 ವರ್ಷ ಹೋರಾಟದ ನಂತರ ಕಳೆದ ಬಾರಿ ಐಪಿಎಲ್ ಟ್ರೋಫಿಯನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ ಎಂದು ಕ್ರೀಡಾಪಟುಗಳಿಗೆ ಪರಿಶ್ರಮದ ಮಹತ್ವವನ್ನು ಮನದಟ್ಟು ಮಾಡಿದರು.

19 ಸಂಖ್ಯೆಯ ಜರ್ಸಿ ರೆಕಾರ್ಡ್: ಇದೇ ವೇಳೆ ಭಾರತೀಯ ಕ್ರಿಕೆಟ್ ತಂಡದಲ್ಲಿ ಬ್ಯಾಟರ್, ಕೀಪರ್ ಜೊತೆಗೆ ಉತ್ತಮ ಫಿನಿಶರ್ ಆಗಿ ಮಿಂಚಿದ್ದ ದಿನೇಶ್ ಕಾರ್ತಿಕ್ ಅವರ ಜರ್ಸಿ ಸಂಖ್ಯೆ 19 ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್ ಹಾಗೂ ಏಷಿಯನ್ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲಾಯಿತು. ಕರ್ನಾಟಕ, ತಮಿಳುನಾಡು, ಆಂಧ್ರ ಪ್ರದೇಶ, ತೆಲಂಗಾಣ ಹಾಗೂ ಕೇರಳದ ಚೆನ್ನೈಸ್ ಅಮಿತಾರ್ ಹೋಟೆಲ್ ಮ್ಯಾನೇಜ್ಮೆಂಟ್ ಹಾಗೂ ಏವಿಯೇಷನ್ ಕಾಲೇಜಿನ 3 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು 'ಸಿಎಚ್‌ಡಿಕೆ 19' ಬೃಹತ್ ಮಾನವ ಸರಪಳಿ ನಿರ್ಮಿಸಿದರು. ಇದು, ಒಬ್ಬ ಕ್ರೀಡಾಪಟುವಿನ ಜರ್ಸಿಯನ್ನು ಪ್ರತಿನಿಧಿಸುವ ಗರಿಷ್ಠ ಜನರು ಭಾಗವಹಿಸಿದ್ದ ಮಾನವ ಸರಪಳಿ ಎಂಬ ಟೈಟಲ್‌ನಡಿ ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್ ಹಾಗೂ ಏಷಿಯನ್ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲಾಯಿತು.

ಮುಂದಿನ ಎರಡು ವರ್ಷ ನಮ್ಮದೇ ಸರ್ಕಾರ, ನಾವೇ ಮುಖ್ಯಮಂತ್ರಿ!

ಸಿದ್ದರಾಮಯ್ಯ ದ್ವಂದ್ವ ಹೇಳಿಕೆ; ಅಧಿಕಾರ ಹಸ್ತಾಂತರ ಮತ್ತೆ ಚರ್ಚೆಗೆ



ಬಾಗಲಕೋಟೆ: ರಾಜ್ಯದಲ್ಲಿ ಇನ್ನೂ ಎರಡು ವರ್ಷ ನಮ್ಮದೇ ಸರ್ಕಾರ ಇರುತ್ತೆ, ನಾವೇ ಮುಖ್ಯಮಂತ್ರಿ ಆಗಿರ್ತೀವಿ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ.

ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಹಿನ್ನೆಲೆಯಲ್ಲಿ ಐಹೊಳೆ ಮತ್ತು ಅಮೀನಘಡ ಗ್ರಾಮಗಳಲ್ಲಿ ಆಯೋಜಿಸಿದ್ದ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಇನ್ನೂ ಎರಡು ವರ್ಷ ನಮ್ಮದೇ ಸರ್ಕಾರ, ನಾವೇ ಮುಖ್ಯಮಂತ್ರಿ ಆದ್ದರಿಂದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಆಶೀರ್ವದಿಸಬೇಕು ಎಂದು ಮನವಿ ಮಾಡಿದರು.

ಉಪಚುನಾವಣೆ ಅಖಾಡದಲ್ಲೂ ಬಿಜೆಪಿ, ಅಧಿಕಾರ ಹಸ್ತಾಂತರ ವಿಚಾರವನ್ನೇ ದಾಳವಾಗಿಸಿಕೊಂಡು ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರ ಕಾಲೆಳೆಯುತ್ತಿರುವ ಸಂದರ್ಭದಲ್ಲಿ ಈ ಹೇಳಿಕೆ ಚರ್ಚೆಗೆ ಗ್ರಾಸವಾಗಿದೆ. ಇನ್ನೂ ಎರಡು ವರ್ಷ ನಮ್ಮದೇ ಸರ್ಕಾರ ಎಂದಿದ್ದು ಸಹಜವೆನಿಸಿದರೂ ನಾವೇ ಮುಖ್ಯಮಂತ್ರಿ ಆಗಿರುತ್ತೇವೆ ಎಂಬುದು ಗೊಂದಲಕಾರಿಯಾಗಿದೆ. ಯಾವರ್ಥದಲ್ಲಿ 'ನಾವೇ' ಎಂಬ ಪದ ಬಳಸಿದರೆಂಬ ಚರ್ಚೆ ಶುರುವಾಗಿದೆ.

ಬಾಡಿ ಕ್ಯಾಮರಾ ಆಫ್ ಮಾಡಿ ವಾಹನ ತಡೆದು ಹಣ ವಸೂಲಿ! 3 ಟ್ರಾಫಿಕ್ ಪೊಲೀಸರ ಅಮಾನತು

ಬೆಂಗಳೂರು, ಮಾ.31– ಬೆಂಗಳೂರಿನಲ್ಲಿ ದೇಹಕ್ಕೆ ಧರಿಸಿದ್ದ ಬಾಡಿ ಕ್ಯಾಮೆರಾವನ್ನು ಆಫ್ ಮಾಡಿ ವಾಹನಗಳನ್ನು ತಡೆದು ಹಣ ವಸೂಲಿ ಮಾಡುತ್ತಿದ್ದ ಆರೋಪದ ಮೇರೆಗೆ 3 ಪೊಲೀಸರನ್ನು ಅಮಾನತುಗೊಳಿಸಲಾಗಿದೆ.

ಬೆಂಗಳೂರಿನ ಹೈಗ್ರೌಂಡ್ಸ್ ಸಂಚಾರಿ ಪೊಲೀಸ್ ಠಾಣೆಯ ಮೂವರು ಸಿಬ್ಬಂದಿ ಬಾಡಿ ಕ್ಯಾಮೆರಾ ಆಫ್ ಮಾಡಿಕೊಂಡು ವಿನಾ ಕಾರಣ ಬೈಕ್ ನಿಲ್ಲಿಸಿ ಹಣ ವಸೂಲಿ ಮಾಡಿದ ಆರೋಪ ಕೇಳಿಬಂದಿದ್ದು, ಸಂಬಂಧ ಇದೀಗ ಮೂವರು ಪೊಲೀಸ್ ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ ಹೈ ಗ್ರೌಂಡ್ ಸಂಚಾರಿ ಪೊಲೀಸ್ ಠಾಣೆಯ ಎಎಸ್‌ಐ ಸುರೇಶ್, ಕಾನ್ಸ್‌ಟೇಬಲ್‌ಗಳಾದ ಪ್ರಶಾಂತ್ ಹಾಗೂ ಸಾದಿಕ್ ಅವರನ್ನ ಸಸ್ಪೆಂಡ್ ಮಾಡಿ ಪಶ್ಚಿಮ ವಿಭಾಗ ಸಂಚಾರಿ ಡಿಸಿಪಿ ಅನೂಪ್ ಶೆಟ್ಟಿ ಆದೇಶ ಹೊರಡಿಸಿದ್ದಾರೆ.

ಸ್ಮಾರ್ಟ್ ಟ್ರಾಫಿಕ್ ನಿರ್ವಹಣಾ ವ್ಯವಸ್ಥೆ ಜಾರಿಗೆ ಕಾನೂನು ಸುವ್ಯವಸ್ಥೆ ಹಾಗೂ ಮೇಲ್ವಿಚಾರಣೆ ದೃಷ್ಟಿಯಿಂದ ಕರ್ತವ್ಯನಿರತ ಪೊಲೀಸ್ ಸಿಬ್ಬಂದಿ ಬಾಡಿ ಕ್ಯಾಮೆರಾ ಬಳಸುವುದು ಕಡ್ಡಾಯವಾಗಿದೆ. ಆದರೆ ಈ ಮೂವರು ಸಿಬ್ಬಂದಿಗಳು ಬಾಡಿ ಕ್ಯಾಮರಾ ಆಫ್ ಮಾಡಿಕೊಂಡು ಹಣ ವಸೂಲಿ ಮಾಡುತ್ತಿದ್ದರು ಎಂದು ಆರೋಪಿಸಲಾಗಿದೆ.

ರಾಜ್ಯದಲ್ಲಿ ರಂಗೇರಿದ ಉಪ ಸಮರ ಅಖಾಡ

ದಾವಣಗೆರೆ ದಕ್ಷಿಣ, ಬಾಗಲಕೋಟೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಿಗೆ ನಿರೀಕ್ಷೆಗೂ ಮೀರಿದ ಬೆಂಬಲ

- ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯೆ
- ಸಿಎಂ ಸ್ಥಾನವನ್ನು ಹೈಕಮಾಂಡ್ ನಿರ್ಧರಿಸುತ್ತೆ



ಬಾಗಲಕೋಟೆ ಉಪಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಉಮೇಶ್ ಮೇಟಿ ಪರ ಸಿದ್ದರಾಮಯ್ಯ ಪ್ರಚಾರ ನಡೆಸಿದರು.

ಬೆಂಗಳೂರು, ಮಾ. 31(ಕೆಎಂಶಿ)– ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಕ್ಷೇತ್ರಗಳ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಿಗೆ ನಿರೀಕ್ಷೆಗೂ ಮೀರಿ ಜನಬೆಂಬಲ ವ್ಯಕ್ತವಾಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಶಾಮನೂರು ಶಿವಶಂಕರಪ್ಪ ಹಾಗೂ ಎಚ್.ವೈ.ಮೇಟಿ ಅವರುಗಳ ನಿಧನದಿಂದ ತೆರವಾಗಿರುವ ಕ್ಷೇತ್ರಗಳಿಗೆ ನಡೆಯುತ್ತಿರುವ ಉಪಚುನಾವಣೆಯಲ್ಲಿ ಸ್ಪರ್ಧಿಸಲು ಮೃತರ ಕುಟುಂಬಗಳವರಿಗೆ ಪಕ್ಷ ಅವಕಾಶ ಮಾಡಿಕೊಟ್ಟಿದೆ.

ನಿಧನ ಹೊಂದಿದ ಶಾಸಕರ ಕುಟುಂಬದವರಿಗೆ ಟಿಕೆಟ್ ನೀಡುವುದು ಪಕ್ಷದ ಪ್ರತೀತಿಯಾಗಿದೆ. ಎರಡೂ ಕ್ಷೇತ್ರಗಳಲ್ಲಿ ಪಕ್ಷ ಪ್ರತಿನಿಧಿಸುತ್ತಿದ್ದ ನಾಯಕರು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದು, ಜನಾನುರಾಗಿಯೂ ಆಗಿದ್ದರು. ಇದು ನಮ್ಮ ಪಕ್ಷಕ್ಕೆ ವರದಾನವಾಗಿದೆ. ಸೋಲುವ ಭೀತಿಯಿಂದ ಎರಡೂ ಕ್ಷೇತ್ರಗಳಲ್ಲಿ ನಾನು ಏಳೆಂಟು ದಿನ ಪ್ರಚಾರ ಕೈಗೊಂಡಿದ್ದೇನೆ ಎಂಬ ವಿರೋಧ ಪಕ್ಷಗಳ ಆರೋಪ ಅಲ್ಲಗಳೆದ ಮುಖ್ಯಮಂತ್ರಿ, ಇದು ಸಾರ್ವತ್ರಿಕ ಚುನಾವಣೆಯಲ್ಲ. ಉಪಚುನಾವಣೆಯಲ್ಲಿ ಇಂತಹ ಪ್ರಚಾರ ಸಹಜ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಉಪಚುನಾವಣೆಯಲ್ಲಿ ಪಕ್ಷಕ್ಕೆ ಪೂರಕ ವಾತಾವರಣ ಇದೆ. ಬಾಗಲಕೋಟೆ ಕ್ಷೇತ್ರದಲ್ಲಿ ಮೇಟಿ ಪುತ್ರ ಉಮೇಶ್ ಮೇಟಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದು, ಗೆಲ್ಲುವ ವಿಶ್ವಾಸವಿದೆ ಎಂದರು.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಬಂಡಾಯ ಅಭ್ಯರ್ಥಿಯಾಗಿದ್ದ ಪೈಲ್ವಾನ್ ಸಾದಿಕ್ ಮನವೊಲಿಸಿ ಕಣದಿಂದ ಹಿಂದೆ ಸರಿಯುವಂತೆ ಮಾಡಲಾಗಿದೆ. ಸಚಿವ ಜಮೀರ್ ಅಹ್ಮದ್ ಸಹ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಳ್ಳಲಿದ್ದಾರೆ. ಬಿಜೆಪಿ ಆಡಳಿತಾವಧಿಯಲ್ಲಿ ಬಾಗಲಕೋಟೆಯಲ್ಲಿ ವೈದ್ಯಕೀಯ ಕಾಲೇಜು ಸ್ಥಾಪನೆಯಾಗಲೀ, ಕೃಷ್ಣಾ ಮೇಲ್ದಂಡೆ ಯೋಜನೆಯಡಿ ರೈತರಿಗೆ ಪರಿಹಾರ ಕೊಡಲು ಆದ್ಯತೆ ನೀಡಲಿಲ್ಲ. ಮುಖ್ಯಮಂತ್ರಿ ಸ್ಥಾನ ಕುರಿತಂತೆ ಪಕ್ಷದ ಹೈಕಮಾಂಡ್ ನಿರ್ಧಾರಗಳಿಗೆ ಬದ್ಧನಾಗಿರುತ್ತೇನೆ. ಬಿಜೆಪಿ ನಾಯಕರ ಹೇಳಿಕೆಗೆ ಪ್ರತಿಕ್ರಿಯೆ ನೀಡುವುದಿಲ್ಲ ಎಂದರು.

ಜಮೀರ್‌ಗೆ ಡಿಸಿಎಂ ಡಿಕೆಶಿ ತಿರುಗೇಟು
ಒಬ್ಬ ವ್ಯಕ್ತಿಯಿಂದ ಪಕ್ಷ ನಡೆಯಲ್ಲ!



ಬೆಂಗಳೂರು,ಮಾ.31(ಕೆಎಂಶಿ)–ಯಾವುದೇ ಒಬ್ಬ ಮುಖಂಡ ಅಥವಾ ವ್ಯಕ್ತಿಯಿಂದ ಪಕ್ಷ ನಡೆಯುವುದಿಲ್ಲ ಎಂಬುದಾಗಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳುವ ಮೂಲಕ ಸಚಿವ ಜಮೀರ್ ಅಹಮದ್ ಖಾನ್ ಅವರಿಗೆ ತಿರುಗೇಟು ನೀಡಿದ್ದಾರೆ. ಸಾಮೂಹಿಕ ನಾಯಕತ್ವ, ಕಾರ್ಯಕರ್ತರ ಶ್ರಮದಿಂದ ಪಕ್ಷ ಅಧಿಕಾರಕ್ಕೆ ಬಂದಿದೆ. ನನ್ನಿಂದಲೇ ಎಲ್ಲ ಎಂಬ ಭ್ರಮೆ ಬೇಡ. ಕೇರಳ ವಿಧಾನಸಭಾ ಚುನಾವಣೆಯಲ್ಲಿ ಸ್ಟಾರ್ ಪ್ರಚಾರಕರಾಗಿ ಜಮೀರ್ ಅಹಮದ್ ತೊಡಗಿಸಿಕೊಂಡಿದ್ದಾರೆ. ಅಲ್ಲಿಂದ ಹಿಂದಿರುಗಿದ ನಂತರ ಇಲ್ಲಿಯ ಉಪಚುನಾವಣೆಗೆ ಹೇಗೆ ಬಳಸಬೇಕೆಂಬ ತೀರ್ಮಾನ ಮಾಡುತ್ತೇವೆ. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಅಲ್ಪಸಂಖ್ಯಾತರು ಹೆಚ್ಚಿದ್ದಾರೆ. ಸ್ಥಳೀಯವಾಗಿ ನಮ್ಮ ಪಕ್ಷದಲ್ಲಿ ಆ ಸಮುದಾಯದ ಮುಖಂಡರಿದ್ದಾರೆ. ಒಬ್ಬರಿಂದಲೇ ಮತ ಬರುತ್ತದೆ ಎಂಬ ಭ್ರಮೆ ನಮಗಿಲ್ಲ ಎಂದರು.

ಹುಣಸೂರು ನಗರಸಭೆಗೆ 66.17 ಲಕ್ಷ ಉಳಿತಾಯ ಬಜೆಟ್

ಹುಣಸೂರು, ಮಾ.31– ಹುಣಸೂರು ನಗರಸಭೆ ಆಡಳಿತಾಧಿಕಾರಿಯೂ ಆದ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಅವರು ಮಂಗಳವಾರ 2026–27ನೇ ಸಾಲಿಗೆ 66.17 ಲಕ್ಷ ರೂ.ಗಳ ಉಳಿತಾಯ ಬಜೆಟ್ ಮಂಡಿಸಿದರು.



ನಗರಸಭೆಯಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ ಸೇರಿದಂತೆ ಅಧಿಕಾರಿಗಳು ಬಜೆಟ್ ಪ್ರತಿ ಪ್ರದರ್ಶಿಸಿದರು.

ನಗರಸಭೆಯ ಡಾ.ಬಿ.ಆರ್.ಅಂಬೇಡ್ಕರ್ ಸಭಾಂಗಣದಲ್ಲಿ ನಡೆದ ಬಜೆಟ್ ಮಂಡನಾ ಸಭೆಯಲ್ಲಿ 55.70 ಕೋಟಿ ರೂ.ಗಳ ಬಜೆಟ್ ಮಂಡಿಸಿದ ಅವರು, ನಗರಸಭೆ ಪ್ರಾರಂಭಿಕ ಶಿಲ್ಕು 10.86 ಕೋಟಿ ರೂ.ಗಳಾಗಿದ್ದು, ಈ ಬಾರಿ ವಿವಿಧ ಮೂಲಗಳಿಂದ 44.84 ಕೋಟಿ ರೂ.ಗಳನ್ನು ಆದಾಯ ನಿರೀಕ್ಷಿಸಲಾಗಿದೆ. 55.04 ಕೋಟಿ ರೂ. ಖರ್ಚು ಅಂದಾಜಿಸಲಾಗಿದ್ದು, ಒಟ್ಟು 66.17 ಲಕ್ಷ ರೂ. ಉಳಿತಾಯ ಮಾಡುವ ಗುರಿ ಹೊಂದಲಾಗಿದೆ ಎಂದರು.

ನಗರಸಭೆ ಸ್ವಂತ ಸಂಪನ್ಮೂಲಗಳಾದ ಆಸ್ತಿ ತೆರಿಗೆಯಿಂದ 6.24 ಕೋಟಿ, ನೀರು ಸರಬರಾಜು ಶುಲ್ಕ ಮತ್ತು ಸಂಪರ್ಕದಿಂದ 1.12 ಕೋಟಿ, ಉದ್ದಿಮೆ ಮತ್ತು ಕಟ್ಟಡ ಪರವಾನಿಗೆಯಿಂದ 37 ಲಕ್ಷ, ನಗರಸಭೆಯ ವಾಣಿಜ್ಯ ಸಂಕೀರ್ಣಗಳ ಬಾಡಿಗೆಯಿಂದ 21 ಲಕ್ಷ, ಅಭಿವೃದ್ಧಿ ಸೇರಿದಂತೆ ಮತ್ತಿತರ ಶುಲ್ಕ 21 ಲಕ್ಷ, ಖಾತೆ ವರ್ಗಾವಣೆ, ನಕಲು ಮತ್ತಿತರೆಗಳಿಂದ 24.88 ಲಕ್ಷ, ಎಸ್‌ಡಬ್ಲ್ಯೂಎಂ ಮತ್ತು ಯುಜಿಡಿ ಸೆಸ್‌ನಿಂದ 34.87 ಲಕ್ಷ ರೂ., ಮತ್ತಿತರ ಜಮಾ 2 ಲಕ್ಷ ಸೇರಿದಂತೆ 8,77,62,550 ರೂ.ಗಳ ಆದಾಯ ನಿರೀಕ್ಷಿಸಲಾಗಿದೆ ಎಂದರು.

ಸರ್ಕಾರದಿಂದ ಹಂಚಿಕೆಯಾಗಿರುವ ಅನುದಾನಗಳಲ್ಲಿ ಎಸ್‌ಎಫ್‌ಸಿ ಮುಕ್ತ ನಿಧಿಯಿಂದ 17 ಲಕ್ಷ, ಎಸ್‌ಎಫ್‌ಸಿ ವಿದ್ಯುತ್ ಮತ್ತು ನೀರು ಸರಬರಾಜು ಅನುದಾನ 4.37 ಕೋಟಿ, ಎಸ್‌ಎಫ್‌ಸಿ ವೇತನ ಅನುದಾನ 4.54 ಕೋಟಿ, ಎಸ್‌ಎಫ್‌ಸಿ ಕುಡಿಯುವ ನೀರಿನ ಅನುದಾನ 9.32 ಲಕ್ಷ, 2024–25 ಹಾಗೂ 2025–26 ಸಾಲಿನ 15ನೇ ಹಣಕಾಸು ಆಯೋಗದ ಅನುದಾನ 4.21 ಕೋಟಿ, 16ನೇ ಹಣಕಾಸು ಆಯೋಗದ ಅನುದಾನ 5.37 ಕೋಟಿ, ಎಸ್‌ಬಿಎಂ–2 ಅನುದಾನ 2.30 ಕೋಟಿ, ಇತರೆ ಅನುದಾನ 5 ಲಕ್ಷ ಸೇರಿದಂತೆ ಒಟ್ಟು 21,10,32,000 ರೂ. ಸೇರಿದಂತೆ ಒಟ್ಟು ರಾಜಸ್ವ ಬಂಡವಾಳ 29,87,94,550 ಹಾಗೂ ಅಸಾಧಾರಣ ಸ್ವೀಕೃತಿಗಳಿಂದ 14,96,50,000 ಸೇರಿ ಒಟ್ಟು 44,84,44,550 ರೂ. ಆದಾಯದ ಗುರಿ ಹೊಂದಿದ್ದೇವೆ ಎಂದರು.

ಕಟ್ಟಡಗಳ ನಿರ್ಮಾಣಕ್ಕಾಗಿ 1.50 ಕೋಟಿ, ವಾಹನ ಖರೀದಿಗೆ 75 ಲಕ್ಷ, ರಸ್ತೆ, ಮಳೆ ನೀರು ಚರಂಡಿ ಹಾಗೂ ತೆರೆದ ಚರಂಡಿ ಕಾಮಗಾರಿಗಾಗಿ 4.14 ಕೋಟಿ, ಒಳ ಚರಂಡಿ ಅಭಿವೃದ್ಧಿಗಾಗಿ 2.50 ಕೋಟಿ, ಉದ್ಯಾನ ಅಭಿವೃದ್ಧಿ 1 ಕೋಟಿ, ಘನ ತ್ಯಾಜ್ಯ ನಿರ್ವಹಣೆಗಾಗಿ 2.30 ಕೋಟಿ, ಬೀದಿ ದೀಪ ಅಭಿವೃದ್ಧಿಗಾಗಿ 2 ಕೋಟಿ, ಸ್ಮಶಾನಗಳ ಅಭಿವೃದ್ಧಿ 20 ಲಕ್ಷ, ಯಂತ್ರೋಪಕರಣಗಳ ಖರೀದಿಗಾಗಿ 5.27 ಕೋಟಿ, ನೀರು ಸರಬರಾಜು ಮತ್ತು ನಿರ್ವಹಣೆಗಾಗಿ 3.78 ಕೋಟಿ, ಕಚೇರಿ ಪೀಠೋಪಕರಣಗಳ ಖರೀದಿ 20 ಲಕ್ಷ, ಶೇ.24.10 ಎಸ್‌ಸಿ ಎಸ್.ಟಿ ವರ್ಗಕ್ಕೆ ಮೀಸಲಿರಿಸಿದ ಹಣ 13 ಲಕ್ಷ, ಶೇ.7.25ರ ಹಿಂದುಳಿದ ವರ್ಗಗಳ ಕಲ್ಯಾಣ ಕಾರ್ಯಕ್ರಮ, ಮನೆ ನಿರ್ಮಾನ ಧನ ಸಹಾಯ ಮತ್ತು ವಿದ್ಯಾರ್ಥಿ ವೇತನಕ್ಕಾಗಿ 3 ಲಕ್ಷ, ಅಂಗವಿಕಲರ ವೀಲ್ಹ್ ಚೇರ್ ಪೋಷಣಾ ಭತ್ಯ ಹಾಗು ಆರೋಗ್ಯ ವಿಮೆಗಳಿಗಾಗಿ 1 ಲಕ್ಷ ಸೇರಿದಂತೆ ಒಟ್ಟು ರಾಜಸ್ವ ವೆಚ್ಚಗಳಿಗಾಗಿ 23,83,42,000 ರೂ.ಗಳನ್ನು ಖರ್ಚು ಮಾಡಲು ಉದ್ದೇಶಿಸಲಾಗಿದೆ ಎಂದರು.

ರಾಜಸ್ವ ವೆಚ್ಚಗಳಿಗಾಗಿ ಸರ್ಕಾರದಿಂದ ನಿರೀಕ್ಷಿಸಲಾದ ಸಿಬ್ಬಂದಿ ವೇತನ ಪಾವತಿ 4.54 ಕೋಟಿ, ಲೇಖನ ಸಾಮಾಗ್ರಿ ಖರೀದಿ, ಪತ್ರಿಕಾ ಪ್ರಕಟಣೆ ವೆಚ್ಚ, ನಗರಸಭಾ ಕಾರ್ಯಕ್ರಮಗಳ ವೆಚ್ಚ, ಕೆಎಂಡಿಎಸ್ ಸದಸ್ಯತ್ವ ಶುಲ್ಕ ಹಾಗೂ ಇತರೆ ಕಾಮಗಾರಿಗಳಿಗಾಗಿ 2 ಕೋಟಿ, ಕೌನ್ಸಿಲ್ ಸಭೆಗೆ ಸಂಬಂಧಿಸಿದ ವೆಚ್ಚ 15 ಲಕ್ಷ, ರಸ್ತೆ ದುರಸ್ತಿ ಮತ್ತು ನಿರ್ವಹಣೆ 20 ಲಕ್ಷ ಬೀದಿ ದೀಪ ನಿರ್ವಹಣೆ 40 ಲಕ್ಷ, ಮಳೆ ನೀರು, ತೆರದ ಚರಂಡಿ ನಿರ್ವಹಣೆಗಾಗಿ 30 ಲಕ್ಷ, ಘನ ತ್ಯಾಜ್ಯ ನಿರ್ವಹಣೆ, ಚಾಲಕರ ವೇತನ, ವಾಹನಗಳ ವಿಮೆ, ದುರಸ್ಥಿ ಮತ್ತಿತರೆ ವೆಚ್ಚ 4.41 ಕೋಟಿ, ನೀರು ಸರಬರಾಜು ಹಾಗೂ ಒಳ ಚರಂಡಿ ನಿರ್ವಹಣೆ, ಇಂಧನ, ಹೊರಗುತ್ತಿಗೆ ನೌಕರರ ವೇತನ ದುರಸ್ಥಿ ಮತ್ತಿತರೆ ವೆಚ್ಚ 3.15 ಕೋಟಿ, ಉದ್ಯಾನವನ ನಿರ್ವಹಣೆ 50 ಲಕ್ಷ, ಸರ್ಕಾರಕ್ಕೆ ಪಾವತಿಸಬೇಕಾದ ಆದಾಯ ತೆರಿಗೆ ಜಿಎಸ್‌ಟಿ ರಾಜಧನ ಉಪಕರಗಳ ಪಾವತಿ ಹಾಗೂ ಮತ್ತಿತರೆ ವೆಚ್ಚ 1.93 ಕೋಟಿ, ಮಾರಣಾಂತಿಕ ಕಾಯಿಲೆಗಳಿಂದ ಬಳಲುತ್ತಿರುವ ಪತ್ರಕರ್ತರ ವೈದ್ಯಕೀಯ ವೆಚ್ಚ 2 ಲಕ್ಷ ಸೇರಿದಂತೆ ಒಟ್ಟು 17,63,76,021 ರೂ. ಸೇರಿದಂತೆ ರಾಜಸ್ವ ಮತ್ತು ಬಂಡವಾಳದಿಂದ 41,47,20,021 ರೂ. ಹಾಗೂ ಅಸಾಧಾರಣ ಪಾವತಿಗಳಿಂದ 13,57,50,000 ಸೇರಿದಂತೆ ಒಟ್ಟು 55.04.70.021 ರೂ.ಗಳ ಪಾವತಿ ನಿರೀಕ್ಷಿಸಲಾಗಿದೆ ಎಂದರು.

ಪತ್ರಕರ್ತರ ಭವನಕ್ಕೆ ಹತ್ತು ಲಕ್ಷ: ಹುಣಸೂರು ತಾಲೂಕು ಪತ್ರಕರ್ತರ ಭವನಕ್ಕೆ ಈಗಾಗಲೇ ಸಿಎ ಸೈಟ್ ದೊರೆತಿದ್ದು, ಪತ್ರಕರ್ತರ ಭವನ ನಿರ್ಮಾಣಕ್ಕೆ ನಗರಸಭೆ ತನ್ನ ಬಜೆಟ್‌ನಲ್ಲಿ 10 ಲಕ್ಷ ಮೀಸಲಿರಿಸಿರುವುದು ಸಂತಸದ ಸಂಗತಿ ಎಂದು ಪತ್ರಕರ್ತರ ಸಂಘದ ಅಧ್ಯಕ್ಷ ಹೆಚ್.ಆರ್.ಕೃಷ್ಣಕುಮಾರ್ ಹರ್ಷ ವ್ಯಕ್ತಪಡಿಸಿದ್ದಾರೆ.

ಸಭೆಯಲ್ಲಿ ಶಾಸಕ ಜಿ.ಡಿ.ಹರೀಶ್ ಗೌಡ, ಪೌರಾಯುಕ್ತೆ ಮಾನಸ ಇತರರಿದ್ದರು.

ವಿಶೇಷ ಯೋಜನೆಗಳು

ಪ್ರಸಕ್ತ ಸಾಲಿನ ವಿಶೇಷ ಯೋಜನೆಗಳಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಭವನ ಅಭಿವೃದ್ಧಿಗೆ 5 ಲಕ್ಷ, ತಾಲೂಕು ಪತ್ರಕರ್ತರ ಭವನ ನಿರ್ಮಾಣಕ್ಕೆ 10 ಲಕ್ಷ, ನಗರಸಭೆ ಮೈದಾನದಲ್ಲಿ ಬಯಲುರಂಗ ಮಂದಿರ ಮತ್ತು ಹೈಟೆಕ್ ಶೌಚಾಲಯ ನಿರ್ಮಾಣಕ್ಕೆ 40 ಲಕ್ಷ, ಮಂಜುನಾಥಸ್ವಾಮಿ ದೇವಸ್ಥಾನದ ಹತ್ತಿರ ಕಲ್ಯಾಣಿ ಅಭಿವೃದ್ಧಿ 2 ಲಕ್ಷ, ನಗರಸಭೆ ರೆಕಾರ್ಡ್ ರೂಂ ಆಧುನೀಕರಣಕ್ಕಾಗಿ 40 ಲಕ್ಷ, ಅಲ್ಲದೇ ಹುಣಸೂರಿನ ಜೀವನದಿ ಲಕ್ಷ್ಮಣತೀರ್ಥ ಶುದ್ಧೀಕರಣಕ್ಕಾಗಿ 2 ಕೋಟಿ ರೂ.ಗಳನ್ನು ಕಾಯ್ದಿರಿಸಲಾಗಿದೆ.

ಏ.5, ಡಾ.ಬಾಬು ಜಗಜೀವನ ರಾಂ ಜಯಂತಿ

ಕೆಆರ್.ನಗರ, ಮಾ.31– ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನರಾಂ ಅವರ 119ನೇ ಜಯಂತಿಯನ್ನು ಏ.5ರಂದು ಸರಳ ಮತ್ತು ಅರ್ಥ ಪೂರ್ಣವಾಗಿ ಆಚರಿಸಲು ತೀರ್ಮಾನಿಸಲಾಯಿತು.



ಪೂರ್ವಭಾವಿ ಸಭೆಯಲ್ಲಿ ಶಾಸಕ ಡಿ.ರವಿಶಂಕರ್ ಮಾತನಾಡಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ಡಾ.ಬಾಬು ಜಗಜೀವನ ರಾಂ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಣೆ ಸಂಬಂಧ ಶಾಸಕ ಡಿ.ರವಿಶಂಕರ್ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಪುರಸಭೆ ಆವರಣದಲ್ಲಿರುವ ಪುತ್ಥಳಿ ಬಳಿ ಜಯಂತಿ ಆಚರಿಸಲು ನಿರ್ಧರಿಸಲಾಯಿತು.

> "ಎಲ್ಲಾ ಸಮಾಜದ ಮುಖಂಡರನ್ನು ಆಹ್ವಾನಿಸಿ ಏ.5ರಂದು ಬಾಬು ಜಗಜೀವನ ರಾಂ ಜಯಂತಿ ಆಚರಿಸಲಾಗುವುದು. ಏ.14ರಂದು ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಸಂಬಂಧ ಮತ್ತೊಂದು ಸಭೆ ನಡೆಸಲಾಗುತ್ತದೆ. ಅದರಲ್ಲಿ ತಾವೆಲ್ಲರೂ ಪಾಲ್ಗೊಂಡು ತಮ್ಮ ಸಲಹೆ ಸೂಚನೆ ನೀಡಬೇಕು. – ಡಿ.ರವಿಶಂಕರ್, ಶಾಸಕ.

ಸಭೆಯಲ್ಲಿ ತಾಪಂ ಮಾಜಿ ಅಧ್ಯಕ್ಷ ಎಂ.ಹೆಚ್.ಸ್ವಾಮಿ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಂ.ಎಸ್.ಮಹದೇವ್, ಆದಿಜಾಂಬವ ಸಂಘದ ಎಂ.ಲೋಕೇಶ್, ದಸಂಸ ತಾಲೂಕು ಸಂಚಾಲಕ ಎಂ.ಎಸ್.ಮಲ್ಲೇಶ್, ಮುಖಂಡರಾದ ಕಂಟ್ರಾಕ್ಟರ್ ಕುಮಾರ್, ಸೇವಾದಳದ ತಾಲೂಕು ಅಧ್ಯಕ್ಷ ಬಿ.ಹೆಚ್.ಕುಮಾರ್, ಗ್ರಾಪಂ ಮಾಜಿ ಸದಸ್ಯ ಹೆಚ್.ಎಂ.ಮಂಜು, ಕಾಳಯ್ಯ, ರಮೇಶ್ ಸೇರಿದಂತೆ ಹಲವು ಮುಖಂಡರು ಮಾತನಾಡಿ, ತಾರತಮ್ಯ ಮಾಡದೇ ಏ.5 ರಂದು ಡಾ.ಬಾಬು ಜಗಜೀವನ ರಾಂ ಮತ್ತು ಏ.14 ರಂದು ಡಾ.ಬಿ.ಆರ್.ಅಂಬೇಡ್ಕರ್ ಜಯಂತಿಯನ್ನು ತಾಲೂಕು ಆಡಳಿತದಿಂದ ಆಚರಿಸಬೇಕೆಂದು ಸಲಹೆ ನೀಡಿದರು.

ಸಭೆಯಲ್ಲಿ ತಹಸೀಲ್ದಾರ್‌ರಾದ ಜಿ.ಸುರೇಂದ್ರಮೂರ್ತಿ, ರುಕಿಯಾ ಬೇಗಂ, ತಾಪಂ ಇಓಗಳಾದ ಕುಲದೀಪ್, ಎಸ್.ರವಿ ಸಮಾಜ ಕಲ್ಯಾಣಾಧಿಕಾರಿ ಶಂಕರಮೂರ್ತಿ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಮಹೇಶ್, ನಿರ್ದೇಶಕ ಸೈಯದ್ ಜಾಬೀರ್, ಎಂಎಸ್‌ಎಸ್ ತಾಲೂಕು ಅಧ್ಯಕ್ಷ ಎಂ.ಎಸ್.ರವಿ ಕುಮಾರ್, ದಸಂಸ ಸಾಲಿಗ್ರಾಮ ಅಧ್ಯಕ್ಷ ಶಿವು, ಮಾದಿಗದಂಡೋರ ತಾಲೂಕು ಅಧ್ಯಕ್ಷ ನಂಜುಂಡಸ್ವಾಮಿ, ಕೃಷ್ಣನಾಯಕ, ಪರುಶುರಾಮ್, ಮರಿಯಯ್ಯ, ಸಿ.ಶಂಕರ್, ರೈತ ಮುಖಂಡ ಎಂ.ಜೆ.ಕುಮಾರ್, ರಾಜೇಶ್, ಈರಯ್ಯ, ಎಂ.ಎ.ನಾಗೇಂದ್ರ, ಕುಮಾರ್, ಪೂಜಾರಿ ರವಿ ಮತ್ತಿತರರಿದ್ದರು.

ದ್ವಿಭಾಷಾ ಶಿಕ್ಷಣ ನೀತಿ ಜಾರಿಗೆ ಒತ್ತಾಯ

ತಿ.ನರಸೀಪುರ, ಮಾ.31– ತ್ರಿಭಾಷಾ ಸೂತ್ರದ ಮೂಲಕ ಕನ್ನಡಿಗ ವಿದ್ಯಾರ್ಥಿಗಳ ಮೇಲೆ ಹಲವು ದಶಕಗಳಿಂದ ಭಾರತ ಒಕ್ಕೂಟ ಸರ್ಕಾರ ಹೇರಿಕೆ ಮಾಡಿಕೊಂಡು ಬಂದಿರುವ ತ್ರಿಭಾಷಾ ಸೂತ್ರವನ್ನು ರದ್ದುಗೊಳಿಸುವ ಮೂಲಕ ಕರ್ನಾಟಕದಲ್ಲಿ ಕನ್ನಡ, ಇಂಗ್ಲಿಷ್ ದ್ವಿಭಾಷಾ ಶಿಕ್ಷಣ ನೀತಿ ಜಾರಿಗೊಳಿಸಬೇಕೆಂದು ಕನ್ನಡ ಸಾಂಸ್ಕೃತಿಕ ಪರಿಷತ್ ಅಧ್ಯಕ್ಷ ಎಸ್.ಕೆ.ರಾಜೂಗೌಡ ಸರ್ಕಾರವನ್ನು ಒತ್ತಾಯಿಸಿದ್ದಾರೆ.



ರಾಜೂಗೌಡ

ಶಿಕ್ಷಣ ಸಚಿವ ಮಧು ಬಂಗಾರಪ್ಪ ಮತ್ತು ಕರ್ನಾಟಕ ಸರ್ಕಾರ 10ನೇ ತರಗತಿ ಮುಖ್ಯ ಪರೀಕ್ಷೆಯಲ್ಲಿ 3ನೇ ಭಾಷೆಯಾದ ಹಿಂದಿ ಭಾಷೆಯನ್ನು ಒಟ್ಟು ಅಂಕದಿಂದ / ಅಂಕಪಟ್ಟಿಯಿಂದ ಕೈಬಿಟ್ಟು ಗ್ರೇಡಿಂಗ್‌ಗೆ ಸಿಮೀತಗೊಳಿಸಿ, ಆದೇಶ ಹೊರಡಿಸಿರುವುದಕ್ಕೆ ಶಿಕ್ಷಣ ಸಚಿವರು ಮತ್ತು ಸರ್ಕಾರಕ್ಕೆ ಧನ್ಯವಾದ ತಿಳಿಸಿದ್ದಾರೆ.

ನವೀಕರಣಗೊಂಡ ಅತಿಥಿ ಗೃಹ ಉದ್ಘಾಟನೆ

ನಂಜನಗೂಡು, ಮಾ.31– ನಗರದ ಶ್ರೀಕಂಠೇಶ್ವರ ದೇವಾಲಯದ ಆವರಣದಲ್ಲಿ 24 ಲಕ್ಷ ರೂ. ವೆಚ್ಚದಲ್ಲಿ ನವೀಕರಣಗೊಂಡ ಅತಿಥಿ ಗೃಹವನ್ನು ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗ ರೆಡ್ಡಿ ಉದ್ಘಾಟಿಸಿದರು.



ನವೀಕರಣಗೊಂಡ ಅತಿಥಿ ಗೃಹವನ್ನು ಮುಜರಾಯಿ ಸಚಿವ ರಾಮಲಿಂಗರೆಡ್ಡಿ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಶ್ರೀಕಂಠೇಶ್ವರ ದೇವಾಲಯದಲ್ಲಿ ವಸತಿ ಗೃಹದ ಸಮಸ್ಯೆ ಇರುವ ಬಗ್ಗೆ ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದ್ದಾರೆ. ಭಕ್ತರಿಗೆ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸುವ ಸಲುವಾಗಿ ಮುಂದಿನ 20 ದಿನಗಳಲ್ಲಿ ದೇವಾಲಯದಲ್ಲಿ ಸಭೆ ನಡೆಸಿ ಅಭಿವೃದ್ಧಿ ಕಾರ್ಯಗಳ ಬಗ್ಗೆ ತೀರ್ಮಾನಿಸಲಾಗುವುದು. ಜೊತೆಗೆ ದೇವಾಲಯ 15 ಎಕರೆ ಪ್ರದೇಶದಲ್ಲಿದ್ದು, ಅಭಿವೃದ್ಧಿ ಕಾರ್ಯಗಳಿಗೆ ಜಾಗದ ಸಮಸ್ಯೆ ಎದುರಾಗುವ ಕಾರಣ ದೇವಾಲಯದ ಆಸುಪಾಸಿನಲ್ಲಿ ಜಾಗ ಖರೀದಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಜಾಗ ಖರೀದಿಗೆ ದೇವಾಲಯದ ಹಣ ಸಾಕಷ್ಟಿದೆ ಎಂದರು.

ದೇವಾಲಯದಲ್ಲಿ ಕಪಿಲಾ ನದಿಯಿಂದ ಆನೆ ಮೇಲೆ ಆಗ್ರೋದಕವನ್ನು ತಂದು ಶ್ರೀಕಂಠೇಶ್ವರನಿಗೆ ಅಭಿಷೇಕ ಮಾಡುವ ಸಂಪ್ರದಾಯವಿತ್ತು. ಆದರೆ ಆನೆಯ ಅನಾರೋಗ್ಯದ ಕಾರಣ ಆ ಸಂಪ್ರದಾಯ ಮರೆಯಾಗಿದೆ ಎಂಬ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಅವರು ಶೀಘ್ರ ಅರಣ್ಯಾಧಿಕಾರಿಗಳ ಜೊತೆಗೆ ಸಮಾಲೋಚನೆ ನಡೆಸಿ ದೇವಾಲಯಕ್ಕೆ ಆನೆ ತರುವ ವ್ಯವಸ್ಥೆ ಮಾಡಲಾಗುವುದು. ಇನ್ನು ದೇವಾಲಯದ ಸುತ್ತಮುತ್ತ ಖಾಸಗಿ ಕಟ್ಟಡಗಳು ಅಕ್ರಮವಾಗಿ ತಲೆ ಎತ್ತುತ್ತಿರುವ ಬಗ್ಗೆ ನನ್ನ ಗಮನಕ್ಕೆ ಬಂದಿದ್ದು, ಪುರಾತತ್ವ ಇಲಾಖೆ ಮುಖ್ಯ ಕಾರ್ಯದರ್ಶಿ ಬಳಿ ಚರ್ಚೆ ನಡೆಸಿ ಅಕ್ರಮ ಕಟ್ಟಡ ನಿರ್ಮಿಸುವವರ ವಿರುದ್ಧ ಕ್ರಮ ವಹಿಸಲಾಗುವುದು ಎಂದರು.

2003ರಲ್ಲಿ ಈ ಅತಿಥಿ ಗೃಹ ನಿರ್ಮಿಸಲಾಗಿತ್ತು. ಅತಿಥಿ ಗೃಹ ನಿರ್ವಹಣೆ ಕಾಣದೆ ಶಿಥಿಲಾವಸ್ಥೆಗೆ ತಲುಪಿತ್ತು. ಆದ ಕಾರಣ 24 ಲಕ್ಷ ವೆಚ್ಚದಲ್ಲಿ ನವೀಕರಣಗೊಳಿಸಿ ಹೊಸದಾಗಿ ಪೀಠೋಪಕರಣಗಳನ್ನು ಅಳವಡಿಸಲಾಗಿದೆ ಎಂದರು.

ಈ ವೇಳೆ ಶಾಸಕ ದರ್ಶನ್ ಧ್ರುವನಾರಾಯಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ಶ್ರೀಧರ್, ಗೋವಿಂದರಾಜು, ಗೋಪಾಲಕೃಷ್ಣ, ಮುರುಗೇಶ್, ದೇವಾಲಯದ ಇಓ ಕೃಷ್ಣ, ನಿರ್ಮಿತಿ ಕೇಂದ್ರದ ಎಇಇ ಮಂಜುನಾಥ್, ಎಇ ಯಶವಂತ್ ಸೇರಿದಂತೆ ಇತರರಿದ್ದರು.

ದೇವಾಲಯದ ಆವರಣದಲ್ಲಿ ಶಾಸಕ ದರ್ಶನ್ ಸ್ವಚ್ಛತಾ ಕಾರ್ಯ

ನಂಜನಗೂಡು, ಮಾ.31– ನಗರದ ಶ್ರೀಕಂಠೇಶ್ವರ ಸ್ವಾಮಿ ದೇವಾಲಯದ ಆವರಣದಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್ ಅವರು ಮಂಗಳವಾರ ಸ್ವಚ್ಛತೆ ಕೈಗೊಳ್ಳುವ ಮೂಲಕ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾದರು.



ಶ್ರೀಕಂಠೇಶ್ವರಸ್ವಾಮಿಯ ದೊಡ್ಡ ಜಾತ್ರಾ ಮಹೋತ್ಸವದ ಸಂದರ್ಭ ರಾಜ್ಯದ ವಿವಿಧೆಡೆಗಳಿಂದ ಆಗಮಿಸಿದ್ದ ಭಕ್ತರು ಪ್ರಸಾದದ ತಟ್ಟೆಗಳು, ತಿಂಡಿ ತಿನಿಸುಗಳ ಕವರ್‌ಗಳನ್ನು ಎಲ್ಲೆಂದರಲ್ಲಿ ಎಸೆದಿದ್ದ ಪರಿಣಾಮ ದೇವಾಲಯದ ಸುತ್ತ ಕಸದ ರಾಶಿ ಸಂಗ್ರಹವಾಗಿತ್ತು. ದೇವಾಲಯದ ಆವರಣದ ಸುತ್ತಮುತ್ತ ಸ್ವಚ್ಛತೆ ಕಾಪಾಡಿ ಭಕ್ತರಿಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಪೌರಕಾರ್ಮಿಕರೊಂದಿಗೆ ಶಾಸಕ ದರ್ಶನ್ ಧ್ರುವನಾರಾಯಣ್ ಕೈಗಳಿಗೆ ಗ್ಲೌಸ್ ಧರಿಸಿ, ಮುಖಕ್ಕೆ ಮಾಸ್ಕ್ ಹಾಕಿ ಕೈಯಲ್ಲಿ ಪೊರಕೆ ಹಿಡಿದು ಸ್ವಚ್ಛತಾ ಕಾರ್ಯ ಕೈಗೊಂಡರು. ಅಲ್ಲದೆ ದೇವಾಲಯದ ಸುತ್ತಮುತ್ತ ಸಂಗ್ರಹವಾಗಿದ್ದ ಕಸದ ರಾಶಿ ತೆರವುಗೊಳಿಸಿ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕರು, ಭಕ್ತರು ದೇವಾಲಯದ ಆವರಣದಲ್ಲಿ ಎಲ್ಲೆಂದರಲ್ಲಿ ಕಸ ಎಸೆಯದೆ, ಕಸದ ಬುಟ್ಟಿಯಲ್ಲೇ ಕಸವನ್ನು ಹಾಕುವ ಮೂಲಕ ಸ್ವಚ್ಛತೆಗೆ ಆದ್ಯತೆ ನೀಡಬೇಕು. ದೇವಾಲಯದ ಸುತ್ತಲೂ ನೈರ್ಮಲ್ಯ ಕಾಪಾಡಿ, ಆರೋಗ್ಯಕರ ವಾತಾವರಣ ನಿರ್ಮಿಸಲು ಸಹಕರಿಸಬೇಕು ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ. ಶಂಕರ್, ಎನ್.ಎಂ.ಮಂಜುನಾಥ್, ದೇವಾಲಯದ ಇಓ ಕೃಷ್ಣ ಸೇರಿದಂತೆ ಹಲವರಿದ್ದರು.

ಪ್ರತಿಯೊಬ್ಬರೂ ಕ್ರೀಡೆಯಲ್ಲಿ ತೊಡಗಿಸಿಕೊಳ್ಳಿ

ಸರಗೂರು, ಮಾ.31– ತಾಲೂಕಿನ ಮುಳ್ಳೂರು ಗ್ರಾಮದಲ್ಲಿ ಶ್ರೀಕಾಳಮ್ಮತಾಯಿ ಕೊಂಡೋತ್ಸವ ಅಂಗವಾಗಿ ಆಯೋಜಿಸಿದ್ದ ವಾಲಿಬಾಲ್ ಪಂದ್ಯಾವಳಿಯನ್ನು ಗ್ರಾಪಂ ಮಾಜಿ ಅಧ್ಯಕ್ಷ ಪುಟ್ಟಸ್ವಾಮಿ ಉದ್ಘಾಟಿಸಿದರು.



ವಾಲಿಬಾಲ್ ಪಂದ್ಯಾವಳಿಯನ್ನು ಗ್ರಾಪಂ ಮಾಜಿ ಅಧ್ಯಕ್ಷ ಪುಟ್ಟಸ್ವಾಮಿ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಪ್ರತಿಯೊಬ್ಬರೂ ಕ್ರೀಡಾ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವ ಮೂಲಕ ಉತ್ತಮ ಸಾಧನೆಗೆ ಮುಂದಾದಾಗ ಮಾತ್ರ ನಮ್ಮಲ್ಲಿರುವ ಸುಪ್ತ ಪ್ರತಿಭೆ ಅನಾವರಣಗೊಳ್ಳಲು ಸಹಕಾರಿಯಾಗಲಿದೆ. ಈ ನಿಟ್ಟಿನಲ್ಲಿ ಗ್ರಾಮದ ಯುವಕರು ಹಿರಿಯ ಕ್ರೀಡಾಪಟುಗಳ ಮಾರ್ಗದರ್ಶನದಲ್ಲಿ ಮುನ್ನುಗ್ಗಬೇಕು. ಈ ವೇಳೆ ಹಿಂಜರಿಕೆ, ಭಯ ಬಿಡಬೇಕು. ಇಲ್ಲದಿದ್ದರೇ ಗುರಿ ತಲುಪಲು ಕಷ್ಟವಾಗಲಿದೆ ಎಂದ ಅವರು ಮುಳ್ಳೂರು ಗ್ರಾಮ ಅಂತಾರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಹೆಸರು ಗಳಿಸಿದ್ದು, ಅದನ್ನು ಉಳಿಸಿ ಬೆಳೆಸುವತ್ತ ಗಮನಹರಿಸಬೇಕು ಎಂದರು.

ಈ ವೇಳೆ ಗೌಡಿಕೆ ಎಂ.ಎಸ್.ಶಿವಕುಮಾರ್, ಜಿ.ಎಂ.ಮೋಹನ್‌ಕುಮಾರ್, ಗ್ರಾಪಂ ಅಧ್ಯಕ್ಷೆ ಚನ್ನಮ್ಮ, ಮಾಜಿ ಅಧ್ಯಕ್ಷ ಗೋವಿಂದಚಾರ್, ಸದಸ್ಯ ಚಿಕ್ಕಣ್ಣ, ಮಾಜಿ ಸದಸ್ಯರಾದ ನಾಗರಾಜು, ಶಿವಚನ್ನಪ್ಪ, ನಾಯಕ ಸಮಾಜದ ಯಜಮಾನರಾದ ಜವನ ನಾಯಕ, ಕಮರಿ ನಾಯಕ, ತಿಮ್ಮ ನಾಯಕ, ಎಂ.ಸಿ.ಗೋವಿಂದ ನಾಯಕ, ಗುಂಡನಾಯಕ, ಸಿ.ಮಹದೇವ ನಾಯಕ, ಶಿಕ್ಷಕರಾದ ಚಿಕ್ಕನಾಯಕ, ಅಂಬಿ, ಅಗ್ನಿ ಚನ್ನನಾಯಕ, ರಾಮನಾಯಕ, ಮಹದೇವ ನಾಯಕ, ಪಂದ್ಯಾವಳಿ ಆಯೋಜಕರಾದ ಅಜಯ್ ಕುಮಾರ್ ನಾಯಕ್, ಅಭಯ್ ಕುಮಾರ್ ನಾಯಕ್ ಇನ್ನಿತರರಿದ್ದರು.

ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಣೆ

ನಂಜನಗೂಡು, ಮಾ.31– ಪ್ರಸಕ್ತ ಸಾಲಿನಲ್ಲಿ ಕೃಷಿ ಇಲಾಖೆಯಿಂದ ಪೂರ್ವ ಮುಂಗಾರು ಹಂಗಾಮಿಗೆ ಹೆಸರು, ಉದ್ದು, ಅಲಸಂದೆ, ಜೋಳ, ಮಕ್ಕೆಜೋಳ ಹಾಗೂ ಸೂರ್ಯಕಾಂತಿ ಬಿತ್ತನೆ ಬೀಜಗಳನ್ನು ರೈತ ಸಂಪರ್ಕ ಕೇಂದ್ರಗಳಲ್ಲಿ ವಿತರಿಸಲಾಗುತ್ತಿದ್ದು, ರೈತರು ರೈತ ಸಂಪರ್ಕ ಕೇಂದ್ರಗಳಿಗೆ ಭೇಟಿ ನೀಡಿ ಅಗತ್ಯ ದಾಖಲಾತಿ ಸಲ್ಲಿಸಿ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ಪಡೆಯಬಹುದಾಗಿದೆ ಎಂದು ಸಹಾಯಕ ಕೃಷಿ ನಿರ್ದೇಶಕ ಎಸ್.ಕೆ.ರವಿ ತಿಳಿಸಿದ್ದಾರೆ. ಈಗಾಗಲೇ ಬಿತ್ತನೆ ಬೀಜಗಳನ್ನು ರೈತ ಸಂಪರ್ಕ ಕೇಂದ್ರಗಳಲ್ಲಿ ದಾಸ್ತಾನು ಇರಿಸಲಾಗಿದೆ. ಸಾಮಾನ್ಯ ವರ್ಗದ ರೈತರಿಗೆ ಶೇ.50 ಹಾಗೂ ಪ.ಜಾತಿ, ಪ.ಪಂ ರೈತರಿಗೆ ಶೇ.75ರ ಸಹಾಯಧನದಲ್ಲಿ ಬಿತ್ತನೆ ಬೀಜಗಳನ್ನು ವಿತರಿಸಲಾಗುವುದು. ರೈತರು ಆಧಾರ್ ಪ್ರತಿ ಹಾಗೂ ಪಹಣಿ ಸೇರಿದಂತೆ ಅಗತ್ಯ ದಾಖಲಾತಿ ಸಲ್ಲಿಸಿ ಬಿತ್ತನೆ ಬೀಜ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ನಾಳೆ ಶ್ರೀಗುಂಜಾನರಸಿಂಹಸ್ವಾಮಿ ಬ್ರಹ್ಮ ರಥೋತ್ಸವ



ತಿ.ನರಸೀಪುರ, ಮಾ.31– ಕಾವೇರಿ, ಕಪಿಲ ನದಿ ದಡದಲ್ಲಿರುವ ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ಬ್ರಹ್ಮ ರಥೋತ್ಸವ ಏ.2ರಂದು ನಡೆಯಲಿದ್ದು, ಪ್ರತಿ ವರ್ಷದಂತೆ ಈ ಬಾರಿಯೂ ರಥೋತ್ಸವಕ್ಕೆ ಎಲ್ಲಾ ಸಮುದಾಯದವರು ಸಹಕಾರ ನೀಡುವಂತೆ ಪಾರುಪತ್ತೇಗಾರ್ ತಿರುಮಕೂಡಲು ದಿಲೀಪ್ (ದೀಪು) ಮನವಿ ಮಾಡಿದ್ದಾರೆ.

ಪುರಸಭೆಯಿಂದ ಸ್ವಚ್ಛತಾ ಕಾರ್ಯಗಳು ಜರುಗಲಿದ್ದು, ರಥೋತ್ಸವಕ್ಕೆ ಬರುವ ಭಕ್ತರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಯವರು ಮಾಡಲಿದ್ದಾರೆ ಎಂದರು.

ಮಾ.26ರಂದು ಅಂಕುರಾರ್ಪಣ, ಮಾ.27ರಂದು ಧ್ವಜಾರೋಹಣ, ಚಂದ್ರ ಮಂಡಲಾರೋಹಣ, ಮಾ.28ರಂದು ತಿರುನಾಳ್ ಕಟ್ಟೆ ಉತ್ಸವ, ಅನಂತ ಪೀಠಾರೋಹಣ, ಮಾ.29ರಂದು ಹಂಸಾರೋಹಣ, ಮಾ.30ರಂದು ಪುಷ್ಪ ಮಂಟಪಾರೋಹಣ, ಮಾ.31ರಂದು ಪ್ರಹ್ಲಾದ ಪರಿಪಾಲನೋತ್ಸವ, ಏ.1ರಂದು ಲಕ್ಷ್ಮಿ ಕಲ್ಯಾಣೋತ್ಸವ, ಗಜೇಂದ್ರ ಪರಿಪಾಲನೋತ್ಸವ, ಏ.2ರಂದು ದಿವ್ಯ ಬ್ರಹ್ಮ ರಥೋತ್ಸವ, ಏ.3ರಂದು ತಿರುನಾಳ್ ಕಟ್ಟೆ ಉತ್ಸವ, ಡೋಲೋತ್ಸವ, ಶಯನೋತ್ಸವ, ಏ.4ರಂದು ಅವಕೃತ ಸ್ನಾನ, ಧ್ವಜಾರೋಹಣ, ಏ.5ರಂದು ಮಹಾಭಿಷೇಕ, ಹನುಮಂತೋತ್ಸವ, ಏ.6ರಂದು ವೈಮಾಳಿಗೆ ಉತ್ಸವ ನಡೆಯಲಿದೆ ಎಂದು ಪಾರುಪತ್ತೇದಾರ ತಿರುಮಕೂಡಲು ದಿಲೀಪ್ (ದೀಪು) ಮನವಿ ಮಾಡಿದ್ದಾರೆ.

ತಾಲೂಕಿನ ಜೆಡಿಎಸ್ ಟಿಕೆಟ್ ಪಡೆಯಲು

ಶಾಸಕರ ವಿರುದ್ಧ ಕೃಷ್ಣನಾಯಕ ಸುಳ್ಳು ಆರೋಪ

ಪುರಸಭಾ ಮಾಜಿ ಸದಸ್ಯ ಹೆಚ್.ಸಿ.ನರಸಿಂಹಮೂರ್ತಿ



ಪುರಸಭಾ ಮಾಜಿ ಸದಸ್ಯ ಹೆಚ್.ಸಿ.ನರಸಿಂಹಮೂರ್ತಿ ಮಾತನಾಡಿದರು.

ಹೆಚ್.ಡಿ.ಕೋಟೆ, ಮಾ.31– ತಾಲೂಕಿನ ಜೆಡಿಎಸ್ ಟಿಕೆಟ್ ಪಡೆಯಲು ಕೆ.ಎಂ.ಕೃಷ್ಣನಾಯಕ ಅವರು ತಾಲೂಕಿನ ಅಭಿವೃದ್ಧಿಗೆ ಮುಂದಾಗಿರುವ ಶಾಸಕ ಅನಿಲ್ ಚಿಕ್ಕಮಾದು ಅವರ ವಿರುದ್ಧ ಇಲ್ಲಸಲ್ಲದ ಸುಳ್ಳು ಆರೋಪ ಮಾಡುತ್ತಿದ್ದಾರೆ. ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ ಅವರು ಧೈರ್ಯವಿದ್ದರೇ ದಾಖಲಾತಿಗಳೊಂದಿಗೆ ಬಹಿರಂಗ ಚರ್ಚೆಗೆ ಬರಲಿ ಎಂದು ಪುರಸಭಾ ಮಾಜಿ ಸದಸ್ಯ ಹೆಚ್.ಸಿ.ನರಸಿಂಹಮೂರ್ತಿ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಪಟ್ಟಣದಲ್ಲಿ ನಡೆದ ಜನರೊಂದಿಗೆ ಜನತಾದಳ ಕಾರ್ಯಕ್ರಮದಲ್ಲಿ ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ ಅವರು, ಶಾಸಕ ಅನಿಲ್ ಚಿಕ್ಕಮಾದು ಅವರ ಅಧಿಕಾರವಧಿಯಲ್ಲಿ ಯಾವುದೇ ಅಭಿವೃದ್ಧಿ ಕೆಲಸ ನಡೆದಿಲ್ಲ ಎಂದು ಇಲ್ಲಸಲ್ಲದ ಆರೋಪಗಳನ್ನು ಮಾಡಿದ್ದಾರೆ. ಅವರ ಆರೋಪಗಳು ಸತ್ಯಕ್ಕೆ ದೂರವಾದದು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ತಾಲೂಕಿನ ಜೆಡಿಎಸ್ ಟಿಕೆಟ್ ಪಡೆಯಲು ಕೋಟೆ–ಸರಗೂರು ತಾಲೂಕುಗಳಲ್ಲಿ ಅಪ್ಪಾಜಿ ಕ್ಯಾಂಟೀನ್ ತೆರೆದಿದ್ದರು. ಬಳಿಕ ಜೆಡಿಎಸ್ ಟಿಕೆಟ್ ಸಿಗದ ಹಿನ್ನೆಲೆಯಲ್ಲಿ ಅಪ್ಪಾಜಿ ಕ್ಯಾಂಟೀನ್ ಮುಚ್ಚಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರಿಗೆ ಅಗೌರವ ತೋರಿದ್ದಾರೆ. ಅಲ್ಲದೇ ಕಳೆದ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿದ್ದ ಅವರು, ಇದೀಗ ಜೆಡಿಎಸ್‌ಗೆ ಆಗಮಿಸಿದ್ದು, ಮತ್ತೆ ಅಪ್ಪಾಜಿ ಕ್ಯಾಂಟೀನ್ ತೆರೆಯುತ್ತೇನೆ ಎಂದು ಹೇಳುತ್ತಿದ್ದಾರೆ. ತಾಲೂಕಿನ 20 ಗ್ರಾಮಗಳ ಸಾವಿರಾರು ಮಂದಿ ಕಾಂಗ್ರೆಸ್ ತೊರೆದು ಜೆಡಿಎಸ್ ಸೇರ್ಪಡೆಗೊಳ್ಳುತ್ತಾರೆ ಎಂಬ ಸುಳ್ಳು ಹೇಳಿಕೆ ನೀಡಿರುವುದು ನಮ್ಮ ಗಮನಕ್ಕೆ ಬಂದಿದೆ. ಅಂದಿನ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಜೆಡಿಎಸ್ ಸೇರ್ಪಡೆಗೊಂಡಿಲ್ಲ ಎಂದು ಸ್ಪಷ್ಟಪಡಿಸಿದರು.

ತಾಲೂಕಿನ ಗ್ರಾಮಗಳ ಅಭಿವೃದ್ಧಿಗೆ 7 ವರ್ಷಗಳ ಅವಧಿಯಲ್ಲಿ ರಾಜ್ಯ ಸರ್ಕಾರ ಸಾವಿರಾರು ಕೋಟಿ ಬಿಡುಗಡೆ ಮಾಡಿದೆ ಎಂದ ಅವರು, ಕೃಷ್ಣನಾಯಕ ಅವರು ಶಿಕ್ಷಣ ಇಲಾಖೆ ವಿಚಾರವಾಗಿ ಮೂಗು ತೂರಿಸಿದ್ದು, ಶಿಕ್ಷಣ ಇಲಾಖೆ ಅಭಿವೃದ್ಧಿಗೆ ಶಾಸಕ ಅನಿಲ್ ಚಿಕ್ಕಮಾದು ಪಣತೊಟ್ಟು, ನೂರಾರು ಕಟ್ಟಡಗಳನ್ನು ನಿರ್ಮಿಸಿದ್ದಾರೆ. ಹೊರಗುತ್ತಿಗೆ ಶಿಕ್ಷಕರ ಕೊರತೆ ನೀಗಿಸಿದ್ದಾರೆ. ಸಾಗುವಳಿ ವಿಚಾರಕ್ಕೆ ಬಂದರೆ ತಾಲೂಕಿನ 495 ಮಂದಿಗೆ ಸಾಗುವಳಿ ನೀಡಲಾಗಿದೆ. ಸದ್ಯದಲ್ಲೇ 50 ಮಂದಿಗೆ ಸಾಗುವಳಿ ಪತ್ರ ವಿತರಿಸಲಾಗುವುದು ಎಂದರು.

ಒಟ್ಟಾರೆ ಕೃಷ್ಣನಾಯಕ ಅವರು ನಿಖಿಲ್ ಕುಮಾರಸ್ವಾಮಿ ಅವರನ್ನು ಮೆಚ್ಚಿಸಲು ಮತ್ತು ತಾಲೂಕಿನ ಜೆಡಿಎಸ್ ಟಿಕೆಟ್ ಪಡೆಯಲು ಆರೋಪ ಮಾಡುತ್ತಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಅಕ್ರಮ ಸಕ್ರಮ ಸದಸ್ಯರಾದ ಕೆಂಡಗಣ್ಣೇಗೌಡ, ತಾಯಮ್ಮ, ಬಾಲಯ್ಯ, ಸೋಮೇಗೌಡ ಇದ್ದರು.

ಜನರ ಹಕ್ಕುಗಳ ರಕ್ಷಣೆಗೆ ನ್ಯಾಯಾಲಯ ಸದಾ ಸಿದ್ಧ

ಹಿರಿಯ ಸಿವಿಲ್ ನ್ಯಾಯಾಧೀಶ ಜಿ.ಹೆಚ್.ಹನುಮಂತ

ತಿ.ನರಸೀಪುರ, ಮಾ.31– ಸರ್ಕಾರಿ ಸೌಲಭ್ಯಗಳಿಗಾಗಿ ಕಚೇರಿಗಳಿಗೆ ಹೋದಾಗ ಅಧಿಕಾರಿಗಳು ಸ್ಪಂದಿಸದಿದ್ದರೆ ಅಥವಾ ಕೆಲಸ ನಿರ್ವಹಿಸದಿದ್ದರೆ ನಾಗರಿಕರು ನ್ಯಾಯಾಲಯವನ್ನು ಸಂಪರ್ಕಿಸಬಹುದು. ಜನರ ನ್ಯಾಯಸಮ್ಮತ ಹಕ್ಕುಗಳ ರಕ್ಷಣೆಗೆ ನ್ಯಾಯಾಲಯ ಸದಾ ಸಿದ್ಧ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು, ಜೆಎಂಎಫ್‌ಸಿ ಹಾಗೂ ತಾಲೂಕು ಕಾನೂನು ಸೇವಾ ಸಮಿತಿ ಅಧ್ಯಕ್ಷ ಜಿ.ಹೆಚ್.ಹನುಮಂತ ತಿಳಿಸಿದರು.



ಕಾರ್ಯಕ್ರಮದಲ್ಲಿ ಮಹಿಳೆಯರನ್ನು ಸನ್ಮಾನಿಸಲಾಯಿತು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ತಾಲೂಕು ಆಡಳಿತ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಅಂಗನವಾಡಿ ಕಾರ್ಯಕರ್ತರು ಮತ್ತು ಸಹಾಯಕಿಯರ ಫೆಡರೇಷನ್ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳೆಯರು ಸರ್ಕಾರಿ ಕೆಲಸ ಅಥವಾ ಸೌಲಭ್ಯಗಳಿಗಾಗಿ ವಿವಿಧ ಇಲಾಖೆಗಳಿಗೆ ಹೋದಾಗ ಅಧಿಕಾರಿಗಳು ಸ್ಪಂದಿಸದಿದ್ದರೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸುವ ಮೂಲಕ ನ್ಯಾಯ ಪಡೆಯಬಹುದು. ಕಾನೂನು ಜನರ ಹಕ್ಕುಗಳನ್ನು ರಕ್ಷಿಸಲು ಸದಾ ನೆರವಾಗುತ್ತದೆ ಎಂದರು.

ಸಮಾಜ ಅಭಿವೃದ್ಧಿ ಸಾಧಿಸಲು ಮಹಿಳೆಯರು ಮತ್ತು ಪುರುಷರು ಸಮಾನವಾಗಿ ಮುಂದುವರಿಯಬೇಕು. ಹಿಂದಿನ ದಿನಗಳಲ್ಲಿ ಮಹಿಳೆಯರು ಮನೆ ಕೆಲಸಕ್ಕೆ ಮಾತ್ರ ಸೀಮಿತರಾಗಿದ್ದರೆ, ಇಂದಿನ ದಿನಗಳಲ್ಲಿ ಶಿಕ್ಷಣ, ಉದ್ಯೋಗ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸುತ್ತಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಹೆಣ್ಣು ಮಗು ಜನಿಸಿದಾಗ ಹಿಂದೆ ಕೆಲವರು ಬೇಸರಪಡುವ ಸ್ಥಿತಿ ಇದ್ದರೂ ಈಗ ಪರಿಸ್ಥಿತಿ ಬದಲಾಗುತ್ತಿದೆ. ಹೆಣ್ಣು ಮಗುವಿನ ಪ್ರೀತಿ ಅಪಾರವಾಗಿದ್ದು, ತಂದೆಗೆ ಅತ್ಯಂತ ಸಂತೋಷ ನೀಡುತ್ತದೆ ಎಂದು ತಮ್ಮ ವೈಯಕ್ತಿಕ ಅನುಭವ ಹಂಚಿಕೊಂಡರು.

ಪೋಷಕರು ಹೆಣ್ಣು ಮಕ್ಕಳಿಗೆ ಬೇಗ ಮದುವೆ ಮಾಡುವ ಮನೋಭಾವದಿಂದ ಹೊರಬಂದು ಅವರಿಗೆ ಉನ್ನತ ಶಿಕ್ಷಣ ಕೊಡಿಸಲು ಮುಂದಾಗಬೇಕು. ತಮ್ಮ ಜೀವನವನ್ನು ಸ್ವತಂತ್ರವಾಗಿ ಕಟ್ಟಿಕೊಳ್ಳುವ ಅವಕಾಶಗಳನ್ನು ಹೆಣ್ಣು ಮಕ್ಕಳಿಗೆ ಒದಗಿಸಬೇಕು ಎಂದರು.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ನಿವೇದಿತಾ ಎನ್. ಮಾತನಾಡಿ, ಮಹಿಳೆಯರ ರಕ್ಷಣೆಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಹಲವು ಕಾನೂನುಗಳನ್ನು ಜಾರಿಗೆ ತಂದಿದ್ದರೂ ಮಹಿಳೆಯರ ಮೇಲಿನ ದೌರ್ಜನ್ಯ ಸಂಪೂರ್ಣವಾಗಿ ನಿಂತಿಲ್ಲ ಎಂದರು.

ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಸಚಿನ್ ಹೆಚ್.ಆರ್.ಮಾತನಾಡಿ, ಮಹಿಳಾ ಸಬಲೀಕರಣ ಹೆಚ್ಚುತ್ತಿರುವಂತೆಯೇ ಮಹಿಳೆಯರ ಮೇಲಿನ ದೌರ್ಜನ್ಯ ನಡೆಯುತ್ತಿರುವುದು ವಿಷಾದನೀಯ ಸಂಗತಿ ಎಂದರು.

ಬಾಲ್ಯ ವಿವಾಹದಂತಹ ಪಿಡುಗುಗಳು ಇನ್ನೂ ಸಮಾಜದಲ್ಲಿ ನಡೆಯುತ್ತಿರುವುದು ಆತಂಕಕಾರಿ ವಿಚಾರವಾಗಿದ್ದು, ಹೆಣ್ಣು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಮೂಲಕ ಅದನ್ನು ತಡೆಯಬೇಕು ಎಂದರು.

ಕಾರ್ಯಕ್ರಮದಲ್ಲಿ ಸಿಡಿಪಿಓ ಗೋವಿಂದರಾಜು, ಪ್ರಧಾನ ಸಿವಿಲ್ ನ್ಯಾಯಾಧೀಶ ಹೆಚ್.ಆರ್.ಸಚಿನ್, ವಕೀಲರ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಮಹಿಳಾ ಸಂರಕ್ಷಣಾಧಿಕಾರಿ ಶಾರದಾದೇವಿ, ಅಂಗನವಾಡಿ ಒಕ್ಕೂಟದ ಅಧ್ಯಕ್ಷ ಸರೋಜಮ್ಮ, ಪ್ರೇಮಕುಮಾರಿ ಮತ್ತಿತರರಿದ್ದರು.

ಮೈಸೂರು ಮಿತ್ರ

ಮೈಸೂರು ಗ್ರಾಮಾಂತರ ಸಾರಿಗೆ ವಿಭಾಗಕ್ಕೆ ಆರು ಹೊಸ ಬಸ್ ಸೇರ್ಪಡೆ

ಮೈಸೂರು, ಮಾ.31(ಬಿಎಲ್‌ಯು)– ಕೆಎಸ್‌ಆರ್‌ಟಿಸಿ ಮೈಸೂರು ಗ್ರಾಮಾಂತರ ವಿಭಾಗಕ್ಕೆ ನಾಲ್ಕು ಸ್ಲೀಪರ್ ಕ್ಲಾಸ್ ಬಸ್ ಸೇರಿದಂತೆ ಆರು ಹೊಸ ಬಸ್‌ಗಳು ನಾಳೆ (ಏಪ್ರಿಲ್ 1) ಸೇರ್ಪಡೆಯಾಗಲಿವೆ.

ಬೆಂಗಳೂರಿನ ಕೆಎಸ್‌ಆರ್‌ಟಿಸಿ ಪ್ರಧಾನ ಕಚೇರಿಯು ನಾಳೆ ಮೈಸೂರಿಗೆ ಈ ಆರು ಹೊಸ ಬಸ್‌ಗಳ ಹಸ್ತಾಂತರ ಮಾಡಲಿದೆ. ನಾಳೆ ಮಧ್ಯಾಹ್ನದ ವೇಳೆಗೆ ಬಸ್‌ಗಳು ಮೈಸೂರು ಗ್ರಾಮಾಂತರ ವಿಭಾಗದ ಡಿಪೋಗೆ ಆಗಮಿಸಲಿವೆ.

ಈ ವಾರದಲ್ಲಿ ಹೊಸ ಬಸ್‌ಗಳನ್ನು ಆರ್‌ಟಿಒ (ಪ್ರಾದೇಶಿಕ ಸಾರಿಗೆ ಕಚೇರಿ) ದಲ್ಲಿ ನೋಂದಣಿ ಮಾಡಿಸಲಾಗುವುದು. ತರುವಾಯ ಏಪ್ರಿಲ್ ಎರಡನೇ ವಾರದೊಳಗೆ ಹೊಸ ಬಸ್‌ಗಳನ್ನು ಸಾರ್ವಜನಿಕರ ಸೇವೆಗೆ ಮುಕ್ತಗೊಳಿಸಲಾಗುವುದು.

ಆರು ಬಸ್‌ಗಳಲ್ಲಿ ನಾಲ್ಕು ನಾನ್ ಎಸಿ ಸ್ಲೀಪರ್ ಕ್ಲಾಸ್ ಬಸ್. ಉಳಿದ ಎರಡು ಸಾಮಾನ್ಯ ಕೆಂಪು ಬಸ್‌ಗಳಾಗಿವೆ. ಈ ಆರು ಬಸ್‌ಗಳನ್ನು ಅಂತರರಾಜ್ಯ ಹಾಗೂ ಗಡಿಭಾಗದ ಜಿಲ್ಲೆಗಳಿಗೆ ಓಡಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

4 ನಾನ್ ಎಸಿ ಸ್ಲೀಪರ್ ಕ್ಲಾಸ್; 2 ಸಾಮಾನ್ಯ ರೆಡ್ ಬಸ್



ವರ್ಷದಲ್ಲಿ 15 ವರ್ಷ ಮೇಲ್ಪಟ್ಟ 57 ಬಸ್‌ಗಳು ಗುಜರಿಗೆ

ಕಳೆದ ಒಂದು ವರ್ಷದ ಅವಧಿಯಲ್ಲಿ ಮೈಸೂರು ಗ್ರಾಮಾಂತರ ಸಾರಿಗೆ ವಿಭಾಗದಲ್ಲಿ 15 ವರ್ಷ ಮೇಲ್ಪಟ್ಟ 57 ಬಸ್‌ಗಳನ್ನು ಗುಜರಿಗೆ ಹಾಕಲಾಗಿದೆ ಸರ್ಕಾರದ 15 ವರ್ಷ ಮೇಲ್ಪಟ್ಟ ಯಾವುದೇ ವಾಹನಗಳಿಗೆ ಎಫ್‌ಸಿ (ಫಿಟ್ನೆಸ್ ಸರ್ಟಿಫಿಕೇಟ್) ನೀಡುವಂತಿಲ್ಲ. ಇದನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಕಟ್ಟುನಿಟ್ಟಾಗಿ ಪಾಲಿಸುವಂತೆ ಕೇಂದ್ರ ಸಾರಿಗೆ ಸಚಿವಾಲಯ ಸೂಚನೆ ನೀಡಿದೆ. ಇಂತಹ ವಾಹನಗಳನ್ನು ಸ್ಕ್ರ್ಯಾಪ್ ಅಥವಾ ಗುಜರಿಗೆ ಹಾಕಬೇಕು. ಯಾವುದೇ ಕಾರಣಕ್ಕೂ ಈ ವಾಹನಗಳನ್ನು ಸಾರ್ವಜನಿಕರ ಸೇವೆಗೆ ಬಳಸುವಂತಿಲ್ಲ. ಈ ಹಿನ್ನೆಲೆಯಲ್ಲಿ ಮೈಸೂರು ಗ್ರಾಮಾಂತರ ವಿಭಾಗದಲ್ಲಿ ಕಳೆದ ಒಂದು ವರ್ಷದ ಅವಧಿಯಲ್ಲಿ 15 ವರ್ಷ ಮೇಲ್ಪಟ್ಟ 57 ಬಸ್‌ಗಳನ್ನು ಗುಜರಿಗೆ ಹಾಕಲಾಗಿದೆ. ಇದರಲ್ಲಿ 7 ವೋಲ್ವೋ ಬಸ್‌ಗಳು. ಈ ಪ್ರಮಾಣದ 57 ಬಸ್‌ಗಳನ್ನು ಸ್ಕ್ರ್ಯಾಪ್‌ಗೆ ಹಾಕಿದ್ದರೂ ಅದಕ್ಕೆ ಪರ್ಯಾಯವಾಗಿ ಹೊಸ ಬಸ್ ಗಳನ್ನು ಸರ್ಕಾರ ನೀಡಿರಲಿಲ್ಲ. ವರ್ಷದ ತರುವಾಯ ನಾಳೆ (ಬುಧವಾರ) 6 ಹೊಸ ಬಸ್‌ಗಳನ್ನು ನೀಡುತ್ತಿದೆ.

ಹೊಸ ಬಸ್‌ಗಳು ಪರಿಸರ ಸ್ನೇಹಿ ಬಿಎಸ್ 6 ಪ್ರಮಾಣ ಪತ್ರ ಹೊಂದಿವೆ

ಮೈಸೂರಿಗೆ ಬರುತ್ತಿರುವ ಆರು ಹೊಸ ಬಸ್‌ಗಳು ಪರಿಸರ ಸ್ನೇಹಿ, ಮಾಲಿನ್ಯ ನಿಯಂತ್ರಣ ಮಾನದಂಡಗಳನ್ನು ಪೂರೈಸುವ ಆಧುನಿಕ ವಾಹನಗಳಾಗಿವೆ. ಈ ಹೊಸ ಬಸ್‌ಗಳು ಬಿಎಸ್–6 (BS-VI) ಪ್ರಮಾಣಪತ್ರದೊಂದಿಗೆ, ಹಾನಿಕಾರಕ ಅನಿಲವನ್ನು ಹೊರ ಸೂಸುವಿಕೆಯನ್ನು ಗಣನೀಯವಾಗಿ ಕಡಿಮೆ ಮಾಡುತ್ತವೆ. ಅಲ್ಲದೆ ಉತ್ತಮ ಇಂಧನ ದಕ್ಷತೆ ಮತ್ತು ಸುಧಾರಿತ ಎಂಜಿನ್ ತಂತ್ರಜ್ಞಾನವನ್ನು ಹೊಂದಿವೆ. ಹೆಚ್ಚಿನ ಮೈಲೇಜ್ ನೀಡಲು ವಿನ್ಯಾಸಗೊಳಿಸಿರುವ ಈ ಬಸ್ ಸುಧಾರಿತ ಬ್ರೇಕಿಂಗ್ ಸಿಸ್ಟಂ, ವಿಸ್ತಾರವಾದ ಕವಚ ರಚನೆ ಹಾಗೂ ಎರ್ಗೋನಾಮಿಕ್ ಆಸನ ಒಳಗೊಂಡಿದೆ. ಇನ್ನು ಮುಂದೆ ರಸ್ತೆಗಿಳಿಯುವ ಎಲ್ಲಾ ಕೆಎಸ್‌ಆರ್‌ಟಿಸಿ ಹೊಸ ಬಸ್‌ಗಳು ಇದೇ ಗುಣಮಟ್ಟವನ್ನು ಹೊಂದಿರುತ್ತವೆ.



ತಲಾ 2 ಕೊಟ್ಟಾಯಂ, ಯಲ್ಲಾಪುರಕ್ಕೆ, ಮತ್ತೆರಡು ಅಂತರರಾಜ್ಯದಲ್ಲಿ ಸಂಚಾರ

ಹೊಸ ಆರು ಬಸ್‌ಗಳಲ್ಲಿ ನಾಲ್ಕು ಸ್ಲೀಪರ್ ಕ್ಲಾಸ್ ಬಸ್‌ಗಳಲ್ಲಿ ತಲಾ ಎರಡು ಬಸ್‌ಗಳು ಕೇರಳದ ಕೊಟ್ಟಾಯಂ ಹಾಗೂ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರಕ್ಕೆ ಸಂಚರಿಸಲಿವೆ. ಉಳಿದ ಎರಡು ಬಸ್‌ಗಳನ್ನು ಅಂತರರಾಜ್ಯ ಸೇವೆಗೆ ಮೀಸಲಿಡಲಾಗುತ್ತಿದೆ. ಅವು ಯಾವುವು ಎಂಬುದು ಇನ್ನು ನಿರ್ಧರಿಸಿಲ್ಲ.

– **ಶ್ರೀನಿವಾಸ್**, ವಿಭಾಗೀಯ ನಿಯಂತ್ರಣಾಧಿಕಾರಿ, ಮೈಸೂರು ಗ್ರಾಮಾಂತರ ವಿಭಾಗ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಉಸ್ತಾದ್ ಭಗತ್ ಸಿಂಗ್(ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲವ್ ಮಾಕ್ಟೇಲ್–3 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಧುರಂದರ್–2 (ಕ)	3 ಪ್ರದರ್ಶನಗಳು
ಗಾಯಿತ್ರಿ	
ಧುರಂದರ್–2 (ಕ)	3 ಪ್ರದರ್ಶನಗಳು
ರಾಜಕಮಲ್	
ಯೂತ್ (ತ) + ಉಸ್ತಾದ್ ಭಗತ್ ಸಿಂಗ್ (ತೆ)	2+2 ಪ್ರದರ್ಶನಗಳು
ಸಂಗಂ	
ಧುರಂದರ್–2 (ಕ)	3 ಪ್ರದರ್ಶನಗಳು
ಲಿಡೋ	
ಧುರಂದರ್–2 (ಕ)	3 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಆಯುಧ (ಕ)	4 ಪ್ರದರ್ಶನಗಳು

ಬೆಂಗಳೂರಲ್ಲಿ ಮಾದಕ ವಸ್ತುಗಳ ವಿರುದ್ಧ ಸಮರ

ವಿದೇಶಿ ಪ್ರಜೆಗಳು ಸೇರಿ 11 ಮಂದಿ ಡ್ರಗ್ ಪೆಡ್ಲರ್‌ಗಳ ಬಂಧನ

ಬೆಂಗಳೂರು, ಮಾ.31(ಕೆಎಂಶಿ)– ಮಾದಕ ವಸ್ತುಗಳ ಸಾಗಾಣಿಕೆ ಮಾರಾಟ ಮತ್ತು ಸೇವನೆ ವಿರುದ್ಧ ಬೆಂಗಳೂರು ಪೊಲೀಸರು ಸಮರ ಸಾರಿದ್ದಾರೆ

ನಗರದ ಯಲಹಂಕ ಉಪನಗರ, ಆಡುಗೋಡಿ, ಭಾರತಿನಗರ, ಜಾಲಹಳ್ಳಿ ಹಾಗೂ ಪುಲಿಕೇಶಿನಗರ ಠಾಣಾ ಪೊಲೀಸರು ತಮ್ಮ ವ್ಯಾಪ್ತಿಯಲ್ಲಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಇಬ್ಬರು ವಿದೇಶಿ ಪ್ರಜೆಗಳು ಸೇರಿ 11ಮಂದಿ ಡ್ರಗ್ಸ್ ಪೆಡ್ಲರ್‌ಗಳನ್ನು ಬಂಧಿಸಿದ್ದಾರೆ ಬಂಧಿತರಿಂದ 5.14 ಕೋಟಿ ಮೌಲ್ಯದ 2 ಕೆ.ಜಿ. 07 ಗ್ರಾಂ ಎಂಡಿಎಂಎ, 31 ಕೆ.ಜಿ. 396 ಗ್ರಾಂ ಗಾಂಜಾ, 220 ಗ್ರಾಂ ಹೈಡ್ರೋ ಗಾಂಜಾ, 162 ಗ್ರಾಂ ಹೆರಾಯಿನ್ 1 ದ್ವಿಚಕ್ರ ವಾಹನ ವಶಪಡಿಸಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಯಲಹಂಕ ಉಪನಗರ, ಆಡುಗೋಡಿ, ಭಾರತಿನಗರ, ಜಾಲಹಳ್ಳಿ ಹಾಗೂ ಪುಲಿಕೇಶಿನಗರ ವ್ಯಾಪ್ತಿಯಲ್ಲಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಖಚಿತವಾದ ಮಾಹಿತಿಯನ್ನು ಆಧರಿಸಿ ದಾಳಿ ನಡೆಸಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಹೇಳಿದರು.

ಪ್ರಕರಣದಲ್ಲಿ ಭಾಗಿಯಾಗಿ ತಲೆಮರೆಸಿಕೊಂಡಿರುವ ಮತ್ತೊಬ್ಬ ಆರೋಪಿಯ ಬಂಧನಕ್ಕೆ ಕಾರ್ಯಾಚರಣೆ ಕೈಗೊಳ್ಳಲಾಗಿದೆ ಹಾಗೂ ಆರೋಪಿಗಳಿಗೆ ನಿಷೇಧಿತ ಮಾದಕ ವಸ್ತುಗಳನ್ನು ಸರಬರಾಜು ಮಾಡುತ್ತಿದ್ದ ಅಪರಿಚಿತ ವ್ಯಕ್ತಿಗಳ ಪತ್ತೆ ಕಾರ್ಯ ಮುಂದುವರೆದಿದೆ ಎಂದು ತಿಳಿಸಿದರು.

ಯಲಹಂಕ ಪೊಲೀಸರು ಇಸ್ರೋ ಲೇಔಟ್ ಬಳಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ ನೈಜೀರಿಯಾದ ಸ್ಯಾಮ್ಯುಯೆಲ್ (44)ಬಂಧಿಸಿ 2 ಕೋಟಿ ಮೌಲ್ಯದ 2ಕೆಜಿ ತೂಕದ ಎಂಡಿಎಂಎ ಜಪ್ತಿ ಮಾಡಲಾಗಿದೆ ಎಂದು ಹೇಳಿದರು.

ಆಡುಗೋಡಿ ಪೊಲೀಸರು ಇಬ್ಬರು ಅಂತರರಾಜ್ಯ ಡ್ರಗ್ ಪೆಡ್ಲರ್‌ಗಳನ್ನು ಬಂಧಿಸಿ 32.40 ಲಕ್ಷ ಮೌಲ್ಯದ 162 ಗ್ರಾಂ ಹೆರಾಯಿನ್ ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದರು. ಮಡಿವಾಳ ಪೊಲೀಸರು ಮೂವರು ಡ್ರಗ್ ಪೆಡ್ಲರ್‌ಗಳನ್ನು ಬಂಧಿಸಿ 22ಲಕ್ಷ ಮೌಲ್ಯದ 28 ಕೆಜಿ ಗಾಂಜಾ 220 ಗ್ರಾಂ ಹೈಡ್ರೋಗಾಂಜಾ ವಶಪಡಿಸಿಕೊಳ್ಳಲಾಗಿದೆ.

ಭಾರತೀನಗರ ಪೊಲೀಸರು ಗಾಂಜಾ ಮಾರಾಟ ಮಾಡುತ್ತಿದ್ದ ಪುಲಕೇಶಿನಗರದ ರೌಡಿ ಶ್ಯಾಮ್ ಪವನ್ ಅಲಿಯಾಸ್ ಪವನ್ (23)ಕಮ್ಮನಹಳ್ಳಿಯ ಅಲನ್ ಕೆಣ್ಣಡಿ(30)ಯನ್ನು ಬಂಧಿಸಿ 13ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ ಎಂದು ಹೇಳಿದರು.

ಎಂಡಿಎ ಆಯುಕ್ತರ ಕಚೇರಿ ಮುಂದೆ ದಿಢೀರ್ ತಮಟೆ ಚಳವಳಿ

ಖಾಸಗಿಯವರು ಕಬಳಿಸುತ್ತಿರುವ ಪ್ರಾಧಿಕಾರದ ಆಸ್ತಿ ಉಳಿಸುವಂತೆ ಆಗ್ರಹ

ಮೈಸೂರು, ಮಾ.31(ಬಿಎಲ್‌ಯು)– ಖಾಸಗಿ ವ್ಯಕ್ತಿಗಳು ಕಬಳಿಸುತ್ತಿರುವ ಮೈಸೂರು ಅಭಿವೃದ್ಧಿ ಪ್ರಾಧಿಕಾರದ (ಎಂಡಿಎ) ಆಸ್ತಿಗಳನ್ನು ಉಳಿಸುವಂತೆ ಆಗ್ರಹಿಸಿ ದಲಿತ ಸಂಘರ್ಷ ಸಮಿತಿಯವರು ಇಂದು ಪ್ರಾಧಿಕಾರದ ಆಯುಕ್ತ ಕೆ.ಆರ್.ರಕ್ಷಿತ್ ಅವರ ಕಚೇರಿ ಮುಂದೆ ದಿಢೀರ್ ತಮಟೆ ಚಳವಳಿ ನಡೆಸಿದರು.

ರಕ್ಷಿತ್ ಅವರ ಕಚೇರಿ ಬಾಗಿಲ ಮುಂದೆ ನಿಂತು ಡಿಎಸ್‌ಎಸ್‌ನವರು ತಮಟೆ ಬಾರಿಸಿ, ಪ್ರತಿಭಟನೆ ನಡೆಸಿದರು. ಪ್ರಾಧಿಕಾರದ ಆಸ್ತಿ ಉಳಿಸಿ ಎಂದು ಘೋಷಣೆಗಳನ್ನು ಕೂಗಿದರು.

ದಿಢೀರ್ ಬಂದು ತಮಟೆ ಬಾರಿಸಿದ ಕಾರಣ ಮುಡಾ ಕಚೇರಿ ಸಂಕೀರ್ಣದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಯಿತು. ಈ ವೇಳೆ ಪ್ರತಿಭಟನೆ ಕೈಬಿಡುವಂತೆ ಪೊಲೀಸರು ಮಾಡಿದ ಪ್ರಯತ್ನ ವಿಫಲವಾಯಿತು.

ಮೈಸೂರಿನ ದೇವನೂರು ಗ್ರಾಮದ ಸರ್ವೆ ನಂಬರ್ 208 ಹಾಗೂ 184/6ರ ಭೂಮಿ ಎಂಡಿಎಗೆ ಸೇರಿದೆ. ಆದರೆ ಖಾಸಗಿ ವ್ಯಕ್ತಿಗಳು ಇದನ್ನು ಅತಿಕ್ರಮಿಸಿಕೊಂಡು ನಿವೇಶನಗಳಾಗಿ ಮಾರ್ಪಡಿಸಿ ಮಾರಾಟ ಮಾಡುತ್ತಿದ್ದಾರೆ ಎಂದು ಪ್ರತಿಭಟನಾಕಾರರು ಈ ವೇಳೆ ಆರೋಪಿಸಿದರು.

ಈ ಸಂಬಂಧ ದಾಖಲಾತಿ ಸಮೇತ ಪ್ರಾಧಿಕಾರಕ್ಕೆ ದೂರು ನೀಡಿದ್ದರೂ ಅದನ್ನು ತಡೆಯುವ ಗೋಜಿಗೆ ಹೋಗಿಲ್ಲ. ಯಾವುದೇ ಕ್ರಮಕ್ಕೆ ಮುಂದಾಗದೆ ನಾವು ಹೇಳುವ ಮಾತನ್ನು ಕೇಳುವ ಮನಸ್ಥಿತಿ ಅಧಿಕಾರಿಗಳಿಗಿಲ್ಲ. ಈ ಹಿನ್ನೆಲೆಯಲ್ಲಿ ತಮಟೆ ಬಾರಿಸಿ, ಅದರ ಶಬ್ದದ ಮೂಲಕ ಕಣ್ತೆರೆಸುವ ಪ್ರಯತ್ನ ಮಾಡಿದ್ದೇವೆ ಎಂದು ತಿಳಿಸಿದರು.

ಪ್ರಾಧಿಕಾರದ ಆಸ್ತಿ ಉಳಿಸುವಂತೆ ಮನವಿ ಸಲ್ಲಿಸಿದರೂ ಸಕರಾತ್ಮಕವಾಗಿ ಸ್ಪಂದಿಸದ ಹಿನ್ನೆಲೆಯಲ್ಲಿ ತಮಟೆ ಚಳವಳಿ ಹಮ್ಮಿಕೊಳ್ಳಬೇಕಾಯಿತು ಎಂದು ವಿವರಿಸಿದರು.

ತರುವಾಯ ತಮ್ಮ ಕಚೇರಿಗೆ ಅವರನ್ನು ಆಹ್ವಾನಿಸಿದ ರಕ್ಷಿತ್, ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸಿ, ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.



ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಸ್ತಿ ಖಾಸಗಿಯವರ ಪಾಲಾಗದಂತೆ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ದಲಿತ ಸಂಘರ್ಷ ಸಮಿತಿಯವರು ಪ್ರಾಧಿಕಾರದ ಆಯುಕ್ತ ಕೆ.ಆರ್.ರಕ್ಷಿತ್ ಅವರ ಕಚೇರಿ ಮುಂದೆ ಮಂಗಳವಾರ ತಮಟೆ ಚಳವಳಿ ನಡೆಸಿದರು.

ಪೊಲೀಸರು ಚಾಪೆ ಸಂದಿ ನುಸುಳಿದರೆ ಕೈದಿಗಳು ಕೊಚ್ಚೆ ನೀರಲ್ಲಿ ಮೊಬೈಲ್ ಅಡಗಿಸಬಲ್ಲರು!?

ಬೆಂಗಳೂರು, ಮಾ.31(ಕೆಎಂಶಿ)– ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ವಿಡಿಯೋ ಚಿತ್ರೀಕರಿಸಿದ ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲು ಮುಂದಾದ ಸಿಬ್ಬಂದಿಗೆ ಕೈದಿಗಳು ಜೀವ ಬೆದರಿಕೆ ಹಾಕಿರುವುದು ಬೆಳಕಿಗೆ ಬಂದಿದೆ.

ಮೊಬೈಲ್ ವಶಕ್ಕೆ ಪಡೆಯಲು ಮುಂದಾದ ಜೈಲು ಸಿಬ್ಬಂದಿಗೆ ಜೀವ ಬೆದರಿಕೆ ಹಾಕಿದ ರಿಜ್ವಾನ್ ಅಲಿ ಮತ್ತು ಮೊಹಮ್ಮದ್ ಸಾಧಿಕ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಇಬ್ಬರು ಕೈದಿಗಳು ಸಿಬ್ಬಂದಿಗೆ ನೀವು ಮನೆಗೆ ಹೋಗುವುದಿಲ್ಲ, ಸ್ಮಶಾನಕ್ಕೆ ಕಳುಹಿಸುತ್ತೇವೆ ಎಂದು ಬೆದರಿಕೆ ಹಾಕಿದ್ದು, ಈ ಬಗ್ಗೆ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

21 ಮೊಬೈಲ್ ಜಪ್ತಿ: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಕಳೆದ ಹತ್ತು ದಿನಗಳಲ್ಲಿ ಜೈಲು ಅಧಿಕಾರಿಗಳು 21 ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಬಹುತೇಕ ಫೋನ್‌ಗಳನ್ನು ಹಾಲಿನ ಕವರ್‌ಗಳಲ್ಲಿ ಪ್ಯಾಕ್ ಮಾಡಿ ಸ್ನಾನದ ಮನೆಯ ಕೊಳಚೆ ನೀರು ಹರಿಯುವ ಪೈಪ್‌ಗಳಲ್ಲಿ ಮರೆಮಾಚಿ ಇಟ್ಟಿರುವುದು ಪತ್ತೆಯಾಗಿದೆ.

ಜೈಲಿನೊಳಗೆ ಜಾಮರ್ ವ್ಯವಸ್ಥೆ ಇದ್ದರೂ ನೆಟ್‌ವರ್ಕ್ ಸಿಗುತ್ತಿರುವುದರ ಬಗ್ಗೆ ಡಿಜಿಪಿ ಅಲೋಕ್ ಕುಮಾರ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆ ಜೈಲರ್‌ಗಳು ಹಾಗೂ ವಾರ್ಡರ್‌ಗಳ ಶಾಮೀಲು ಇರುವ ಶಂಕೆ ವ್ಯಕ್ತವಾಗಿದ್ದು, ಎಲ್ಲರ ವಿರುದ್ಧವು ವಿಚಾರಣೆ ನಡೆಸಲು ಸೂಚಿಸಲಾಗಿದೆ. ಎಸ್‌ಪಿ ಅಂಶುಕುಮಾರ್ ನೇತೃತ್ವದಲ್ಲಿ ಕೆಲ ಅನುಮಾನಿತ ವಾರ್ಡರ್‌ಗಳನ್ನು ವಿಚಾರಣೆಗೊಳಪಡಿಸಲಾಗಿದೆ.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಶಸ್ತಿ ಪ್ರಕಟ

ಮೈಸೂರಿನ ಹಲವರು ಭಾಜನ

ಬೆಂಗಳೂರು, ಮಾ.31– ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯೂಜೆ)ದ 2024ನೇ ಸಾಲಿನ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದೆ.

ಬೀದರ್‌ನಲ್ಲಿ ಏಪ್ರಿಲ್ 11 ಮತ್ತು 12 ರಂದು ನಡೆಯಲಿರುವ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮತ್ತು ಪ್ರಧಾನ ಕಾರ್ಯದರ್ಶಿ ಜಿ.ಸಿ. ಲೋಕೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಭಾಗದ ಪುರಸ್ಕೃತರು: ಆರ್.ಎಲ್.ವಾಸುದೇವರಾವ್ ಪ್ರಶಸ್ತಿ (ವನ್ಯ ಪ್ರಾಣಿಗಳ ವರದಿ)ಗೆ ವಿಜಯ ಕರ್ನಾಟಕದ ಮೈಸೂರಿನ ಮುಖ್ಯ ವರದಿಗಾರ ನಾಗರಾಜ್ ನವೀಮನೆ, ಗಿರಿಧರ್ ಪ್ರಶಸ್ತಿ (ಅತ್ಯುತ್ತಮ ಅಪರಾಧ ವರದಿ)ಗೆ ವಿಜಯವಾಣಿಯ ಪಿ.ಕೆ.ರವಿಕುಮಾರ್, ಖಾದ್ರಿ ಶಾಮಣ್ಣ ಪ್ರಶಸ್ತಿ(ಅತ್ಯುತ್ತಮ ರಾಜಕೀಯ ವಿಮರ್ಶೆ)ಗೆ ಸುದ್ದಿಮೂಲ ಪತ್ರಿಕೆಯ ದಯಾಶಂಕರ ಮೈಲಿ, ಗಣೇಶ್.ಜಿ. ದತ್ತಿ ಪ್ರಶಸ್ತಿಗೆ ಆಂದೋಲನದ ಮಹಾಂತೇಶ್, ಅತ್ಯುತ್ತಮ ಪುಟ ವಿನ್ಯಾಸಗಾರ ಪ್ರಶಸ್ತಿಗೆ ಪ್ರತಿನಿಧಿ ಪತ್ರಿಕೆಯ ಸುದೇಶ್ ಭಾಜನರಾಗಿದ್ದಾರೆ.



ದಯಾಶಂಕರ ಮೈಲಿ

ಜಿ.ನಾರಾಯಣಸ್ವಾಮಿ ಪ್ರಶಸ್ತಿ(ಅತ್ಯುತ್ತಮ ಗ್ರಾಮಾಂತರ ವರದಿ) ಕೊಡಗಿನ ಶಕ್ತಿ ಪತ್ರಿಕೆಯ ಕೆ.ಎ.ಇಸ್ಮಾಯಿಲ್, ಸುದ್ದಿಚಿತ್ರ(ಛಾಯಾಚಿತ್ರ ಸಹಿತ ವರದಿ) ಪ್ರಶಸ್ತಿ ಮಂಡ್ಯ ಜಿಲ್ಲೆ ಕಿಕ್ಕೇರಿಯ ಕೆ.ವಿ.ಬಲರಾಮ್, ಗುರುಲಿಂಗಸ್ವಾಮಿ ಹೋಳಿಮಠ ಪ್ರಶಸ್ತಿ ಕನ್ನಡಪ್ರಭದ ಚಾಮರಾಜನಗರ ವರದಿಗಾರ ದೇವರಾಜ ಕಪ್ಪಸೋಗೆ, ಅಭಿವೃದ್ಧಿ/ಸಾಮಾಜಿಕ/ ಮಾನವೀಯ ವರದಿ ಪ್ರಶಸ್ತಿ ಹಾಸನದ ಆಕಾಶವಾಣಿ–ದೂರದರ್ಶನದ ಮೋಹನಕೃಷ್ಣ ಅವರಿಗೆ ಸಂದಿದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಪಂದ್ಯ ವೀಕ್ಷಿಸಲು ಬಂದವರ ಜೇಬಿಗೆ ಕತ್ತರಿ; ಲಕ್ಷಾಂತರ ಮೌಲ್ಯದ ಮೊಬೈಲ್ ವಶಕ್ಕೆ

ಪ್ರಮುಖ ಆರೋಪಿ ಜಾರ್ಖಂಡ್‌ಖದೀಮ; ಬಾಲಕರ ತಯಾರು ಮಾಡಿ ವ್ಯವಸ್ಥಿತ ರೀತಿ ಕಳ್ಳತನ ಬಯಲಿಗೆ



ಬೆಂಗಳೂರು, ಮಾ.31(ಕೆಎಂಶಿ)– ಮಹಾನಗರ ಬೆಂಗಳೂರಿನಲ್ಲಿ ನಡೆದ ಐಪಿಎಲ್ ಉದ್ಘಾಟನಾ ಪಂದ್ಯ ವೀಕ್ಷಿಸಲು ಬಂದಿದ್ದ ಕ್ರೀಡಾ ಪ್ರೇಮಿಗಳ ಜೇಬುಗಳ್ಳತನ ಮತ್ತು ಮೊಬೈಲ್ ಕಳ್ಳತನ ದೊಡ್ಡ ಪ್ರಮಾಣದಲ್ಲಿ ನಡೆದಿತ್ತು. ಪಂದ್ಯ ವೀಕ್ಷಿಸಲು ಬಂದ ಅನೇಕರು ತಮ್ಮ ಮೊಬೈಲ್ ಮತ್ತು ಹಣ ಕಳೆದುಕೊಂಡು ಪೊಲೀಸರಿಗೆ ದೂರು ನೀಡಿದ್ದರು.

ಇದನ್ನು ಗಂಭೀರವಾಗಿ ಪರಿಗಣಿಸಿದ ಪೊಲೀಸರು ಕ್ರೀಡಾಂಗಣದಲ್ಲಿ ಅಳವಡಿಸಲಾಗಿದ್ದ ಸಿಸಿ ಕ್ಯಾಮರಾಗಳ ದೃಶ್ಯಾವಳಿಗಳನ್ನು ಪಡೆದು ಪರಿಶೀಲನೆ ನಡೆಸಿದಾಗ ಅನೇಕ ಮಂದಿ ಅಪ್ರಾಪ್ತ ಬಾಲಕರು ಜೇಬು ಕಳ್ಳತನ ಮತ್ತು ಮೊಬೈಲ್ ಕದಿಯುತ್ತಿರುವುದು ಪತ್ತೆಯಾಗಿದೆ.

ಈ ಸಂಬಂಧ ಕಾರ್ಯಾಚರಣೆ ನಡೆಸಿದ ಪೊಲೀಸರು ಇದರ ಹಿಂದೆ ಅತ್ಯಂತ ವ್ಯವಸ್ಥಿತ ಜಾಲವೊಂದು ಕೆಲಸ ಮಾಡಿರುವುದನ್ನು ಪತ್ತೆ ಹಚ್ಚಿದ್ದಾರೆ. ಅಷ್ಟೇ ಅಲ್ಲ, ಸುಮಾರು 18 ಲಕ್ಷ ಮೌಲ್ಯದ 21 ಮೊಬೈಲ್‌ಗಳನ್ನು ಜಪ್ತಿ ಮಾಡಿದ್ದಾರೆ.


ಜಾಲದ ಓರ್ವ ಪ್ರಮುಖ ಆರೋಪಿ ಹಾಗೂ ಹಲವು ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕರನ್ನು ವಶಕ್ಕೆ ಪಡೆದು ಪ್ರಕರಣದ ತನಿಖೆಯನ್ನು ಎಲ್ಲಾ ಆಯಾಮಗಳಲ್ಲಿ ಕೈಗೊಳ್ಳಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ

ಪ್ರಮುಖ ಆರೋಪಿ ಜಾರ್ಖಂಡ್ ಮೂಲದವನು ಎಂದು ಗೊತ್ತಾಗಿದೆ. ಈತ ಕಳ್ಳತನಕ್ಕಾಗಿಯೇ ವ್ಯವಸ್ಥಿತ ಜಾಲ ರಚಿಸಿಕೊಂಡು ಹೊರರಾಜ್ಯದಿಂದ ಬಾಲಕರನ್ನು ಕರೆದುಕೊಂಡು ಬಂದು ಹೋಟೆಲ್‌ನಲ್ಲಿರಿಸಿಕೊಂಡಿದ್ದಾನೆ. ಮೊದಲೇ ಖರೀದಿಸಿದ್ದ ಟಿಕೆಟ್‌ನಿಂದ ಎಲ್ಲಾ ಬಾಲಕರನ್ನು ಕ್ರೀಡಾಂಗಣದ ಒಳಗೆ ಕಳುಹಿಸಿ ಇತರೆ ವೀಕ್ಷಕರ ಗಮನ ಬೇರೆಡೆ ಸೆಳೆದು ಕಳ್ಳತನ ಮಾಡಿಸಿದ್ದಾನೆ ಎಂದು ಹೇಳಿದರು.

ಈ ಜಾಲದಿಂದ ಬೇರೆ ರಾಜ್ಯದ ನಗರಗಳಲ್ಲಿ ಮೊಬೈಲ್ ಕಳ್ಳತನ ಮಾಡಿರುವ ಶಂಕೆಯಿದ್ದು, ಅಲ್ಲಿನ ಪೊಲೀಸರ ಜೊತೆ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳಲಾಗುವುದು ಎಂದರು.

ಬಂಧಿತ ಜಾಲದಿಂದ ವಿವಿಧ ಕಂಪನಿಯ 21 ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದು, ಆತನ ಹಲವು ಸಹಚರರು ಹಾಗೂ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕರನ್ನು ತನಿಖೆಗೆ ಒಳಪಡಿಸಿ ತನಿಖೆ ಮುಂದುವರೆಸಲಾಗಿದೆ ಎಂದರು.

ಅಭಿನಂದನೆ...



ಭಾರತೀಯ ಜೀವ ವಿಮಾ ನಿಗಮ ಶಾಖೆ 4(ವಿಜಯನಗರ)ಯ ವನಲಕ್ಷ್ಮಿ ವಂಟೋ ನಿವೃತ್ತ ಹೊಂದಿದ್ದು, ಅವರನ್ನು ಶಾಖಾಧಿಕಾರಿ ಮೋಹನ್, ಎಲ್‌ಐಸಿ ಪಿಂಚಣಿದಾರರ ಕ್ಷೇಮಾಭಿವೃದ್ಧಿ ಸಂಘದ ಉಪಾಧ್ಯಕ್ಷ ಸೀತಾರಾಮ್‌ಭಟ್, ವಿಭಾಗದ ಅಧ್ಯಕ್ಷ ಪಾರ್ಥ ಸಾರಥಿ, ಕಾರ್ಯದರ್ಶಿ ಬಿ.ಪುಟ್ಟಸ್ವಾಮಿ, ಸಹ ಕಾರ್ಯದರ್ಶಿ ಬೂಕನಕೆರೆ ವಿಜೇಂದ್ರ ಅಭಿನಂದಿಸಿದರು.

ಮಕ್ಕಳಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು,ಮಾ.31–ಸುಯೋಗ್ ಆಸ್ಪತ್ರೆ ವತಿಯಿಂದ ಏ.4ರವರೆಗೆ ಬೆಳಗ್ಗೆ 10ಗಂಟೆಯಿಂದ ಸಂಜೆ 6 ಗಂಟೆವರೆಗೆ ಮಕ್ಕಳ ಆರೋಗ್ಯ ಉಚಿತ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ. ಶಿಬಿರದಲ್ಲಿ ಮಕ್ಕಳಲ್ಲಿ ಕಂಡುಬರುವ ಪದೇ ಪದೆ ಜ್ವರ ಅಥವಾ ಶೀತ, ತೂಕ ಕಡಿಮೆ ಅಥವಾ ಬೆಳವಣಿಗೆಯಲ್ಲಿ ವಿಳಂಬ, ನಿರಂತರ ಕೆಮ್ಮು, ಉಸಿರಾಟದ ತೊಂದರೆ, ಕಡಿಮೆ ಆಹಾರ ಸೇವನೆ, ಹೊಟ್ಟೆ ನೋವು ಅಥವಾ ಅಜೀರ್ಣ ಸಮಸ್ಯೆಗಳಿರುವ ಮಕ್ಕಳು ಶಿಬಿರದಲ್ಲಿ ಪಾಲ್ಗೊಳ್ಳಬಹುದು. ಹೆಚ್ಚಿನ ಮಾಹಿತಿಗೆ 0821–256 6966, 9986399862 ಸಂಪರ್ಕಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದಾಗಿದೆ.

ಚಂದನವನ ಫಿಲ್ಮ್ ಕ್ರಿಟಿಕ್ಸ್ ಅಕಾಡೆಮಿ ಅವಾರ್ಡ್ 2026

ರಿಷಬ್ ಶೆಟ್ಟಿ, ಆಶಿಕಾ ರಂಗನಾಥ್ ಅತ್ಯುತ್ತಮ ನಟ–ನಟಿ

ಬೆಂಗಳೂರು: 7ನೇ ವರ್ಷದ 'ಚಂದನವನ ಫಿಲ್ಮ್ ಕ್ರಿಟಿಕ್ಸ್ ಅಕಾಡೆಮಿ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಬೆಂಗಳೂರಿನ ಜ್ಞಾನ ಜ್ಯೋತಿ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ನಡೆಯಿತು. 2025ನೇ ಸಾಲಿನಲ್ಲಿ ಬಿಡುಗಡೆಯಾದ 'ಕಾಂತಾರ: ಚಾಪ್ಟರ್ 1' ಸಿನಿಮಾದ ಅಭಿನಯಕ್ಕಾಗಿ ರಿಷಬ್ ಶೆಟ್ಟಿ ಅತ್ಯುತ್ತಮ ನಟ ಪ್ರಶಸ್ತಿ ಪಡೆದುಕೊಂಡರು. 'ಗತ ವೈಭವ' ಸಿನಿಮಾದ ನಟನೆಗಾಗಿ ಆಶಿಕಾ ರಂಗನಾಥ್ ಅತ್ಯುತ್ತಮ ನಟಿ ಪ್ರಶಸ್ತಿ ಪಡೆದರು.

ಸುಬ್ಬಯ್ಯ ನಾಯ್ಡು ಅವರ ಮರಿಮೊಮ್ಮಗ ಸುಕ್ರತ್ ಸೃಜನ್ ಲೋಕೇಶ್ ಅವರಿಗೆ ವಿಶೇಷ ಗೌರವ ಪ್ರಶಸ್ತಿ ಪ್ರದಾನ ಮಾಡಲಾಯಿತು. ಹಿರಿಯ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ಅವರಿಗೆ ಜೀವಮಾನ ಸಾಧನೆಯ ಗೌರವವನ್ನು ನೀಡಲಾಯಿತು.

ಪ್ರಶಸ್ತಿ ಪಡೆದವರು: ಅತ್ಯುತ್ತಮ ಚೊಚ್ಚಲು ನಿರ್ಮಾಣ: ನಿವೇದಿತಾ ಶಿವರಾಜ್ ಕುಮಾರ್ (ಫೈರ್ ಫ್ಲೈ), ಅತ್ಯುತ್ತಮ ಚೊಚ್ಚಲ ಬರಹಗಾರ: ಸುಮಂತ್ ಭಟ್ (ಮಿಥ್ಯ), ಅತ್ಯುತ್ತಮ ಚೊಚ್ಚಲ ಸಿನಿಮಾ ನಿರ್ದೇಶನ : ಭೀಮರಾವ್ ಪಿ (ಹೆಬ್ಬುಲಿ ಕಟ್), ಅತ್ಯುತ್ತಮ ಚೊಚ್ಚಲ ನಟಿ: ಪ್ರಿಯಾಂಕಾ ಆಚಾರ್ (ಏಳುಮಲೆ), ಅತ್ಯುತ್ತಮ ಚೊಚ್ಚಲ ನಟ: ಕಿರಿಟಿ (ಜ್ಯೂನಿಯರ್) ಹಾಗೂ ದುಷ್ಯಂತ್ (ಗತ ವೈಭವ), ಅತ್ಯುತ್ತಮ ಬಾಲ ನಟ: ಅತೀಶ್ ಶೆಟ್ಟಿ (ಮಿಥ್ಯ), ಅತ್ಯುತ್ತಮ ವಿಎಫೆಕ್ಸ್: ಕೆ.ವಿ, ಸಂಜಿತ್ (ಕಾಂತಾರ ಚಾಪ್ಟರ್ 1), ಅತ್ಯುತ್ತಮ ಕಲಾ ನಿರ್ದೇಶನ : ಬೆಂಗಲನ್ ಮತ್ತು ಧರಣಿ ಗಂಗಾಪುತ್ರ (ಕಾಂತಾರ ಚಾಪ್ಟರ್ 1), ಅತ್ಯುತ್ತಮ ಸಾಹಸ ನಿರ್ದೇಶನ: ಅರ್ಜುನ್ ರಾಜ್ (ಕಾಂತಾರ ಚಾಪ್ಟರ್ 1) ಅತ್ಯುತ್ತಮ ಸಂಕಲನ: ಕೆ.ಎಂ ಪ್ರಕಾಶ್ (ಏಳುಮಲೆ).

ಅತ್ಯುತ್ತಮ ಸಂಭಾಷಣೆ: ಜೆ.ಪಿ. ತುಮಿನಾಡು (ಸು ಫ್ರಂ ಸೋ), ಅತ್ಯುತ್ತಮ ಸಿನಿಮಾಟೋಗ್ರಫಿ: ಅರವಿಂದ್ ಕಶ್ಯಪ್ (ಕಾಂತಾರ ಚಾಪ್ಟರ್ 1), ಅತ್ಯುತ್ತಮ ನೃತ್ಯ ನಿರ್ದೇಶನ: ವಿನಾಯಕ ಆಚಾರ್ಯ (ಸು ಫ್ರಂ ಸೋ), ಅತ್ಯುತ್ತಮ ಗಾಯಕ ಅಬ್ಬಿ ವಿ (ಕಾಂತಾರ ಚಾಪ್ಟರ್ 1), ಅತ್ಯುತ್ತಮ ಗಾಯಕಿ: ಸಾನ್ವಿ ಸುದೀಪ್ (ಮಾರ್ಕ್), ಅತ್ಯುತ್ತಮ ಚಿತ್ರ ಸಾಹಿತ್ಯ: ಸಿಂಪಲ್ ಸುನಿ (ಗತ ವೈಭವ), ಅತ್ಯುತ್ತಮ ಹಿನ್ನೆಲೆ ಸಂಗೀತ: ಸಂದೀಪ್ ತುಳಸಿದಾಸ್ (ಸು ಫ್ರಂ ಸೋ), ಅತ್ಯುತ್ತಮ ಸಂಗೀತ: ಅಜನೀಶ್ ಲೋಕನಾಥ್ (ಕಾಂತಾರ ಚಾಪ್ಟರ್ 1), **ಅತ್ಯುತ್ತಮ ಚಿತ್ರಕಥೆ:** ಪುನೀತ್ ರಂಗಸ್ವಾಮಿ (ಏಳುಮಲೆ), ಅತ್ಯುತ್ತಮ ಸಹ ನಟಿ: ಸಂಧ್ಯಾ ಅರಕೆರೆ (ಸು ಫ್ರಂ ಸೋ), ಅತ್ಯುತ್ತಮ ಸಹ ನಟ: ಮಹಾಂತೇಶ್ ಹಿರೇಮಠ (ಹೆಬ್ಬುಲಿ ಕಟ್), ಅತ್ಯುತ್ತಮ ನಿರ್ದೇಶಕ: ರಿಷಬ್ ಶೆಟ್ಟಿ (ಕಾಂತಾರ ಚಾಪ್ಟರ್ 1), ಅತ್ಯುತ್ತಮ ನಟಿ : ಆಶಿಕಾ ರಂಗನಾಥ್ (ಗತ ವೈಭವ), ಅತ್ಯುತ್ತಮ ನಟ: ರಿಷಬ್ ಶೆಟ್ಟಿ (ಕಾಂತಾರ ಚಾಪ್ಟರ್, ಅತ್ಯುತ್ತಮ ಚಿತ್ರ ಕಾಂತಾರ ಚಾಪ್ಟರ್ 1), ಜೀವಮಾನ ಸಾಧನೆ ಪ್ರಶಸ್ತಿ: ಎಸ್.ವಿ.ರಾಜೇಂದ್ರ ಸಿಂಗ್ ಬಾಬು.



ರಿಷಬ್ ಶೆಟ್ಟಿ, ಆಶಿಕಾ ರಂಗನಾಥ್

ಮುಖ್ಯ ಅತಿಥಿಗಳಾಗಿ ರಾಷ್ಟ್ರ ಪ್ರಶಸ್ತಿ ಪುರಸ್ಕೃತ ನಿರ್ದೇಶಕ ಗಿರೀಶ್ ಕಾಸರವಳ್ಳಿ, ರಾಷ್ಟ್ರ ಪ್ರಶಸ್ತಿ ಪುರಸ್ಕೃತ ನಟಿ ತಾರಾ ಅನುರಾಧಾ, ಖ್ಯಾತ ನಿರ್ಮಾಪಕ ರಾಕ್ ಲೈನ್ ವೆಂಕಟೇಶ್, ಖ್ಯಾತ ನಿರ್ದೇಶಕ ಬಿ. ಸುರೇಶ, ಹಿರಿಯ ನಟಿ ಗಿರಿಜಾ ಲೋಕೇಶ್, ಖ್ಯಾತ ನಟಿ ಪೂಜಾ ಗಾಂಧಿ, ಬಿಗ್ ಬಾಸ್ ಖ್ಯಾತಿಯ ಅಶ್ವಿನಿ ಗೌಡ, ಖ್ಯಾತ ನಟ ಮಾಸ್ಟರ್ ಮಂಜುನಾಥ್ ಮುಂತಾದವರು ಭಾಗಿ ಆಗಿದ್ದರು.

ಅಂಬರ್ಸೋನ್ ಪ್ರಾಪರ್ಟೀಸ್ ಮ್ಯಾನೇಜಿಂಗ್ ಡೈರೆಕ್ಟರ್ ಯಶ್ವಂತ್ ಕುಮಾರ್, ಕಿರಣ್ ಕುಮಾರ್, ಕೀರ್ತಿ, ಅಶ್ವಸೂರ್ಯ ರಿಯಾಲಿಟಿಸ್ ಡೈರೆಕ್ಟರ್ ಎಸ್. ರಂಜಿತ್ ಕುಮಾರ್ ಅಲೈನ್ಸ್ ಯೂನಿವರ್ಸಿಟಿಯ ರೆಜಿಸ್ಟರ್ ಸುರೇಖಾ ಶೆಟ್ಟಿ ಸೇರಿದಂತೆ ಹಲವು ಗಣ್ಯರು ಆಗಮಿಸಿದ್ದರು.

ಅಪ್ರಾಪ್ತರಿಗೆ ಬೈಕ್, ಸ್ಕೂಟರ್ ನೀಡಬೇಡಿ; ಸಂಚಾರ ನಿಯಮ ಕಡ್ಡಾಯ ಪಾಲಿಸಿ

ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ತಾಕೀತು

ಮೈಸೂರು, ಮಾ.31(ಬಿಎಲ್‌ಯು)– ಅಪ್ರಾಪ್ತರಿಗೆ ಬೈಕ್, ಸ್ಕೂಟರ್ ಸೇರಿದಂತೆ ಯಾವುದೇ ವಾಹನ ಚಾಲನೆ ಮಾಡಲು ಅವಕಾಶ ನೀಡಬೇಡಿ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ತಾಕೀತು ಮಾಡಿದ್ದಾರೆ.

ಮೈಸೂರಿನ ಕಡಕೊಳದ ಸಿರೇನ್ ಇಂಡಿಯಾ ಕಂಪನಿಯು ರಸ್ತೆ ಸುರಕ್ಷತಾ ಅಭಿಯಾನದ ಅಂಗವಾಗಿ ಆಯೋಜಿಸಿದ್ದ ಉಚಿತ ಹೆಲ್ಮೆಟ್ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಂಚಾರ ನಿಯಮ ಪಾಲನೆ, ವೇಗ ಮಿತಿ ಸೇರಿದಂತೆ ಇತರೆ ಮಾಹಿತಿ ಮಕ್ಕಳಿಗೆ ಇರುವುದಿಲ್ಲ. ಇದರಿಂದ ಅಪಘಾತವಾಗುತ್ತದೆ. ಆದ ಕಾರಣ ಅಪ್ರಾಪ್ತರಿಗೆ ಬೈಕ್, ಸ್ಕೂಟರ್ ಸೇರಿದಂತೆ ಯಾವುದೇ ವಾಹನ ಚಾಲನೆ ಮಾಡಲು ಅವಕಾಶ ನೀಡಬೇಡಿ ಎಂದು ಸಲಹೆ ನೀಡಿದರು.

ಎಷ್ಟೇ ಗಡಿಬಿಡಿ ಇದ್ದರೂ ಹೆಲ್ಮೆಟ್ ಧರಿಸುವುದನ್ನು ಮರೆಯಬೇಡಿ, ಮೊಬೈಲ್‌ನಲ್ಲಿ ಮಾತನಾಡುತ್ತಾ ಹಾಗೂ ಮದ್ಯ ಸೇವಿಸಿ ವಾಹನ ಚಲಾಯಿಸಬೇಡಿ. ಈ ಎಲ್ಲಾ ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಅಪಘಾತ ಹಾಗೂ ಪ್ರಾಣಾಪಾಯದಿಂದ ಮುಕ್ತರಾಗಿ ಎಂದು ಕಿವಿಮಾತು ಹೇಳಿದರು.

ಬಹಳಷ್ಟು ಮಂದಿ ಹೆಲ್ಮೆಟ್ ಧರಿಸುವುದಿಲ್ಲ, ಲೈಸೆನ್ಸ್ ಕೂಡ ಮಾಡಿಸಿಕೊಂಡಿರುವುದಿಲ್ಲ. ಲೈಸೆನ್ಸ್ ಹೊಂದಿದ್ದರೂ ಅದನ್ನು ನವೀಕರಣ ಮಾಡಿಸಿಕೊಂಡಿರುವುದಿಲ್ಲ. ಒಂದು ವೇಳೆ ಅಪಘಾತ ಸಂಭವಿಸಿದಾಗ ಮೃತಪಟ್ಟರೆ ಪರಿಹಾರ ಮೊತ್ತ ಸಿಗುವುದಿಲ್ಲ ಎಂದು ಮಲ್ಲಿಕಾರ್ಜುನ ಬಾಲದಂಡಿ ಎಚ್ಚರಿಸಿದರು.



ಮೈಸೂರಿನ ಕಡಕೊಳದ ಸಿರೇನ್ ಇಂಡಿಯಾ ಕಂಪನಿಯು ಆಯೋಜಿಸಿದ್ದ ರಸ್ತೆ ಸುರಕ್ಷತಾ ಅಭಿಯಾನ ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಅವರು ಉಚಿತ ಹೆಲ್ಮೆಟ್ ವಿತರಿಸಿದರು.

ತರುವಾಯ ಮಾತನಾಡಿದ ಎಎಸ್ಪಿ ಪಿ.ಮಲ್ಲಿಕ್, ಮೈಸೂರು ಜಿಲ್ಲೆಯಲ್ಲಿ ಪ್ರತಿನಿತ್ಯ ಶೇಕಡ 10 ರಷ್ಟು ಅಪಘಾತಗಳಾಗುತ್ತಿದ್ದು, ಇದರಲ್ಲಿ ಕೆಲವರು ಪ್ರಾಣ ಕಳೆದು ಕೊಳ್ಳುತ್ತಿದ್ದಾರೆ. ಕೆಲವರು ಅಂಗವಿಕಲರಾಗುತ್ತಿದ್ದಾರೆ. ಅಪಘಾತದಿಂದ ಪಾರಾಗಲು ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಎಂದು ಹೇಳಿದರು.

ಸಿರೇನ್ ಇಂಡಿಯಾ ಕಂಪನಿ ನಿರ್ದೇಶಕ ಕೋರ್ಶೋ ಅಸಕುರ, ಡಿವೈಎಸ್ಪಿ ಟಿ.ಬಿ.ರಾಜಣ್ಣ, ಇನ್ಸ್‌ಪೆಕ್ಟರ್ ಡಾ.ಎಂ. ಎಲ್.ಶೇಖರ್, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಕಡಕೊಳ ನಾಗರಾಜ್, ಮಂಡಲ ಪಂಚಾಯಿತಿ ಮಾಜಿ ಪ್ರಧಾನ ಆದಿರಾಜಯ್ಯ, ಗ್ರಾಮ ಪಂಚಾಯತ್ ಮಾಜಿ ಸದಸ್ಯ ಶಿವಕುಮಾರ್ ಹಾಜರಿದ್ದರು.

46 ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ

ವಾರ್ಷಿಕೋತ್ಸವ ವಿಶೇಷ ಸಂಚಿಕೆ

ಓದುಗರು ಹಾಗೂ ಜಾಹೀರಾತುದಾರರ ಸೇವೆಯಲ್ಲಿ "ಮೈಸೂರು ಮಿತ್ರ", ಏಪ್ರಿಲ್ 16, 2026ಕ್ಕೆ 46 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 47ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ವರ್ಣರಂಜಿತ ವಿಶೇಷಾಂಕವನ್ನು ಹೊರತರಲಾಗುತ್ತಿದೆ. ಜಾಹೀರಾತುದಾರರಿಗೆ ಇದೊಂದು ಸುಸಮಯ. ಮುದ್ರಣದ ದೃಷ್ಟಿಯಿಂದ ತಮ್ಮ ಜಾಹೀರಾತುಗಳನ್ನು ಏಪ್ರಿಲ್ 10, 2026 ರೊಳಗೆ ನಮಗೆ ತಲುಪುವಂತೆ ಕಳುಹಿಸಬೇಕಾಗಿ ಕಳಕಳಿಯ ಮನವಿ.

ಪ್ರಧಾನ ಕಛೇರಿ

0821-2496522, 2496523, 0821-2496520 (5 ಲೈನುಗಳು)
ಮರಿಯ ಫರ್ನಾಂಡಿಸ್, ಜಾಹೀರಾತು ವ್ಯವಸ್ಥಾಪಕರು:
9448525060 / 8073030835
ಜಾಯ್ ಅಂಥೋಣಿ ಡೂಜ್: 8951668960, ಪ್ರೇಮ: 9880549879

ಕೆ.ಆರ್. ಸರ್ಕಲ್ ಕಛೇರಿ: 0821-2431774
ದೇವರಾಜ ಅರಸ್ ರಸ್ತೆ ಕಛೇರಿ: 0821-2428695

ಕೊಡಗು ಪ್ರಸಾದ್ ಪೂಜಾ ಆರ್ಕೇಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ 9731469871	**ಮಂಡ್ಯ** ಕೆ. ಮೋಹನ್‌ರಾಜ್ 8762960325	**ಶ್ರೀರಂಗಪಟ್ಟಣ** ವಿನಯ್ ಕಾರೇಕುರ ಶ್ರೀರಂಗಪಟ್ಟಣ 9686893234
ಹುಣಸೂರು ಕೆ. ಕೃಷ್ಣ (ಕೆ.ಕೆ.) EWS 204, KHB ಕಾಲೋನಿ, ಹುಣಸೂರು. 9448720626	**ಚಾಮರಾಜನಗರ** ಸಿದ್ಧಲಿಂಗಸ್ವಾಮಿ ಸಿ.ಹೆಚ್.ಆರ್. ಕಾಂಪ್ಲೆಕ್ಸ್, ಸರ್ಕಾರಿ ಆಸ್ಪತ್ರೆ ಎದುರು, ಚಾಮರಾಜನಗರ 9242265657	**ಟಿ. ನರಸೀಪುರ** ಕುಮಾರ್ ಸಾರ್ವಜನಿಕ ಆಸ್ಪತ್ರೆ ರಸ್ತೆ, ಆರ್ಯ ಮಹಲ್ ಛತ್ರದ ಎದುರು, ಟಿ. ನರಸೀಪುರ. 9986719590
ಗುಂಡ್ಲುಪೇಟೆ ಸೋಮಶೇಖರ್ ದ.ರಾ. ಬೇಂದ್ರೆ ನಗರ, ತ್ರಿವೇಣಿ ಲೇಔಟ್,ಗುಂಡ್ಲುಪೇಟೆ. 9845995426	**ಕೆ.ಆರ್. ನಗರ** ಮಂಜುನಾಥ ವಾರ್ಡ್ ನಂ.17, ರಸರನಗರ Extn. ಮುಳ್ಳೂರು ರಸ್ತೆ, ಕೆ.ಆರ್.ಟೌನ್ 9483084345	**ಮಳವಳ್ಳಿ** ಸರಸ್ವತಿ. ವಿ ನಂ.47, 1ನೇ ಕ್ರಾಸ್, ಎನ್.ಇ.ಎಸ್ ಮಳವಳ್ಳಿ ಟೌನ್–571430 9632407806
ಹಾಸನ ಆರ್.ಎನ್.ಸೋಮೇಶ್‌ಗೌಡ ಹೋಲಿ ಚಿಲ್ಡ್ರನ್ ಶಾಲೆ ಹತ್ತಿರ, ಜಯನಗರ, 1ನೇ ಹಂತ, 2ನೇ ಕ್ರಾಸ್, ಹಾಸನ. 7019311936	**ಕುಶಾಲನಗರ** ರಘು ಮೈಸೂರು ಮಿತ್ರ ರಿಪೋರ್ಟರ್ ಮನು ಪ್ರೆಸ್, ಐ.ಬಿ.ರಸ್ತೆ, ಕುಶಾಲನಗರ 9845698401	**ಜಯಪುರ** ಬಿಳಿಗಿರಿ ಜಯಪುರ 9945479288
ಪಿರಿಯಾಪಟ್ಟಣ ವಿರೇಶ್ ಪಿರಿಯಾಪಟ್ಟಣ 8660057128	**ವಿರಾಜಪೇಟೆ** ಮಂಜುನಾಥ ವಿರಾಜಪೇಟೆ 9900949353	**ಯಳಂದೂರು** ವಿ.ನಾಗರಾಜು ಮೈತ್ರಿ ಮೆಡಿಕಲ್ ಬಳೆಪೇಟೆ, ಯಳಂದೂರು 9844349191
ಕೆ.ಆರ್.ಪೇಟೆ (ಶ್ರೀನಿವಾಸ) ಅಗ್ರಹಾರ ಬಾಚಹಳ್ಳಿ, ಕೆ.ಆರ್.ಪೇಟೆ 9449326847, 7022757438	**ಹೆಚ್.ಡಿ.ಕೋಟೆ** ಮಂಜುನಾಥ ಎಸ್. ಹೆಚ್.ಡಿ.ಕೋಟೆ 9483574452	**ಕೆ.ಎಂ.ದೊಡ್ಡಿ** ಸತೀಶ್ ಎ.ಎಲ್ ಕೆ.ಎಂ.ದೊಡ್ಡಿ 9242120338
ಹುಣಸೂರು ರಘು ರಘು ಫೋಟೋ ವರ್ಲ್ಡ್ ಹುಣಸೂರು 9845590889	**ನಂಜನಗೂಡು** ರಂಗಸ್ವಾಮಿ ನಂ.4565, ಕವಿನ ಕಾಲೋನಿ ಹಿಂಭಾಗ, ನೀಲಕಂಠ ನಗರ, ನಂಜನಗೂಡು ಟೌನ್–571301 9901602226	**ಕೊಳ್ಳೇಗಾಲ** ನಾಗೇಂದ್ರ ಸ್ವಾಮಿ ನಂ.7ಎ, 684, 14 ನೇ ಕ್ರಾಸ್, ಬಸವೇಶ್ವರ ನಗರ, ಕೊಳ್ಳೇಗಾಲ 9448576247, 7899849868